ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ದಿನಾಂಕ ೨೨ನೇ ಆಗಸ್ಟ್ ೧೯೮೫ ಶ್ರಾವಣ ೩೧ ೧೯೦೭ ಶಕ

ಸದನವು ವಿಧಾನಸೌಧದಲ್ಲಿರುವ, ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯ ಗಂಟೆ ೧೫ ನಿಮಿಷಕ್ಕೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಪೀಠವನ್ನಲಂಕರಿಸಿದರು.]

ಸಂತಾಪ ಸೂಚನೆ

ಮಾಜಿ ಶಾಸಕರಾದ ಶ್ರೀ ಗೋವಿಂದ ಪಿ. ಒಡೆಯರಾಜ್ ರವರ ನಿಧನದ ಬಗ್ಗೆ.

ಅಧ್ಯಕ್ಷರು.—ಮಾಜಿ ಶಾಸಕರಾದ ಶ್ರೀ ಗೋವಿಂದ ಪಿ, ಒಡೆಯರಾಜ್ ಅವರು ೨೧-೮-೮೫ ರಂದು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು ೬ ಮತ್ತು ೭ನೇ ವಿಧಾನ ಸಭೆಯ ಸದಸ್ಯರಾಗಿ ಕಮಲಾಪುರ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ೧೯೭೦ ರಿಂದ ೧೯೭೬ರ ವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ಸಲುವಾಗಿ ಮಾನ್ಯಸದಸ್ಯರು ಎರಡು ನಿಮಿಷಗಳ ಕಾಲ ಎದ್ದುನಿಂತು ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯಲ್ಲಿ ಸದಸ್ಯರೆಲ್ಲರೂ ಎದ್ದು ನಿಂತು ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಿದರು)

ಈ ಸಭೆಯಲ್ಲಿ ಮಂಡಿಸಿದ ಸಂತಾಪ ಸೂಚನೆಯನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು,

ವಿತ್ತೀಯ ಕಾರ್ಯಕಲಾಪಗಳು

1985-86ನೇ ಸಾಲಿನ ಬೇಡಿಕೆಗಳ ಕ್ರಮ ಸಂಖ್ಯೆ 5, 7 ಮತ್ತು 8ರ ಮೇಲೆ ನಡೆದ ಚರ್ಚೆಗೆ ಮಾನ್ಯ ಮಂತ್ರಿಗಳ ಉತ್ತರ.

ಶ್ರೀ ವೈ.ಕೆ. ರಾಮಯ್ಯ (ರೇಷ್ಮೆ ಇಲಾಖೆಯ ರಾಜ್ಯ ಸಚಿವರು).-ಮಾನ್ಯ ಅಧ್ಯಕ್ಷರೇ, ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆ ಮೇಲೆ ನಡೆದ ಚರ್ಚೆಗೆ ನಾನು ಉತ್ತರ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಈ ರೇಷ್ಮೆಯನ್ನು ಕೆಲವರು ಕೈಗಾರಿಕೆ ಎಂದು ಕರೆಯುತ್ತಾರೆ. ಮತ್ತೆ ಕೆಲವರು ವ್ಯವಸಾಯ ಎಂದು ಕರೆಯುತ್ತಾರೆ. ನನ್ನ ದೃಷ್ಟಿಯಿಂದ ಇದು ವ್ಯವಸಾಯ, ಕೈಗಾರಿಕೆ ಜೊತೆಗೆ ಒಂದು ಕಲೆ ಎಂದು ಭಾವಿಸುತ್ತೇನೆ. ಏಕೆಂದರೆ, ಸೊಪ್ಪನ್ನು ಬೆಳೆದು, ಗೂಡನ್ನು ಮಾಡಿ, ನೂಲನ್ನು ತೆಗೆದು, ಬಟ್ಟೆ ನೇಯುವವರೆಗೆ ಎಲ್ಲಾ ಹಂತದಲ್ಲೂ ಈ ಉದ್ಯಮ ಒಂದು ಕಲೆ. ಸೊಪ್ಪನ್ನು ಕೊಯ್ಯುವುದಾಗಲೀ, ಗೂಡನ್ನು ಸಾಕುವುದಾಗಲೀ, ದಾರವನ್ನು ತೆಗೆಯುವುದಾಗಲೀ, ಸೀರೆಯನ್ನು ನೇಯುವುದಾಗಲೀ, ಈ ಎಲ್ಲಾ ಹಂತಗಳಲ್ಲೂ ಇದು ಒಂದು ಕಲೆ. ಈ ಉದ್ಯಮಕ್ಕೆ ಪ್ರಧಾನವಾಗಿ ಬೇಕಾದ ಅವಶ್ಯಕತೆ ನನ್ನ ದೃಷ್ಟಿಯಿಂದ ಎರಡು. ಭಾರತ ದೇಶದಲ್ಲಿ ಉತ್ಪಾದನೆ ಆಗುವ ಒಟ್ಟಾರೆ ರೇಷ್ಮೆಯಲ್ಲಿ ೧೦೦ಕ್ಕೆ ೬೩ರಷ್ಟು ಭಾಗವನ್ನು ಕರ್ನಾಟಕ ರಾಜ್ಯದಲ್ಲಿಯೇ ಉತ್ಪಾದನೆ

ಮಾಡುತ್ತೇವೆ. ಮಲ್ಬರಿ ಸೊಪ್ಪಿನಿಂದ ಮಾಡುವಂಥ ಸಿಲ್ಕ್‌ನಲ್ಲಿ ೧೦೦ಕ್ಕೆ ೮೦ ರಷ್ಟು ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿದೆ. ಭಾರತ ದೇಶದ ರೇಷ್ಮೆ ಉತ್ಪಾದನೆಯಲ್ಲಿ ಈ ರಾಜ್ಯದ ಭಾಗ ಸಿಂಹಪಾಲು. ಈ ಉದ್ಯಮವನ್ನು ಪ್ರಗತಿಪಥದಲ್ಲಿ ತೆಗೆದುಕೊಂಡು ಹೋಗಬೇಕು ಎಂದು ಯಾರಿಗಾದರೂ ಇಚ್ಛೆ ಇದ್ದರೆ ಪ್ರಬಲವಾಗಿ, ಪ್ರಾಮುಖ್ಯವಾಗಿ ಎರಡು ಕೆಲಸಗಳನ್ನು ಮಾಡಲೇಬೇಕು. ಮೊದಲನೇ ಕೆಲಸ ಮಾನ್ಯ ಮಿತ್ರರಾದ ಪುಟ್ಟಸ್ವಾಮಿಯವರು ಹಾಗೂ ರಾಜೂಗೌಡರು ಹೇಳಿದಹಾಗೆ ರೋಗರಹಿತವಾದ ಮೊಟ್ಟೆಯನ್ನು ರೈತರಿಗೆ ಒದಗಿಸಿಕೊಡುವುದು ನಮ್ಮ ಪ್ರಧಾನ ಕರ್ತವ್ಯ. ಎರಡನೆಯದು, ರೈತ ಬೆಳೆದು ತಂದಂಥ ಗೂಡಿಗೆ ಉತ್ತಮವಾದ ಬೆಲೆಯನ್ನು ಕೊಡುವುದು. ಈ ಎರಡು ಕೆಲಸಗಳನ್ನು ಮಾಡಿದ್ದರೆ ಬಹುಶಃ ಈ ಉದ್ಯಮ ಪ್ರಗತಿಪಥದಲ್ಲಿ ಸಾಗುತ್ತದೆ ಎಂದು ನಾನು ಭಾವಿಸುತ್ತೇನೆ ಮೊಟ್ಟೆಗಳನ್ನು ತಯಾರು ಮಾಡಲಿಕ್ಕೆ, ರೈತರಿಗೆ ಮೊಟ್ಟೆಗಳನ್ನು ಕೊಡಲಿಕ್ಕೆ ನಮ್ಮಲ್ಲಿ ಸರ್ಕಾರದ ವತಿಯಿಂದ ಸದ್ಯದಲ್ಲಿ ೮೩ ಕೋಠಿಗಳಿವೆ. ಸರ್ಕಾರದ್ದು ಅಲ್ಲದೇ ಇರುವಂಥಾದ್ದು ಸುಮಾರು ೬೦೦ ಬಿತ್ತನೆ ಕೋಠಿಗಳಿವೆ. ಇದರ ಜೊತೆಗೆ ನ್ಯಾಷನಲ್ ಸಿಲ್ಕ್ ಸೀಡ್ಸ್ ಕಾರ್ಪೊರೇಷನ್‌ನವರು ಸ್ವಲ್ಪ ಮೊಟ್ಟೆ ಮಾಡುತ್ತಾ ಇದ್ದಾರೆ, ಎಐಆರ್‌ಡಿಯಲ್ಲೂ ಕೂಡ ಮೊಟ್ಟೆಯನ್ನು ತಯಾರು ಮಾಡುತ್ತಾ ಇದ್ದಾರೆ. ಈ ದಿವಸ ಈ ರಾಜ್ಯದ ಅವಶ್ಯಕತೆ ಸುಮಾರು ೧೮ ರಿಂದ ೨೦ ಕೋಟಿ ಮೊಟ್ಟೆಗಳು ಒಂದು ವರ್ಷಕ್ಕೆ ಬೇಕಾಗುತ್ತದೆ. ಇದರಲ್ಲಿ ೫೦ ಭಾಗದಷ್ಟು ಮಾತ್ರ ಒದಗಿಸಲಿಕ್ಕೆ ನಮಗೆ ಶಕ್ತಿ ಇದೆ. ಇನ್ನುಳಿದ ೫೦ ಭಾಗದಷ್ಟು ಪ್ರೈವೇಟ್ ಗ್ರೈನೇಜರ್ಸ್ ಕೊಡಬೇಕಾಗಿದೆ. ಪ್ರಾಮುಖ್ಯವಾಗಿ ಮೊಟ್ಟೆ ಉತ್ಪಾದನೆಯಲ್ಲಿ ವಿಶ್ವಬ್ಯಾಂಕಿನಿಂದ ನೆರವನ್ನು ಪಡೆದ ಯೋಜನೆಯಲ್ಲಿ ಅನೇಕ ಆಧುನಿಕವಾದಂಥ ರೇಷ್ಮೆ ಕೋಠಿಗಳನ್ನು ವ್ಯವಸ್ಥೆ ಮಾಡುತ್ತಾ ಇದ್ದೇವೆ ರಾಜ್ಯದಲ್ಲಿ ಇದರಲ್ಲಿ ಒಂದೊಂದು ಕೋಠಿಗೆ ಒಂದು ಕೋಟಿರೂಪಾಯಿ ಖರ್ಚುಮಾಡಿ ೧೦ ಕಡೆ ಬಿತ್ತನೆ ಕೋಠಿಗಳನ್ನು ಮಾಡುತ್ತಾ ಇದ್ದೇವೆ. ಹೊರದೇಶಗಳಿಂದ ಪಡೆದ ಅನುಭವದ ಆಧಾರದ ಮೇಲೆ ಆಧುನಿಕವಾದ, ವೈಜ್ಞಾನಿಕವಾದ ಈ ಬಿತ್ತನೆ ಕೋಠಿಗಳನ್ನು ಮಾಡುತ್ತಾ ಇದ್ದೇವೆ ಈ ಬಿತ್ತನೆ ಕೋಠಿಗಳು ೧೦ರಲ್ಲಿ ಒಂದನ್ನು ಬಿಟ್ಟು, ಅಂದರೆ ಚನ್ನಪಟ್ಟಣ ಒಂದನ್ನು ಬಿಟ್ಟು ಬಾಕಿ ಎಲ್ಲವೂ ಕೆಲಸವನ್ನು ಮಾಡಲಿಕ್ಕೆ ಸಿದ್ಧವಾಗುತ್ತಿದೆ. ಆದರೂ ಕೂಡ ನಮಗೆ ಬೇಕಾಗುವಂಥ ಪೂರ್ತಿ ಮೊಟ್ಟೆಗಳನ್ನು ತಯಾರು ಮಾಡಲಿಕ್ಕೆ ಸಾಧ್ಯವಿಲ್ಲ, ಪ್ರೈವೇಟ್ ಗ್ರೈನೇಜರ್ಸ್ ಮುಂದುವರಿಯಬೇಕಾಗುತ್ತದೆ. ಅಮೇಲೆ ಮಾನ್ಯ ಮಿತ್ರರು ತಳಿಯ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ನಮ್ಮಲ್ಲಿ ಅನೇಕ ವಿಧವಾದಂಥ ತಳಿಗಳಿವೆ. ಬಹಳ ಪುರಾತನವಾದಂಥ, ಪ್ರಪಂಚದಲ್ಲಿ ಪ್ರಸಿದ್ಧಿಯಾದಂಥ ಮೈಸೂರು ಬಿತ್ತನೆ ತಳಿ ಇದೆ, ಸಿ.ಬಿ. ತಳಿ ಇದೆ. ಈ ತಳಿಯನ್ನೂ ಮತ್ತು ಮೈಸೂರು ತಳಿಯನ್ನು ಮಿಶ್ರಮಾಡಿದ ಮಿಶ್ರತಳಿಯಿಂದ ರೇಷ್ಮೆ ವ್ಯವಸಾಯ ಮಾಡುತ್ತಾ ಇದ್ದೇವೆ. ೧೯೮೦ರ ದಶಕದಲ್ಲಿ ಹೊರ ದೇಶದಿಂದ ಬಂದ ಬೈವೋಲ್‌ಟೈನ್ ತಳಿಯ ಗಂಡು ಚಿಟ್ಟೆಯನ್ನು ಉಪಯೋಗಿಸಿಕೊಂಡು ಈ ರೇಷ್ಮೆ ಉದ್ಯಮದಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಿದೆ. ೧೯೮೧-೮೨ರಲ್ಲಿನ ಉತ್ಪಾದನೆಗಿಂತ ೧೯೮೪-೮೫ರಲ್ಲಿ ಎರಡರಷ್ಟು ಉತ್ಪಾದನೆ ಜಾಸ್ತಿಯಾಗಿದೆ. ಸನ್ಮಾನ್ಯ ಪುಟ್ಟಸ್ವಾಮಿಯವರು ಒಂದು ಮಾತನ್ನು ಹೇಳಿದರು. ಮೈಸೂರಿನಲ್ಲಿರುವಂಥ ಕೇಂದ್ರ ಸಂಶೋಧನಾ ಸಂಸ್ಥೆ ಉತ್ತಮ ತಳಿ ಕೊಡುವುದರಲ್ಲಿ ವಿಫಲವಾಗಿದೆ ಎಂದು ಹೇಳಿದ್ದಾರೆ. ಇದನ್ನು ನಾನು ಸಂಪೂರ್ಣವಾಗಿ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ, ಸಂಪೂರ್ಣವಾಗಿ ಒಪ್ಪಲಿಕ್ಕೂ ಸಾಧ್ಯವಿಲ್ಲ. ಕಾರಣವಿಷ್ಟೆ, ಮೈಸೂರು ಬಿತ್ತನೆಯ ಹೆಣ್ಣು ಚಿಟ್ಟೆಗೆ ಬೈವೋಲ್ಟೀನ್ ಗಂಡು ಚಿಟ್ಟೆಯನ್ನು ಉಪಯೋಗಿಸಿಕೊಂಡು, ಏನು ಮಿಶ್ರತಳಿ ಮಾಡುತ್ತಿದ್ದಾರೋ ಅದರಿಂದ ಉತ್ಪತ್ತಿ ಹೆಚ್ಚಾಗಿದೆ. ಇಷ್ಟರವರೆಗೆ ಬೈವೋಲ್ಟೀನ್ ತಳಿ ಭಾರತದಲ್ಲಿ ರೇಷ್ಮೆ ಉದ್ಯಮದ ಪ್ರಗತಿಗೆ ಸಹಕಾರಿಯಾಗಿದೆ. ಕೇಂದ್ರಸಂಶೋಧನಾ ಸಂಸ್ಥೆಯವರು ಈ ತಳಿಯನ್ನು ಕೊಟ್ಟು ಇಷ್ಟರವರೆಗೆ ನಮಗೆ ಸಹಾಯ ಮಾಡಿದ್ದಾರೆ ಅನೇಕ ಮಿತ್ರರು ಬೈವೋಲ್ಟೀನ್ ತಳಿಯ ಬಗ್ಗೆ ಮಾತನಾಡಿದ್ದಾರೆ. ಈ ತಳಿ ಎಷ್ಟು ಪ್ರತಿಫಲ ಕೊಡಬೇಕಾಗಿತ್ತೋ ಅಷ್ಟು ಪ್ರತಿಫಲ ಕೊಟ್ಟಿಲ್ಲ. ಆರನೇ ಯೋಜನೆಯಲ್ಲಿ ಬೈವೋಲ್‌ಟೈನ್ ರೇಷ್ಮೆ ಉತ್ಪಾದನೆ ೧೦೦೦೦ ಟನ್ ಎಂದು ಏನು ಗುರಿ ಇತ್ತೋ ಆ ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ ಇದು ನಿಜ ಇದಕ್ಕೆ ಅನೇಕ ಕಾರಣಗಳಿವೆ. ಬೈವೋಲ್‌ಟೈನ್ ತಳಿಯೊಳಗೆ ಅನೇಕ ವಿಧವಾಗಿದೆ. ನಮ್ಮಲ್ಲಿ ೪ ವಿಧವಾದ ತಳಿಗಳಿವೆ. ಈ ೪ ತಳಿಗಳು ನಮ್ಮ ರೈತರ ಸ್ಥಿತಿಗೆ ಅನುಗುಣವಾಗಿ, ನಮ್ಮಲ್ಲಿರುವಂಥ ಹವಾಮಾನಕ್ಕೆ, ತೋಟದ ಪದ್ಧತಿಗೆ ಅನುಗುಣವಾಗಿ ಸಂಪೂರ್ಣವಾಗಿ ಸಫಲವಾಗಿಲ್ಲ. ಆದರೆ ಬೈವೋಲ್‌ಟೈನ್ ಬೆಳೆಯುವಂಥ ಅವಶ್ಯಕತೆ ಸಂಪೂರ್ಣವಾಗಿದೆ. ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತದ ರೇಷ್ಮೆ ಉದ್ಯಮ

ಎಫೆಕ್ಟೀವಾಗಿ ಪಾರ್ಟಿಸಿಪೇಷನ್ ಮಾಡಬೇಕಾದರೆ ಬೈವೋಲ್ಟ್ಟೈನ್ ಬೆಳೆಯದೇ ಹೋದರೆ ವಿಧಿಯಿಲ್ಲ. ಪ್ರಶ್ನೆ ಇಷ್ಟೆ, ಈ ಬೈವೊಲ್ಟೀನ್‌ನಲ್ಲಿ ಭಾರತದೇಶದ ಹವಾಮಾನಕ್ಕೆ ಹೊಂದಿಕೊಳ್ಳುವಂಥ ಬೆಳೆಗಾರನ ಪದ್ಧತಿಗೆ, ಇರುವ ಹವಾಮಾನಕ್ಕೆ ಹೊಂದಿಕೊಳ್ಳುವಂಥ ಉತ್ತಮವಾದ ತಳಿಯನ್ನು ಕೊಡುವಂಥ ಜವಾಬ್ದಾರಿ ಸಂಶೋಧನೆ ಮಾಡುತ್ತಿರುವಂಥ ಮಿತ್ರರ ಜವಾಬ್ದಾರಿ, ಅವರು ಮಾಡಬೇಕಾಗಿದೆ. ಈ ಒಂದು ದೃಷ್ಟಿಯಿಂದ ಬೈವೊಲ್ಟೀನ್ ತಳಿಯ ಉತ್ಪಾದನೆ ೬ನೇ ಯೋಜನೆಯಲ್ಲಿ ಗುರಿಯನ್ನು ಮುಟ್ಟಲಿಲ್ಲ. ಆದರೂ ಕೂಡ ಆ ದಿಶೆಯಲ್ಲಿ ನಾವು ಮಾಡುವಂಥ ಪ್ರಯತ್ನ ಹೆಚ್ಚು ಆಗಬೇಕಾಗಿದೆ. ಅದಕ್ಕಾಗಿ ನಾವು ಈಗ ಈ ತಳಿಯನ್ನು ಬೆಳೆಯುವವರಿಗೆ ಸರ್ಕಾರದ ವತಿಯಿಂದ ಅನೇಕ ಸೌಲಭ್ಯಗಳನ್ನು ಮಾಡಿಕೊಡುತ್ತಾ ಇದ್ದೇವೆ. ಒಂದು ಮಾತನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾವು ಗುರಿಯನ್ನು ಸಂಪೂರ್ಣವಾಗಿ ಮುಟ್ಟದೇಹೋದರೂ ಕೂಡ ಬೇರೆ ರಾಜ್ಯಗಳಿಗೆ ಹೋಲಿಸಿಕೊಂಡಾಗ ಕರ್ನಾಟಕರಾಜ್ಯದ ಪ್ರಗತಿ ಗಮನಾರ್ಹವಾಗಿದೆ. ಮತ್ತೊಂದು ಮಾತನ್ನು ಮಾನ್ಯ ಮಿತ್ರರು ಹೇಳಿದ್ದಾರೆ. ಏನೆಂದರೆ. ಈ ಉದ್ಯಮದಲ್ಲಿ ಬಹಳ ಪ್ರಾಮುಖ್ಯವಾಗಿ ಈ ಗೂಡನ್ನು ಬೆಳೆಸ ಬೇಕಾಗಿರುವ ಹುಳುಗಳ ಸಾಕಾಣಿಕೆಗೆ ಬೇಕಾಗುವ ಸೊಪ್ಪನ್ನು ಅಭಿವೃದ್ಧಿ ಮಾಡಬೇಕು ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಅಂದರೆ ನಮ್ಮಲ್ಲಿ ಸುಮಾರು ೧೦೦ಕ್ಕಿಂತಲೂ ಹೆಚ್ಚು ಮಲ್ಬರಿಯ ಕಡ್ಡಿಗಳಿವೆ. ಇತ್ತೀಚೆಗೆ ಕರ್ನಾಟಕದ್ದೇ ಆದ ಎಂ. ೫ ಸೊಪ್ಪಿನ ಕಡ್ಡಿಯ ಬೆಳೆ ಜಾಸ್ತಿ ಇದೆ. ಮಾನ್ಯ ರಾಜೂಗೌಡರೂ ಇದು ಕೇವಲ ೫ ಪರ್ಸೆಂಟ್ ಮಾತ್ರ ಇದೆ ಎಂದು ಹೇಳಿದರು. ಇದು ಸರಿಯಾದ ಅಂಕಿಅಂಶ ಅಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ೪೦ ರಿಂದ ೫೦ ಪರ್ಸೆಂಟ್ ಎಂ. ೫ ಕಡ್ಡಿ ಇದೆ. ಈ ದಿಶೆಯಲ್ಲಿ ೧೧೦ ರಿಂದ ೧೨೦ ಉತ್ತಮವಾದ ಫಾರಂಗಳಿವೆ, ಆ ಫಾರಂಗಳಲ್ಲಿ ಬಿತ್ತನೆ ಗೂಡನ್ನು ಬೆಳೆಯಲಿಕ್ಕೆ ಸೊಪ್ಪನ್ನು ಹೆಚ್ಚಾಗಿ ಉಪಯೋಗಿಸುತ್ತಾ ಇದ್ದೇವೆ. ಈ ರೋಗಗಳ ಬಗ್ಗೆ ಮಾನ್ಯ ಮಿತ್ರರು ಪ್ರಸ್ತಾಪ ಮಾಡಿದರು, ನಿಜ. ನಾನು ಆಗಲೇ ಹೇಳಿದ್ದೇನೆ. ಇದರಲ್ಲಿ ಪ್ರಾಮುಖ್ಯವಾಗಿ ಬೇಕಾಗಿರುವುದು, ರೋಗವಿಲ್ಲದಿರುವ ಮೊಟ್ಟೆ ಕೊಡುವುದು. ಇವತ್ತಿಗೂ ಕೂಡ ನಾವು ಈ ಹುಳುಗಳಿಗೆ ಬರುವಂಥ ರೋಗಗಳನ್ನು ಸಂಪೂರ್ಣವಾಗಿ ತಡೆಯಲಿಕ್ಕೆ ಸಾಧ್ಯವಾಗಿಲ್ಲ. ಇದರಿಂದ ಬಹುಶಃ ರೈತರಿಗೆ ಕೂಡ ನಷ್ಟವಾಗುತ್ತಿದೆ ಈ ದಿಶೆಯಲ್ಲಿ ಸಂಶೋಧನೆಗೆ ನಾವು ಈಗಾಗಲೇ ಅನೇಕ ವಿಧವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡು ಮುಂದುವರಿಸುತ್ತಾ ಇದ್ದೇವೆ, ಇನ್ನು ಈ ಗೂಡಿನ ಬಗ್ಗೆ ಕೂಡ ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ್ದಾರೆ. ೧೯೮೧-೮೨ರ ಅಂಕಿ ಅಂಶಗಳನ್ನು ನಾವು ಪರಿಶೀಲನೆಮಾಡಿದರೆ ಈಗ ನಮ್ಮ ಉತ್ಪತ್ತಿ ಹೆಚ್ಚಾಗಿದೆ. ೧೯೮೧ರಲ್ಲಿ ನಾವು ಉತ್ಪಾದನೆ ಮಾಡಿರುವಂಥಾದ್ದು ೨೮೭೮ ಮೆಟ್ರಿಕ್‌ಟನ್. ೧೯೮೪-೮೫ರಲ್ಲಿ ೪೦೫೮ ಮೆಟ್ರಿಕ್ ಟನ್, ಆದ್ದರಿಂದ ೧೯೮೧ ರಿಂದ ೧೯೮೫ರವರೆಗೆ ಏನೂ ಪ್ರಗತಿಯಾಗಿಲ್ಲ ಎನ್ನುವಂಥ ವಾದವನ್ನು ನಾನು ಒಪ್ಪಲಿಕ್ಕೆ ಸಿದ್ಧನಿಲ್ಲ.

೪,೦೫೮ ಟನ್ ಉತ್ಪಾದನೆ ಹೆಚ್ಚಾಗಿರುವುದು ಪ್ರಗತಿಯನ್ನು ತೋರಿಸುತ್ತದೆ. ಈ ಗೂಡುಗಳ ಮಾರಾಟಕ್ಕಾಗಿ ಅವಶ್ಯಕವಾದಂತಹ ಮಾರುಕಟ್ಟೆಗಳನ್ನು ವಿಶ್ವಬ್ಯಾಂಕ್ ನೆರವಿನಿಂದ ಸುಮಾರು ೪೦ ಮಾರುಕಟ್ಟೆ ಕಟ್ಟಡಗಳನ್ನು ಕಟ್ಟಿ ಮುಗಿಸಿದ್ದೇವೆ. ವಿವಿಧ ರೀತಿಯಲ್ಲಿ ಈ ವ್ಯಾಪಾರ ನಡೆಯಲಿಕ್ಕೆ ಏರ್ಪಾಡನ್ನು ಮಾಡಿದ್ದೇವೆ. ಇನ್ನೊಂದು ಮುಖ್ಯವಾದಂತಹ ಉದ್ಯಮದ ಹಂತವೇನೆಂದರೆ, ಬೆಳೆದ ಗೂಡನ್ನು ನೂಲಾಗಿ ಪರಿವರ್ತನೆ ಮಾಡುವುದು. ಈ ದಿಸೆಯಲ್ಲಿ ಒಂದು ಕಾಲದಲ್ಲಿ ೧೦ ವರ್ಷಗಳ ಹಿಂದೆ ಒಂದು ಕೆ.ಜಿ. ರೇಷ್ಮೆಯನ್ನು ಉತ್ಪಾದನೆ ಮಾಡಲಿಕ್ಕೆ ಸುಮಾರು ೧೫-೧೬ ಕೆ.ಜಿ. ಗೂಡು ಬೇಕಾಗಿತ್ತು. ಇವೊತ್ತು ನಾನು ಸಂತೋಷದಿಂದ ಹೇಳುತ್ತಿದ್ದೇನೆ. ಇದು ೧೯೮೪ರಲ್ಲಿ ೧೦ ಕೆ.ಜಿ. ಬಂದಿದ್ದು, ಇವೊತ್ತು ಜುಲೈ ತಿಂಗಳಲ್ಲಿ ೯ ಕೆ.ಜಿ.ಗೆ ಬಂದಿದೆ. ಇದು ಸಣ್ಣ ಸಾಧನೆ ಏನೂ ಇಲ್ಲ. ನಿಜ ಜಪಾನಿನಲ್ಲಿ ೫-೬ ಕೆ.ಜಿ. ಗೂಡಿಗೆ ಒಂದು ಕೆ.ಜಿ.ಸಿಲ್ಕನ್ನು ಮಾಡುತ್ತಿದ್ದಾರೆ. ನಮ್ಮಲ್ಲಿರುವ ಸವಲತ್ತು, ಸೌಲಭ್ಯ ಮತ್ತು ಅವಶ್ಯಕವಾಗಿ ಬೇಕಾಗಿರುವ ವೈಜ್ಞಾನಿಕವಾದಂಥ ಹಿನ್ನೆಲೆಯಲ್ಲಿ ೧೫-೧೬ ಕೆ.ಜಿ ಯಿಂದ ೧೦-೯ ಕೆ.ಜಿ.ಗೆ ತಂದಿರುವಂಥಾದ್ದು ಗಮನಾರ್ಹವಾದ ಸಾಧನೆ ಎಂದು ನಾನು ಭಾವಿಸುತ್ತೇನೆ. ಈ ನೂಲಿನ ವ್ಯಾಪಾರ ಬಹಳ ತಮಾಷೆಯಾದ ವ್ಯಾಪಾರ. ಒಂದು ಕಾಲದಲ್ಲಿ ಈ ನೂಲನ್ನು ಮಾರಬೇಕಾದರೆ ಗೂಡು ಬಿಚ್ಚುವಂತಹವರು ಬೆಂಗಳೂರಿಗೆ ತೆಗೆದುಕೊಂಡು ಬಂದು ಕೋಠಿಗಳಿಗೆ ಮಾರುತ್ತಿದ್ದರು. ಹಿಂದಿನ ಸರ್ಕಾರವನ್ನು ಅಭಿನಂದಿಸಿದರೆ, ನನ್ನ ಮಿತ್ರರು ಆಗಲಾದರೂ ಸಂತೋಷಪಡುತ್ತಾರೆಂದು ಭಾವಿಸಿದ್ದೇನೆ. ವ್ಯವಸ್ಥಿತವಾದ ರೀತಿಯಲ್ಲಿ ಮಾರಾಟ ಮಾಡಲಿಕ್ಕೆ, ಸಿಲ್ಕ್ ಎಕ್ಸ್‌ಚೇಂಜ್ ಅನ್ನು ಹಿಂದಿನ ಸರ್ಕಾರದವರು ಮಾಡಿದ್ದಾರೆ. ಇದರಿಂದಾಗಿ ನೂಲು

ಬಿಚ್ಚುವವರಿಗೆ ಒಂದು ವರಪ್ರದವಾಗಿದೆ. ಅದು ಸುವ್ಯವಸ್ಥಿತವಾಗಿ ನಡೆಯುತ್ತಿದೆ. ತಾವು ಉತ್ಪಾದನೆ ಮಾಡುವ ಗೂಡಿನ ಲೆಕ್ಕ ತೆಗೆದುಕೊಂಡರೆ ಎಕ್ಸ್‌ಚೇಂಜ್‌ಗೆ ಪೂರ್ತಿ ರೇಷ್ಮೆ ಬರುವುದಿಲ್ಲ. ೧೦೦ಕ್ಕೆ ೬೫ರಷ್ಟು ಬರುತ್ತದೆ. ಉಳಿದದ್ದು ಹೊರಗಡೆ ವ್ಯಾಪಾರ ಆಗುತ್ತದೆ. ಈ ನೂಲಿನ ಬೆಳೆ ಒಂದೊಂದು ಸಾರಿ ಇದ್ದಕ್ಕಿದಂತೆ, ಗಗನಕ್ಕೆ ಹೋಗುತ್ತದೆ. ಒಂದೊಂದು ಸಾರಿ ಪಾತಾಳಕ್ಕೆ ಮುಟ್ಟುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡು ಈ ಒಂದು ವ್ಯತ್ಯಾಸವನ್ನು ತಡೆಯುವುದಕ್ಕಾಗಿಯೇ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಎಂಬ ಸಂಸ್ಥೆಯನ್ನು ಹಿಂದಿನ ಸರ್ಕಾರದವರು ಮಾಡಿದ್ದಾರೆ. ರೇಷ್ಮೆ ನೂಲಿನ ಬೆಲೆ ಹೆಚ್ಚು ಆಗದ ಹಾಗೆ ಮತ್ತು ಕಡಿಮೆಯಾಗದ ಹಾಗೆ ನೋಡಿಕೊಳ್ಳುವುದೇ, ಇದರ ಮೂಲ ಉದ್ದೇಶವಾಗಿದೆ. ಈಗಾಗಲೇ ನಾವು ಸುಮಾರು ೨೫ ಪರ್ಸೆಂಟ್ ಎಷ್ಟು ರೇಷ್ಮೆ ನೂಲನ್ನು ಈ ಸಂಸ್ಥೆಯಿಂದ ವ್ಯಾಪಾರ ಮಾಡಿ, ಬೆಲೆ ಜಾಸ್ತಿಯಾದಾಗ ಅದನ್ನು ನಾವು ಕಡಿಮೆ ಪರ್ಚೇಸ್ ಮಾಡುತ್ತೇವೆ. ಬೆಲೆ ಕಡಿಮೆ ಆದಾಗ ಜಾಸ್ತಿ ಫರ್ಚೇಸ್ ಮಾಡುವುದರಿಂದ, ಯಾರು ಈ ರೇಷ್ಮೆ ನೂಲನ್ನು ಬಿಚ್ಚುತ್ತಾರೋ ಅವರಿಗೆ, ಫ್ಲಕ್ಚುಯೇಷನ್ ಆಗುತ್ತಿಲ್ಲ. ಅವರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವುದರಲ್ಲಿ ನಾವು ಸಫಲರಾಗಿದ್ದೇವೆಂದು ಭಾವಿಸುತ್ತೇನೆ. ದಾರದ ಜೊತೆಗೆ ಸ್ಪನ್ ಸಿಲ್ಕ್ ಎನ್ನುವುದನ್ನು ಮಾಡುತ್ತಿದ್ದೇವೆ. ಇದನ್ನು ಚನ್ನಪಟ್ಟಣದ ಮಿಲ್‌ನಲ್ಲಿ ತಯಾರು ಮಾಡುತ್ತಿದ್ದೇವೆ. ಇದು ಬಹುಶಃ ರಾಷ್ಟ್ರದಲ್ಲಿಯೇ ಅತಿ ದೊಡ್ಡ ಸ್ಪನ್ ಸಿಲ್ಕ್ ಮಿಲ್ ಎಂದು ಕಾಣುತ್ತದೆ. ಇದರಲ್ಲಿ ಉತ್ಪತ್ತಿಯನ್ನು ಗುಣಾತ್ಮಕವಾಗಿ, ಹೆಚ್ಚಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರದವರು ವಿಶ್ವ ಬ್ಯಾಂಕ್ ನೆರವಿನಿಂದ ಸುಮಾರು ೧೫ ಕೋಟಿ ರೂ.ಗಳನ್ನು ಖರ್ಚು ಮಾಡಿ, ಆಧುನೀಕರಣವನ್ನು ಮಾಡಿದ್ದಾರೆ. ಈ ಇಲಾಖೆಯಲ್ಲಿ ಆಗಬೇಕಾಗಿರುವ ಕೆಲಸಗಳ ಬಗ್ಗೆ ಮತ್ತು ಇರುವ ಸಮಸ್ಯೆಗಳ ಬಗ್ಗೆ ಸಂಶೋಧನೆಗಾಗಿ ಮೈಸೂರಿನಲ್ಲಿ ಕೇಂದ್ರ ಸರ್ಕಾರದವರು ಸುವ್ಯವಸ್ಥಿತವಾದ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಿದ್ದಾರೆ. ಇದರ ಜೊತೆಗೆ ಕರ್ನಾಟಕ ಸರ್ಕಾರದವರು ತಲಘಟ್ಟಪುರದಲ್ಲಿ ಒಂದು ಉತ್ತಮವಾದಂತಹ ಸಂಶೋಧನಾ ಕೇಂದ್ರವನ್ನು ಮಾಡಿದ್ದೇವೆ. ಇವೆರಡರ ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಈ ಉದ್ಯಮಕ್ಕೆ ಸಂಬಂಧಪಟ್ಟಂತೆ, ಅನೇಕ ಸಮಸ್ಯೆಗಳನ್ನು ಕುರಿತು ಸಂಶೋಧನೆ ನಡೆದಿದೆ. ಮೊಟ್ಟೆಗಳನ್ನು ತಯಾರು ಮಾಡಲಿಕ್ಕೆ ಅವಶ್ಯಕವಾದಂತಹ ಬಿತ್ತನೆ ಗೂಡುಗಳನ್ನು ಕರ್ನಾಟಕಕ್ಕೆ ಅಷ್ಟೆ ಅಲ್ಲ, ಇಡೀ ರಾಷ್ಟ್ರಕ್ಕೆ ಕೊಡುವಂತಹ ಹೆಮ್ಮೆ ಕರ್ನಾಟಕದ್ದು. ಮೈಸೂರಿನ ಬಿತ್ತನೆ ಗೂಡು ಏನಿದೆ, ಇದರ ಉತ್ಪತ್ತಿ ೧೭೦ ಕೋಟಿ. ಕರ್ನಾಟಕಕ್ಕೆ ಬೇಕಾದದ್ದು ೭೦ ಕೋಟಿ ಅಷ್ಟೇ ಎಂದು ಕಾಣುತ್ತದೆ. ಉಳಿದದ್ದನ್ನು ಸ್ವಲ್ಪ ಮಟ್ಟಿಗೆ ಹೊರರಾಜ್ಯಕ್ಕೆ ಕಳುಹಿಸುತ್ತಿದ್ದೇವೆ. ಅವರೂ ತೆಗೆದುಕೊಂಡು ಹೋಗುತ್ತಿದ್ದಾರೆ. ಅದಕ್ಕೆ ಯಾವುದೇ ವಿದವಾದಂತಹ ನಿರ್ಬಂಧವಿಲ್ಲ. ಈ ಕ್ಷೇತ್ರದಲ್ಲಿ ಬೆಳೆದಂತಹ ಗೂಡು ನೂಲು ತೆಗೆಯಲಿಕ್ಕೆ ಇಷ್ಟೊಂದು ಉತ್ತಮವಾದುದಲ್ಲ. ಈ ಗೂಡನ್ನು ಬೆಳೆಗಾರರು ಒತ್ತಾಯ ಪೂರ್ವಕವಾಗಿ ಬೆಳೆಯುತ್ತಿದ್ದಾರೆ. ಕಾನೂನು ಚೌಕಟ್ಟಿನಲ್ಲಿ ತಂದು, ನಾವೇ ಮೊಟ್ಟೆ ಕೊಟ್ಟು, ಅದೇ ತಳಿಯನ್ನು ಅವನು ಬೆಳೆಯಬೇಕು. ಬೇರೆ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಿಲ್ಲವೆಂದು ಮಾಡಿದ್ದೇವೆ, ಬೆಳೆದಂತಹ ತಳಿ ಬಿತ್ತನೆ ಗೂಡಿಗೆ ಹೋಗದಿದ್ದರೆ, ಅವನಿಗೆ ಬೆಲೆ ಸಿಗುವುದಿಲ್ಲ. ೧೫-೨೦ ರೂಪಾಯಿಗಳಿಗೆ ಮಾರುವಂತಹ ಸಂದರ್ಭ ಬರುತ್ತದೆ. ಅಂತಹ ಸಂದರ್ಭದಲ್ಲಿ ಅವರ ಹಿತವನ್ನು ಗಮನದಲ್ಲಿಟ್ಟುಕೊಂಡು. ೧೯೮೨ರಿಂದ ಎಂದು ಕಾಣುತ್ತದೆ, ಸರ್ಕಾರ ಒಂದು ಕೆ.ಜಿ.ಗೆ ೫ರೂ.ನಂತೆ ಬೋನಸ್ ಕೊಡುವಂತಹ ಉತ್ತಮ ಕಾರ್ಯವನ್ನು ಮಾಡಿತು. ಐದು ರೂಪಾಯಿಗಳು ಜಾಸ್ತಿ ಕೊಡಬೇಕೆಂಬ ಕೂಗು ಇತ್ತು. ಅದನ್ನು ಈ ತಿಂಗಳ ಒಂದನೆಯ ತಾರೀಖಿನಿಂದ ೧೦ ರೂಪಾಯಿ ಏರಿಸಿದ್ದೇವೆ. ಬಹುಶಃ ಸನ್ಮಾನ್ಯ ಮಿತ್ರರಾದ ಶ್ರೀ ವೀರಪ್ಪಮೊಯಿಲಿಯವರ ಒಂದು ಮಾತಿಗೆ ನನ್ನ ಉತ್ತರ ಹೇಳದಿದ್ದರೆ, ನನ್ನ ಉತ್ತರ ನೀರಸವಾಗುತ್ತೆಂದು ನಾನು ಭಾವಿಸುತ್ತೇನೆ. ನಮ್ಮ ದೇಶದಲ್ಲಿ ಬೆಳೆಯುವಂತಹ ಕಚ್ಚಾ ರೇಷ್ಮೆ ಏನಿದೆ ಇದರ ಜೊತೆಗೆ ಹೊರದೇಶದಿಂದ ರೇಷ್ಮೆಯನ್ನು ತರಿಸುವಂತಹ ಪರಿಪಾಠ ಇದೆ. ಇದನ್ನು ನಾನು ವಿರೋಧಿಸಿದ್ದೆ. ಇವತ್ತೂ ವಿರೋಧಿಸಿಲ್ಲ. ಈ ದೇಶಕ್ಕೆ ೧೯೮೦ರಲ್ಲಿ ಯಾವಾಗ ೨೫೦ಟನ್ ರೇಷ್ಮೆಯನ್ನು ವಿರೋಧ ಮಾಡಿ ತರಿಸಿದರು, ಆಗಿನಿಂದ, ಇವತ್ತಿನವರೆಗೂ ವಿರೋಧ ಮಾಡುತ್ತಿದ್ದೇನೆ. ಈ ವಿರೋಧ ಮಾಡುವ ನಿಲುವು ಸರಿಯಾದುದಲ್ಲ ಎನ್ನುವ ಭಾವನೆ ನನಗೆ ಬರುವ ಹಾಗೆ, ಯಾರಾದರೂ ಮನವರಿಕೆ ಮಾಡಿಕೊಡುವುದಾದರೆ, ಆ ನಿಲುವನ್ನು ಬದಲಾವಣೆ ಮಾಡಿಕೊಳ್ಳಲಿಕ್ಕೆ ನಾನು ಸಿದ್ಧನಿದ್ದೇನೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ಹಿರಿಯ ಸದಸ್ಯರಾದ ಶ್ರೀ ಕೆ. ಹೆಚ್. ಶ್ರೀನಿವಾಸ್ ರವರು ಮತ್ತು ಶ್ರೀ ಎಂ. ವೀರಪ್ಪಮೋಯಿಲಿಯವರು ಮಾತನಾಡುತ್ತಾ ಮಂತ್ರಿಗಳಿಗೆ ಕಿವಿ ಮಾತು

ಹೇಳಿದರು. ವಿರೋಧಪಕ್ಷದಲ್ಲಿದ್ದಾಗ ನೀವು ಸಾಮಾನ್ಯವಾದ ಒಬ್ಬ ಪ್ರಜೆಯಾಗಿ ರಾಷ್ಟ್ರದ ಕೆಲವೊಂದು ವಿಷಯದ ಬಗ್ಗೆ ಏನು ನಿಲುವನ್ನು ತಳೆದಿದ್ದಾರೋ. ಅಧಿಕಾರಕ್ಕೆ ಬಂದಾಗ ಆ ನೀತಿಯಿಂದ ಓಡಿ ಹೋಗ ಬೇಡಿ ಬದಲಾವಣೆಯಾಗಬೇಡಿ ಮತ್ತು ಅಧಿಕಾರ ಮುಖ್ಯವಲ್ಲ ಎನ್ನುವ ಬುದ್ಧಿವಾದವನ್ನು ಕೊಟ್ಟಿದ್ದಾರೆ. ನಾನು ಸಂಪೂರ್ಣವಾಗಿ ಈ ವಾದವನ್ನು ಒಪ್ಪುತ್ತೇನೆ. ಈ ದೇಶಕ್ಕೆ ರೇಷ್ಮೆ ಆಮದು ಮಾಡಿಕೊಳ್ಳುವಂತಹ ನೀತಿಯನ್ನು ನಾನು ಮಂತ್ರಿಯಾಗಿ ವಿರೋಧಿಸಿಲ್ಲ. ಇದು ಕೇವಲ ಪಕ್ಷದ ಸರ್ಕಾರದ ನಿಲುವು ಅಲ್ಲ. ಯಾವುದೇ ಸರ್ಕಾರ ಕರ್ನಾಟಕದಲ್ಲಿದ್ದಾಗ ಈ ನಿಲುವನ್ನು ತಳೆದಿದೆ. ೧೯೮೩ರ ಈ ಸದನದಲ್ಲಿ ನಡೆದ ಚರ್ಚೆಯ ಸಮಯದಲ್ಲಿ ಯಾವುದನ್ನು ನಮ್ಮ ಮಿತ್ರರಾದ ಶ್ರೀ ವೀರಪ್ಪಮೊಯಿಲಿಯವರು ಮಾಡಬೇಕೆಂದು, ಸರ್ಕಾರಕ್ಕೆ ಒತ್ತಾಯ ಮಾಡಿದರೋ, ಯಾವುದನ್ನು ಮಾಡಲಿಲ್ಲವೆಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರೋ, ಅದನ್ನು ನಾನು ಮಾಡಲಿಕ್ಕೆ ಹೊರಟರೆ, ರಾಮಯ್ಯನವರು ಮಾಡಿದ್ದಾರೆಂದು ಹೇಳುತ್ತಾರೆ ಬಹುಶಃ ನನ್ನ ಬೆನ್ನು ತಟ್ಟುತ್ತಾರೆಂದು ನನಗೆ ಶಹಭಾಸ್‌ಗಿರಿ ಕೊಡುತ್ತಾರೆಂದು ಭಾವಿಸಿದ್ದೆ. ಆದರೆ ಅವರು ಶಹಭಾಸ್‌ಗಿರಿ ಕೊಡಲಿಲ್ಲ.

೧೯೮೩ರಲ್ಲಿ ನಾನು ಎಷ್ಟು ಕಟುವಾಗಿ ಆವೊತ್ತು ಈ ಸದನದಲ್ಲಿ ಖಂಡಿಸಿದ್ದೇನೆ ಎಂದರೆ ಮಾನ್ಯ ಸದಸ್ಯರು ಕೇಳಿದ ಮೇಲೆ ಅವರು ಒಂದು ಮಾತನ್ನು ಹೇಳಿದ್ದಾರೆ. ಅದನ್ನು ಗುರುತಿಸಿ ಇದು ಒಂದು ಅನಿಷ್ಟ ಪರಂಪರೆ ಎಂದು ನಾನು ಈ ಸಭೆಯ ಸದಸ್ಯನಾಗಿ ಕರೆದಿದ್ದೇನೆ. ಶಾಸಕರಾದ ಮಾನ್ಯ ವೀರಪ್ಪ ಮೊಯ್ಲಿ ಅವರು ಮಾತನಾಡುತ್ತಾ "ಕರ್ನಾಟಕ ರಾಜ್ಯದ ರೇಷ್ಮೆ ಬೆಳೆಗಾರರ ಬಗ್ಗೆ ಕಳಕಳಿ ಏನು ಪ್ರಸ್ತಾಪ ಮಾಡಿದ್ದಾರೆ". ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅಷ್ಟೇ ಅಲ್ಲ ಮುಂದುವರಿದು ನೀವು ಈ ವಿಚಾರವನ್ನು ಕೇಂದ್ರ ಸರ್ಕಾರಕ್ಕೆ ಬರೆದಿದ್ದರೂ ?... ಈ ಸರ್ಕಾರ ಬಂದು ೯ ತಿಂಗಳಾಯಿತಲ್ಲಾ ಈ ಸರ್ಕಾರ ಎಷ್ಟು ಸಲ ಈ ನೀತಿಯನ್ನು ವಿರೋಧಿಸಿ ಕೇಳಿದ್ದೀರಿ. ಎಂದು ಹೇಳಿದ್ದಾರೆ. ಇವರು ಡೆಲ್ಲಿಗೆ ಹೋಗಿ ಈ ವಿಷಯದಲ್ಲಿ ಯಾವುದೇ ಹೇಳಿಕೆಯನ್ನು ನೀಡುವುದನ್ನು ನಾನು ಪತ್ರಿಕೆಯಲ್ಲಿ ನೋಡಿಲ್ಲ. ಹಾಗೆಯೇ ಮುಂದುವರೆದು ಹೇಳಿದ್ದಾರೆ ನಾನು ಈ ಬಗ್ಗೆ ಸ್ಪಷ್ಟವಾಗಿ ಕಾಗದ ಬರೆದಿದ್ದೇನೆ. ಈ ಆಮದು ನೀತಿಯಿಂದ ನಮ್ಮ ರಾಜ್ಯದಲ್ಲಿ ರೇಷ್ಮೆ ಬೆಳೆಗಾರರಿಗೆ ತೊಂದರೆಯುಂಟಾಗಿದೆ ಅವರಿಗೆ ರಕ್ಷಣೆ ನೀಡಬೇಕೆಂದು ನಾನು ವಿರೋಧ ಪಕ್ಷದ ನಾಯಕನಾಗಿಯೂ ಕೂಡ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇನೆ. ಆದರೆ ಈ ಸರ್ಕಾರ ಎಷ್ಟು ಪತ್ರ ವ್ಯವಹಾರ ಮಾಡಿದೆ ಎಂದು, ಮತ್ತು ತಾವು ಸ್ವಲ್ಪ ಒಳಹೊಕ್ಕು ನೋಡಬೇಕಾಗಿದೆ ಎಂದು ಹೇಳಿದ್ದಾರೆ. ನಾನು ಈ ನೀತಿಯನ್ನು ಕಟುವಾಗಿ ವಿರೋಧಿಸಿದ ಸಂದರ್ಭದಲ್ಲಿ ನನ್ನ ಮಿತ್ರರಾದ ಶ್ರೀ ವೀರಪ್ಪಮೊಯ್ಲಿ ಅವರು ಈ ರೀತಿಯಾದ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನು ಅದನ್ನು ಗಮನದಲ್ಲಿಟ್ಟುಕೊಂಡು ಅವರು ನನಗೆ ಶಹಭಾಸ್‌ಗಿರಿ ಕೊಡುತ್ತಾರೆಂದು ಭಾವಿಸಿದ್ದೆ. ಈ ಒಂದು ನೀತಿಯ ಬಗ್ಗೆ ರಾಜಕೀಯವಾಗಿ ಅರ್ಥ ಬರುವ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಅದಕ್ಕೆ ನಾನು ಅವರಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಈ ಒಂದು ಐಟಮ್‌ನಲ್ಲಿ ಕಮಿಟ್‌ಮೆಂಟ್ ಇದೆ. ಈ ಉದ್ಯೋಗದ ಬಗ್ಗೆ ನನಗೆ ಇರುವ ಕಮಿಟ್‌ಮೆಂಟ್‌ನಲ್ಲಿ ಮಂತ್ರಿಯಾಗಿ ಅವರೊಂದಿಗೆ ರಾಜಿ ಮಾಡಿಕೊಳ್ಳುವುದಕ್ಕೆ ಸಿದ್ಧನಿಲ್ಲ. ಬೈವೋಲ್ಟೀನ್ ತಳಿ ಬಗ್ಗೆ ಇರಬಹುದು ಅಥವಾ ಆಮದು ನೀತಿಯ ಬಗ್ಗೆ ಇರಬಹುದು, ಮತ್ತೆ ಯಾವುದೇ ವಿಷಯದ ಬಗ್ಗೆಯೂ ಇರಬಹುದು. ಇದನ್ನು ವಿಮರ್ಶೆ ಮಾಡಿದಾಗ ಹುಟ್ಟಿದಾಗಿನಿಂದ ಬಂದಿರತಕ್ಕಂಥ ವಂಶಪಾರಂಪರ್ಯವಾಗಿ ಬಂದಿರತಕ್ಕಂಥ ನನ್ನ ಅನಿಸಿಕೆಗಳನ್ನು ಈ ಸೆಟಲ್ಡ್ ವ್ಯೂಸ್ ಏನು ಇದೆ ಅದರ ಬಗ್ಗೆ ಮಂತ್ರಿಯಾದ ತಕ್ಷಣ ಬದಲಾಯಿಸಲು ಸಿದ್ಧನಿಲ್ಲ. ಆದ್ದರಿಂದ ಇದನ್ನು ರಾಜಕೀಯಕ್ಕಾಗಿ ಅಥವಾ ಕೇಂದ್ರ ಸರ್ಕಾರವನ್ನು ದೂಷಣೆ ಮಾಡಬೇಕೆನ್ನುವ ಉದ್ದೇಶದಿಂದ ಈ ಮಾತನ್ನು ಹೇಳಿಲ್ಲ, ನನಗೆ ಇವುಗಳಲ್ಲಿ ಅಷ್ಟೊಂದು ಭ್ರಮೆ ಇಲ್ಲ, ನನಗೆ ಭ್ರಮೆ ಇದೆ, ವ್ಯಕ್ತಿ ಬಗ್ಗೆ ಭ್ರಮೆ ಇದೆ. ಆದರೆ ಪಕ್ಷ ಪಂಗಡಗಳ ಭ್ರಮೆ ಇಲ್ಲ. ನನಗೆ ಗೊತ್ತಿದೆ. ಕೇಂದ್ರ ಸರ್ಕಾರದಲ್ಲಿ ಕೆಲಸ ಮಾಡುವವರೆಲ್ಲರೂ ಸಾಮಾನ್ಯರು ರಾಜ್ಯ ಸರ್ಕಾರದಲ್ಲಿ ಕೆಲಸ ಮಾಡುವ ನಾವು ಅಸಮಾನ್ಯರು ಅನ್ನುವ ಭ್ರಮೆ ಇಲ್ಲ. ಈ ದೃಷ್ಟಿಯಿಂದ ನಾನು ಹೇಳಿಕೆ ನೀಡಿಲ್ಲ. ಇದರ ಜೊತೆಗೆ ನಾನು ಈ ಒಂದು ವಿಷಯವನ್ನು ಬಿಟ್ಟು ನನ್ನ ಮಿತ್ರರ ಒಲವನ್ನು ಪಡೆಯಲಿಕ್ಕೆ ಪ್ರಯತ್ನಪಡುತ್ತೇನೆ. ಈ ರಾಷ್ಟ್ರಕ್ಕೆ ರೇಷ್ಮೆಯನ್ನು ನಾವು ಮೂರು ರೀತಿಯಿಂದ ಆಮದು ಮಾಡಿಕೊಳ್ಳುತ್ತೇವೆ. ಒಂದು ರಿಪ್ಲೆನಿಷ್‌ಮೆಂಟ್ ಸ್ಕೀಂ. ಈ ರಿಪ್ಲೆನಿಷ್‌ಮೆಂಟ್ ಸ್ಕೀಂ ಬಗ್ಗೆ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಈ ಈ ಆಮದು ನೀತಿಯ ಬಗ್ಗೆ ಈ ಅನಿಷ್ಟ ನೀತಿಯನ್ನು ವಿರೋಧ ಮಾಡಿದಾಗ ೧೦೦ಕ್ಕೆ ೧೦ ಪರ್ಸೆಂಟ್ ಇದ್ದದ್ದು ೨೦ ಪರ್ಸೆಂಟ್ ೩೦ ಪರ್ಸೆಂಟ್ ಆಗಿದೆ. ಎರಡನೇದು ಅಡ್ವಾನ್ಸ್ ಲೈಸನ್ಸ್ ಫೀಸ್ ೫೦

ಪರ್ಸೆಂಟ್ ಇದೆ ಇದರ ಜೊತೆಗೆ ಅಡ್‌ಹಾಕ್ ಅರೇಂಜ್‌ಮೆಂಟ್‌ನಲ್ಲೂ ಕೂಡ ಇದನ್ನು ಮಾಡುತ್ತಿದ್ದೇವೆ. ೧೯೮೩-೮೪ ರ ಒಂದು ಲೆಕ್ಕದ ಪ್ರಕಾರ ೧೧೦೦೦ ಟನ್ ಇಷ್ಟು ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಇದಕ್ಕೆ ಏನು ಕಾರಣ? What are the reasons for import? Whetherthese reasons are genuine? ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ ನಮ್ಮ ದೇಶಕ್ಕೆ ಬೇಕಾಗಿರತಕ್ಕಂಥ ರೇಷ್ಮೆ ೬ ಸಾವಿರ ಟನ್. ನಾವು ಉತ್ಪಾದನೆ ಮಾಡತಕ್ಕಂಥ ರೇಷ್ಮೆ ೬೯೦೦ ಟನ್. ಇದಕ್ಕೆ ಎರಡು ಕಾರಣಗಳನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಮೊದಲನೇ ಕಾರಣ ರೇಷ್ಮೆ ಬೆಲೆಯನ್ನು ನಿಯಂತ್ರಿಸುವುದಕ್ಕೆ.

1). to arrest the price of the silk, 2). to have the superior quality of silk for the manufacture of export quality fabrics. ಈ ಎರಡು ಮೂಲ ಕಾರಣಗಳನ್ನು ಕೊಟ್ಟಿದ್ದಾರೆ. ನನಗೆ ಈವೊತ್ತಿನ ದಿವಸ ಬರ್ಡನ್ ಆಫ್ ಪ್ರೂಫ್, ನನ್ನ ಶ್ರಮ ಏನೆಂದರೆ ಈ ಎರಡು ಕಾರಣಗಳೂ ಸಹ ನಿಜವಾಗಿದೆಯೆ? These reasons are genuine based on relevant requirement or need of thiscountry. ಎನ್ನುವುದನ್ನು ನೋಡಬೇಕಾಗಿ ಮೊಟ್ಟಮೊದಲನೆಯದಾಗಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ ಈ ದೇಶದಿಂದ ಹೊರದೇಶಕ್ಕೆ ರಫ್ತು ಆಗುವಂಥಾದ್ದು ನಮ್ಮ ಮಾನ್ಯ ಸದಸ್ಯರು ಹೇಳಿದ ಹಾಗೆ ನಮಗೆ ಫಾರಿನ್ ಎಕ್ಸ್‌ಛೇಂಜ್ ಅರ್ನ್ ಮಾಡಿಕೊಡುವಂಥ ರೇಷ್ಮೆ ಯಾವುದೂ ಈ ರೇಷ್ಮೆ ಅಲ್ಲ. ಯಾವುದನ್ನು ರೇಷ್ಮೆ ಎಂದು ತರಿಸುತ್ತೇವೋ ಆದರಿಂದ ಮಾಡುತ್ತಾ ಇಲ್ಲ. ನಾವು ಹೊರದೇಶಕ್ಕೆ ಕಳುಹಿಸುವ ಬಟ್ಟೆ ಸ್ಪನ್ ಸಿಲ್ಕ್ ಟಸ್ಸಾರ್ ಸಿಲ್ಕ್, ಡುಪಿಯಾನ್ ಸಿಲ್ಕ್ ಮಾನ್ಯ ಸದಸ್ಯರಾದ ಕೆ.ಎಚ್. ಶ್ರೀನಿವಾಸ್‌ರವರು ಹಾಕಿಕೊಳ್ಳುವಂಥ ಬಟ್ಟೆ ಏನು ಇದೆ, ಆ ಬಟ್ಟೆಯನ್ನು ತಯಾರು ಮಾಡುವುದಕ್ಕೆ ಅವಕಾಶ ಇದೆ ಅಂಥ ಬಟ್ಟೆಯನ್ನು ಹೊರದೇಶಕ್ಕೆ ಕಳುಹಿಸುತ್ತಿದ್ದೇವೆ. ಯಾವ ಕಾರಣಕ್ಕಾಗಿ ಹೊರದೇಶದಲ್ಲಿ ಇದಕ್ಕೆ ಬೇಡಿಕೆ ಇದೆ ಎಂದರೆ not for fine silk but for the rough course there is great demand at abroad, ಇದು ನನ್ನ ಹೇಳಿಕೆ ಅಲ್ಲ. ಭಾರತ ಸರ್ಕಾರದ ಎಕ್ಸ್‌ಪೋರ್ಟ್‌ನವರು ಯಾವ ವಿಧವಾದ ಬಟ್ಟೆಯನ್ನು ಕಳುಹಿಸಿದ್ದಾರೆ ಅನ್ನುವುದರ ಬಗ್ಗೆ ಅವರೇ ಹೇಳಿದ್ದಾರೆ. ಅದು ಈ ರೀತಿ ಇದೆ.—

"Today, India exports a wide veriety of silks to western Europe and the United States, especially as exclusive furnishing fabrics. Tie and Dye Ikat weaves from Andhra and orissa are in great demend for drapes, unholstary, cushions and fashion garments. Boutiques and fashion houses, designers and interior decorators have the advantage of gatting custom-woven fabrics in the designs, weaves and colours of their choice."

ಆದುದರಿಂದ ಹೊರದೇಶಕ್ಕೆ ಕಳುಹಿಸುವಂಥ ಉತ್ತಮವಾದ ಬಟ್ಟೆಗಳ ತಯಾರಿಕೆಗಾಗಿ ಹೊರದೇಶದಿಂದ ರೇಷ್ಮೆಯನ್ನು ತರಿಸಿಕೊಳ್ಳುತ್ತಿದ್ದೇವೆ ಎಂದು ಏನು ಒಂದು ವಾದವನ್ನು ಮಾಡಿದಗೋ ಅದು ಸಕಾರಣವಾದುದಲ್ಲ. ಎಂದು ಹೇಳುತ್ತೇನೆ, ಇನ್ನೊಂದು ವಿಷಯವನ್ನು ತಮ್ಮ ಮುಂದೆ ಇಡುತ್ತೇನೆ. The price rise of raw silk for the last 10 years is 78%. ಈ ರೇಷ್ಮೆ ಬೆಲೆಯನ್ನು ಹೆಚ್ಚು ಆಗದ ಹಾಗೆ ಕಡಿಮೆ ಆಗದ ಹಾಗೆ To arrest the price ಆಮದು ನೀತಿಯಿಂದ ಮಾಡಿಕೊಳ್ಳುತ್ತಿದ್ದೇವೆಂದು ಹೇಳುತ್ತಿದ್ದಾರೆ. ಎಷ್ಟು ಬೆಲೆ ಜಾಸ್ತಿಯಾಗಿದೆ ಮಾನ್ಯ ಅಧ್ಯಕ್ಷರೇ? ಈ ರೇಷ್ಮೆ ಬೆಲೆ ಏನು ಇದೆ ಇದನ್ನು ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಹೊರದೇಶದಿಂದ ತರಿಸಿಕೊಳ್ಳುವ ರೇಷ್ಮೆಗೆ ಬೆಲೆ ಜಾಸ್ತಿ ಇದೆ ಎನ್ನುವುದು ಸರಿಯಲ್ಲ. The genuine increase of other articles is 10 to11%. ಹಾಗೆಯೇ ತಮಗೆ ಇನ್ನೂ ಉದಾಹರಣೆಗಳನ್ನು ಕೊಡುತ್ತೇನೆ. ಕಾರ್ ಬೆಲೆಯನ್ನೇ ತೆಗೆದುಕೊಳ್ಳಿ ೧೯೭೫-೭೬ ರಲ್ಲಿ ೨೭ ಸಾವಿರ ಬೆಲೆ ಇದ್ದುದು ಈವೊತ್ತು ೮೦_೯೦ ಸಾವಿರ ಆಗಿದೆ. Can this country afford to import the Cars? ಇದೇ ರೀತಿ ಬ್ಯಾಟರ

ಪ್ರೈಸ್ ತೆಗೆದುಕೊಳ್ಳಿ, ಅದು ೧೦ ವರ್ಷದ ಹಿಂದೆ ೩೦೦-೪೦೦ ರೂಪಾಯಿಗಳು ಇದ್ದದ್ದು ಇವೊತ್ತು ೧೪೦೦ ರೂಪಾಯಿಗಳೂ ಆಗಿದೆ. ಹಾಗೆಯೇ ಎಲ್ಲಾ ಬೆಲೆಗಳೂ ಇವೊತ್ತು ಜಾಸ್ತಿಯಾಗಿವೆ. ಟೈರ್ ಬೆಲೆ ತೆಗೆದುಕೊಳ್ಳಿ, ೧೯೭೫-೭೬ರಲ್ಲಿ ೫೦೦ ರೂಪಾಯಿಗಳು ಇದ್ದದ್ದು ಇವೊತ್ತು ೧೦೦೦ ರೂಪಾಯಿಗಳು ಆಗಿದೆ. ಹಾಗೆಯೇ ಬೇರೆ ಸಾಮಾನುಗಳ ಬೇರೆ ವಸ್ತುಗಳ ಬೆಲೆಯೂ ಸಹ ಜಾಸ್ತಿಯಾಗಿವೆ. ಇವುಗಳಿಗೆ ಯಾವ ಒಂದು ನೀತಿಯನ್ನು ಅಳವಡಿಸುತ್ತಾ ಇಲ್ಲವೋ ಈ ಕಚ್ಚಾ ರೇಷ್ಮೆಗೆ ಮಾತ್ರ ಈ ಒಂದು ನೀತಿಯನ್ನು ಏತಕ್ಕೆ ಅಳವಡಿಸಬೇಕು? ಹಾಗೆ ಅಳವಡಿಸದೇ ಇದ್ದುದರಿಂದ ಇವೊತ್ತಿನ ದಿವಸ ರೇಷ್ಮೆ ಬೆಲೆ ಹೆಚ್ಚಾಗಿರುವುದಕ್ಕೆ ಕಾರಣ. ರೇಷ್ಮೆಯನ್ನು ಆಮದು ಮಾಡಿಕೊಳ್ಳುವ ಒಂದು ನೀತಿ ಸಕಾರಣವಾದುದಲ್ಲ ಎಂದು ನಾನು ಭಾವಿಸಿಕೊಂಡು ಇದರ ಬಗ್ಗೆ ಅಂಕಿಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾನ್‌ಫುಡ್ ಆರ್ಟಿಕಲ್ಸ್ ಯಾವಯಾವುದು ಎಷ್ಟೆಷ್ಟು ಜಾಸ್ತಿಯಾಗಿದೆ ಎನ್ನುವುದನ್ನು ಹೇಳಬಯಸುತ್ತೇನೆ. ಫೈಬರ್ಸ್ ಒಂದರಿಂದ ೭, ಕಾಟನ್ ರಾ ೨೭೮.೩, ಜೂಟ್ ರಾ ೨೭೩.೩, ಮೆಸ್ತಾ ೧೭೧, ವುಲ್ ರಾ ೨೮೪. ಛೇಂಜ್ ಆಫ್ ಪರ್ಸೆಂಟೇಜ್ ೩೩.೬, ೧೭.೮, ೧೨೨.೯, ೧೧೯.೨, ೯, ೫ ಪರ್ಸೆಂಟ್ ೬.೮ ಪರ್ಸೆಂಟ್. ಆದರೆ ಸಿಲ್ಕ್ ರಾ ನಲ್ಲಿ ೨.೨. So, the hike in the price of silk is only 2.2%,

This information I got from the bureau Keeping this in view. I don't agree with any authority of the Central or State Government that they can check the prices of silk by importing raw-silk. Have they succeeded in arresting the prices? ಯಾವ ಉದ್ದೇಶ ಸಾಧನೆ ಮಾಡುವುದಕ್ಕಾಗಿ ಇವರು ೧೧೦೦೦ ಟನ್‌ಗಳಷ್ಟು ಕಚ್ಚಾ ರೇಷ್ಮೆಯನ್ನು ಆಮದು ಮಾಡಿಕೊಂಡರೋ ಆ ಉದ್ದೇಶ ಸಾಧನೆಯಾಯಿತೇ? ಅಥವಾ ಇಲ್ಲವೇ ಎಂಬುದನ್ನು ಸಹ ನಾವು ನೋಡಬೇಕಾಗಿದೆ. ನಾನು ಈ ಮಾತನ್ನು ಮಾನ್ಯ ಸದಸ್ಯರಿಗೆ ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಬಗ್ಗೆ ನಾನು ಒಂದು ಹೇಳಿಕೆಯನ್ನು ಈಗ ಕೊಟ್ಟಿರುವುದನ್ನು ಹೇಳುತ್ತಿಲ್ಲ. ನಾನು ಮಂತ್ರಿಯಾಗುವುದಕ್ಕಿಂತ ಮುಂಚೆ ಒಂದು ಹೇಳಿಕೆಯನ್ನು ಕೊಟ್ಟಿದ್ದೆ. ಆ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದಾದರೆ ದಿನಾಂಕ ೧೦-೫-೧೯೮೨ರಲ್ಲಿ ರೇಷ್ಮೆ ನಿಯಂತ್ರಣದ ಬಗ್ಗೆ ಕೇಂದ್ರ ಸರ್ಕಾರದವರು ಒಂದು ಮಾತನ್ನು ಹೇಳಿದ್ದಾರೆ ಅದರ ಪೂರ್ತಿ ಸಾರಾಂಶವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಆದರೂ ಅದರ ಒಂದು ಹೆಡ್‌ಲೈನ್ ಮಾತ್ರ ಹೇಳುತ್ತೇನೆ. ಅದೇನೆಂದರೆ ರೇಷ್ಮೆ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಸೀಮಿತ ಎಂದು ಹೇಳಿ ಅದರಲ್ಲಿ ಕೇಂದ್ರ ಸರ್ಕಾರದವರು ರೇಷ್ಮೆಯನ್ನು ಆಮದು ಮಾಡಿಕೊಳ್ಳುವಲ್ಲಿ ಪುನರ್‌ವಿಮರ್ಶಿಸಲು ಯೋಚನೆ ಮಾಡುತ್ತಿದೆ. The Government of India has come to the conclusion that they cannot arrest the price of silk by importing raw-silk ದೆಹಲಿಯ ಪತ್ರಿಕೆಯೊಂದರಲ್ಲಿ ವರದಿಯಾಗಿರುವುದನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೆ. ನಾವು ರೇಷ್ಮೆಯನ್ನು ಆಮದು ಮಾಡಿಕೊಂಡು ರೇಷ್ಮೆ ಬೆಲೆಯನ್ನು ನಿಯಂತ್ರಿಸಲು ಸಾಧ್ಯವಿಲ್ಲವೆಂದು ಇದರಿಂದ ನಮಗೆ ವ್ಯಕ್ತವಾಗುತ್ತದೆ. ಇದಕ್ಕೆ ಏನು ಕಾರಣ? ಹೊರದೇಶದಿಂದ ತರಿಸಿಕೊಂಡಂತಹ ರೇಷ್ಮೆಯಿಂದ ನಾವು ಬಟ್ಟೆಯನ್ನು ತಯಾರು ಮಾಡಿ ಹೊರದೇಶಕ್ಕೆ ಕಳುಹಿಸಿ ಕೊಡುವುದರಲ್ಲಿ ಎಷ್ಟು ಸತ್ಯ ಇದೆ. ಎಷ್ಟು ನಿಜ ಇದೆ ಎಂಬುದು ತಮಗೆ ಗೊತ್ತಾಗಿದೆ. ಈ ಮಾತನ್ನು ನಾನು ಹೇಳಿದ್ದರೆ ತಮಗೆ ರಾಜಕೀಯ ಎಂದು ಅನ್ನಿಸುತ್ತಿತ್ತು. I will quote here the words of the Central Silk Board Chairman as to whether the imported silk is used. Deccan Hearld dated 10-4-1982.

> "The prospects of silk industry growth in the country this year have become dark-thanks to the policy of the Union Government which has doubled the replenishment against exports to 20% of the total value of exports."

Now it is 30%. ಅದರಲ್ಲಿರತಕ್ಕಂಥ ಒಂದು ನ್ಯೂನತೆಯ ಬಗ್ಗೆ ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರು ಹೊರದೇಶದಿಂದ ರೇಷ್ಮೆಯನ್ನು ತರಿಸಿಕೊಂಡು ಅದರಿಂದ ಬಟ್ಟೆಯನ್ನು

ತಯಾರು ಮಾಡಿ ಹೊರ ದೇಶಕ್ಕೆ ಕಳುಹಿಸಿಕೊಡುವುದಾದರೆ ನಮ್ಮದೇನು ಅಭ್ಯಂತರವಿಲ್ಲವೆಂದು ಹೇಳಿದರು. ಇದು ಆಗಿದೆಯೇ? ಇಲ್ಲ. The quantum of silk exported was Rs. 50 crores.

> "According to the Chairman of the Central Silk Board not even Rs. 10 Lakhs worth of imported silk had been utilised in the exported material. On the other hand practically the entire quantity had been sold in local black market."

It is for these reasons I am opposing the import policy of the country. Have we created an authority to check. There is no authority. ಹೊರದೇಶದಿಂದ ಬರುವಂತಹ ರೇಷ್ಮೆ ಯಾವುದು ? ಎಷ್ಟು ಬರುತ್ತಿದೆ ? ಅದರ ನಿಜವಾದ ಪರಿಸ್ಥಿತಿ ಏನು ಎನ್ನುವುದು ತಿಳಿದುಕೊಳ್ಳುವುದಕ್ಕೆ ಹೋಗಿಲ್ಲ. ಆಮದು ರೇಷ್ಮೆ ಎಷ್ಟು ಬಂದಿದೆ ಎನ್ನುವ ಲೆಕ್ಕಾಚಾರ ಕೂಡ ಇಲ್ಲ. ಈ ಕಾರಣಕ್ಕಾಗಿಯೇ ನಾನು ರೇಷ್ಮೆಯ ಆಮದು ನೀತಿಯನ್ನು ವಿರೋಧ ಮಾಡಿದ್ದು. Assuming for the argument sake the silk price goes up to 800 to 1000. ರೇಷ್ಮೆ ಬೆಲೆಯನ್ನು ಹೆಚ್ಚು ಮಾಡಿಕೊಂಡಿದ್ದರ ಸಂಬಂಧದಲ್ಲಿ ಒಂದು ಮಾತನ್ನು ಹೇಳುವುದಾದರೆ ಯಾವುದೇ ಸರ್ಕಾರವಾಗಲಿ, ಅಥವಾ ಯಾವ ವ್ಯಕ್ತಿಯೇ ಆಗಲಿ ಯಾವುದಾದರೊಂದು ನಿರ್ಧಾರವನ್ನು ತೆಗೆದುಕೊಳ್ಳುವಾಗ ಇದರಿಂದ ಯಾರಿಗೆ ಹೆಚ್ಚು ಅನುಕೂಲ ? ಯಾರಿಗೆ ಕಡಿಮೆ ಅನುಕೂಲವಾಗುತ್ತದೆ ಎಂಬುದನ್ನು ನಿರ್ಧರಿಸಬೇಕು. ಯಾರು ರೇಷ್ಮೆ ಬಟ್ಟೆಯನ್ನು ಹೆಚ್ಚಾಗಿ ಕೊಂಡುಕೊಳ್ಳುತ್ತಾರೆ ? ಇದರಿಂದ ಯಾರಿಗೆ ತೊಂದರೆಯಾಗುವುದಿಲ್ಲ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ,

According to the report of consumer purchase of Textiles 1980, Marketing Research Wing, Textile Committee and the Indian Institute of Management, Bangalore in its study of Market for Silk Fabrics 1985, Silk Purchases are predominantly concentrated in the upper income group. In the sample study undertaken, 90% of the silk is consumed by income groups, whose incomes are above Rs. 6,000 per annum. ಈ ಬಗ್ಗೆ ತಮಗೆ ನಾನು ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ಈ ದೇಶದಲ್ಲಿ ಸಾವಿರಾರು ರೂಪಾಯಿಗಳು ಮತ್ತು ಕೋಟ್ಯಾಂತರ ರೂಪಾಯಿಗಳ ಆದಾಯವಿರುವವರು ಮಾತ್ರ ರೇಷ್ಮೆ ಬಟ್ಟೆಯನ್ನು ಕೊಂಡುಕೊಳ್ಳುತ್ತಾರೆ. ಸಾಮಾನ್ಯ ಜನ ರೇಷ್ಮೆ ಬಟ್ಟೆಯನ್ನು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ. ರೇಷ್ಮೆ ಬೆಲೆಯನ್ನು ಜಾಸ್ತಿ ಮಾಡಿದರೆ ಇದರಿಂದ ಯಾರಿಗೆ ಲಾಭ ? ನಾವು ಏನಾದರೂ ಸ್ವಲ್ಪ ಅನುಕೂಲ ಮಾಡಿಕೊಡುವುದಾದರೆ ನೂಲು ತೆಗೆಯುವವರಿಗೆ, ರೇಷ್ಮೆ ವೀವರ್ಸ್‌ಗೆ, ರೀಲರ್ಸ್‌ಗೆ. ಇವರಿಗೆ ಅನುಕೂಲ ಮಾಡಿಕೊಡುವುದಾದರೆ ನಾನು ಸ್ವಾಗತ ಮಾಡುತ್ತೇನೆ. ಇವರಿಗೆ ಅನುಕೂಲವಾಗುವುದಿಲ್ಲ. Let them sacrifice to whom ? for and for the benefit of the poor let them sacrifice. Let the haves sacrifice their little mite for the have-nots. ರಾಗಿ, ಜೋಳ ಭತ್ತ ಇತ್ಯಾದಿ ಬೆಲೆಯನ್ನು ಒಪ್ಪಿಕೊಂಡಂತೆ ಇದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. Because raw-silk is not an essential commodity. Another argument I would like preface is that raw silk is not an essential commodity to import but the import continues. Lakhs and Lakhs of weavers will d e because the price of silk has come down. ಮತ್ತೊಂದು ವಿಷಯವನ್ನು ಕೊನೆಯದಾಗಿ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ಚೈನಾ ದೇಶದಲ್ಲಿ ನಮ್ಮ ರೇಷ್ಮೆಗೆ ಎಷ್ಟು ಬೆಲೆ ಕೊಡುತ್ತಿದ್ದಾರೆ ಎನ್ನುವ ಬಗ್ಗೆ ತಾವು ಮಾಡಬೇಕು. What is the

prevailing price in their own Market ? ಚೈನಾ ದೇಶದ ಮಾರುಕಟ್ಟೆಯಲ್ಲಿ ಒಂದು ಕೆ.ಜಿ. ರೇಷ್ಮೆಗೆ ೬೫ ಡಾಲರ್ಸ್ ಕೊಟ್ಟರೆ ಅವರು ನಮಗೆ ಕೊಡುವುದು ಕೇವಲ ೨೭ ಡಾಲರ್ ಮಾತ್ರ. With the malafide intention they are doing it. It is not because of love and affection to this country, but to destroy the Silk Industry in this country. With this malafide intention they are giving at this rate ಏನು ಈ ದೇಶದ ಮೇಲೆ ಉಕ್ಕಿ ಹರಿಯುತ್ತಿರುವ ಪ್ರೀತಿಯಿಂದಲೋ, ಪ್ರೇಮದಿಂದಲೋ ಕೊಡುತ್ತಿದ್ದಾರೆಯೋ ? ಏತಕ್ಕೆ ಕೊಡುತ್ತಿದ್ದಾರೆ ? ಇದಕ್ಕಾಗಿ ಅಲ್ಲ. ಈ ದೇಶದ ರೇಷ್ಮೆ ಉದ್ದಿಮೆಯನ್ನು ಸಂಪೂರ್ಣವಾಗಿ ನಾಶ ಮಾಡುವ ಕೆಟ್ಟ ಉದ್ದೇಶದಿಂದ ಅವರು ಮಾಡುತ್ತಿದ್ದಾರೆ. This is the intention. They want to check the growth of this industry in this country because they know that India is the competetor in the World Market, This is the intention. ಏತಕ್ಕೆ ಎಂದು ತಾವು ಹೇಳಿ. ಇವತ್ತು ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಏನಾಗಿದೆ. ಇವತ್ತು ಜಪಾನ್‌ನಲ್ಲೂ ರೇಷ್ಮೆ ಉತ್ಪತ್ತಿ ಕಡಿಮೆಯಾಗಿದೆ. ಕೊರಿಯಾದಲ್ಲೂ ಅಷ್ಟು ಹೆಚ್ಚಾಗಿ ಉತ್ಪಾದನೆಯಾಗುತ್ತಿಲ್ಲ. ಇವತ್ತು ಅಂತರ ರಾಷ್ಟ್ರೀಯ ರೇಷ್ಮೆ ಮಾರುಕಟ್ಟೆಯಲ್ಲಿ ಯಾರಿಗಾದರೂ ಸ್ಪರ್ಧೆ ಮಾಡುವ ಶಕ್ತಿ ಇದ್ದರೆ ಅದು ಭಾರತ ರೇಷ್ಮೆ ಮಾತ್ರ. ಇದು ಚೈನಾದವರಿಗೆ ಚೆನ್ನಾಗಿ ಗೊತ್ತಿದೆ. ಮುಂದೆ ಬರುವಂತಹ ಸ್ಪರ್ಧೆಯನ್ನು ನಿಲ್ಲಿಸುವ ದುರುದ್ದೇಶದಿಂದ, ಈ ರಾಷ್ಟ್ರದ ರೇಷ್ಮೆ ಉದ್ಯಮವನ್ನು ನಾಶ ಮಾಡುವ ದುರುದ್ದೇಶದಿಂದ ಅವರು ಅವರ ಮಾರುಕಟ್ಟೆಗಿಂತ ಕಡಿಮೆ ಬೆಲೆಗೆ ನಮ್ಮ ಮಾರುಕಟ್ಟೆಗೆ ಕಳುಹಿಸುತ್ತಿದ್ದಾರೆ. They want to spoil and beat the industry in our county only. They do not want us to come to the World Market at all. They know pretty well that India is the main competetor. ಕೊನೆಗೂ ಈ ವಿಷಯದಲ್ಲಿ ಒಂದೇ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜಕೀಯ ಉದ್ದೇಶದಿಂದ ರಾಮಯ್ಯನವರು ಈ ಮಾತನ್ನು ಹೇಳಿದ್ದಾರೆ ಎಂದಾಗ ನಿಜವಾಗಿಯೂ ನೋವಾಗಿದೆ. ಸನ್ಮಾನ್ಯ ಹಿರಿಯ ಸದಸ್ಯರು ಈಗಲಾದರೂ ಈ ವಿಷಯದ ಹಿನ್ನೆಲೆಯಲ್ಲಿ ನನಗಿರುವಂತಹ ಕಳಕಳಿಯಿಂದ ನೋವನ್ನು ಅರಿತುಕೊಳ್ಳುತ್ತಾರೆ ಎಂದು ಭಾವಿಸಿಕೊಂಡು. Whether we are passing for the first time or after the advent of the Janatha Party Government in Karnataka. ಸ್ವಾಮಿ ೨೫೦ ಟನ್ ರೇಷ್ಮೆಯನ್ನು ಯಾವಾಗ ೧೯೮೦ರಲ್ಲಿ ಆಮದು ಮಾಡಿಕೊಂಡಿರೋ ನನ್ನ ಬಗ್ಗೆ ಹೇಳುವುದಾದರೆ. ಅವತ್ತಿನಿಂದಲೂ ಈ ಹೋರಾಟ ಶುರುವಾಯಿತು. This is the case pending before the Central Government since a very long time. So far as I am concerned, I am not arguing for my clients sake, I am arguing for the sake of weavers of Karnataka State. I will continue to struggle and fight till the end of my life, ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂದಿನವರೆಗೆ, ನಾನು ಆಗಲೇ ಹೇಳಿದಹಾಗೆ ಈ ಒಂದು ನಿಲುವು ಸರಕಾರದ ಹಿತಕ್ಕೆ, ರಾಜ್ಯದಲ್ಲಿ ಈ ಉದ್ದಿಮೆಯಲ್ಲಿ ತೊಡಗಿರುವ ಸಾಮಾನ್ಯ ಜನರ ಹಿತಕ್ಕೆ ಧಕ್ಕೆಯಾಗುತ್ತದೆ, ತೊಂದರೆಯಾಗುತ್ತದೆ ಎಂದು ಯಾರಾದರೂ ನನಗೆ ಮನವರಿಕೆ ಮಾಡಿಕೊಡುವುದಿಲ್ಲ I do not allow things to go against the poor sericulturists, weavers and other persons engaged in this industry. I will fight till the end of my life. ಇದನ್ನು ನಾನು ಮಂತ್ರಿಯಾಗಿ ಆದರೂ ಇರ ಬಹುದು ಅಥವಾ ನನ್ನ ವೈಯಕ್ತಿಕ ಜೀವನದಲ್ಲಿ ಏನಾದರೂ ಕೂಡಾ ನಾನು ಇದನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಎಂ.ಸಿ. ಬಸಪ್ಪನವರು ಇವತ್ತು ನಮ್ಮ ಮುಂದೆ ಇಲ್ಲ. ಅವರನ್ನು ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಹಿಂದೆ ಕಾಂಗ್ರೆಸ್ ಪಕ್ಷದ ಶಾಸಕರಾಗಿದ್ದಾಗ ಅವರು ಸೆಂಟ್ರಲ್ ಗೌರ್ನಮೆಂಟ್‌ಗೆ ಒಂದು ಕಾಗದ ಬರೆದಿದ್ದರು. I would like to read only the relevant portion of Sri M.C. Basappa's letter, which says thus

" I Therefore, request you kindly to take up the matter with the appropriate authorities in Government of India and put an end to import of raw silk and to fix a flooring price

ಉಳಿದದ್ದೆಲ್ಲಾ ನಾನು ಓದುವುದಕ್ಕೆ ಇಷ್ಟಪಡುವುದಿಲ್ಲ. ಇದು ಒಂದು. What was our stand when the Janatha Government was in power at the Centre? I did not hesitate even to write the Central Government at that time. ರಾಜ್ಯದ ರೇಷ್ಮೆ ಸಂಘದ ಅಧ್ಯಕ್ಷನಾಗಿ ನಾನು ಪತ್ರ ಬರೆದಿದ್ದೇನೆ. ಆಗ ಜಾರ್ಜ್ ಫರ್ನಾಂಡಿಸ್‌ರವರು ಮಂತ್ರಿಗಳಾಗಿದ್ದರು ಎಂದು ಕಾಣುತ್ತದೆ. The relevant portion is as follows

The reported decision of the Government of India to import sizable quantities of Chiense silk in exchange for Indian tobacco under a barter trade agreement has caused considerable shock and anxiety to all those engaged in the silk industry. The silk industry of Karnataka state which produces more than 80% of the silk produced in the country and provides employment to more than two million people in rural parts and has the potential to develop further to provide employment to many lakhs of people in rural parts is likely damaged by import of Chinese silk".

ಭಾರತ ಸರಕಾರ ಆಗಿಂದಾಗ್ಗೆ ಚೀನಾ ಮತ್ತು ಜಪಾನ್ ದೇಶಗಳಿಂದ ಕಚ್ಚಾ ರೇಷ್ಮೆಯನ್ನು ಆಮದು ಮಾಡಿಕೊಳ್ಳದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ಪಡೆಯಲು ತಜ್ಞರ ಅಭಿಪ್ರಾಯ ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. This is on 6th July 1978, when the Janatha Party was in power at the Centre.

I have also written to all Members of Parliament, which says

" The Karnataka State Silk Association appeals to you as representatives of the people of Karnataka to kindly take note of the this matter and put pressure on the Government of India to ban import of raw silk at least from hereafter I hope you will take necessary action in the matter".

This is the letter written to all M.P.S. This is dated 25th January 1982. We have also requested the Central Government again on 16th April 1982, ಇದರ ಜೊತೆಗೆ ದಕ್ಷಿಣ ಭಾರತದ ಎಲ್ಲಾ ರೇಷ್ಮೆ ಮಂತ್ರಿಗಳಿಗೂ ೩೧–೭–೮೨ರಲ್ಲಿ ಪತ್ರ ಬರೆದಿದ್ದೇನೆ. ಒಂದನ್ನು ಮಾತ್ರ ಓದುವುದಕ್ಕೆ ಇಷ್ಟಪಡುತ್ತೇನೆ. This is the letter written to Andhra Pradesh Minister Sri B. Sambaiah.

" The traders lobby in the national level is so much influential that they succeeded in pursuing the Central Government to inport the raw silk which is detrimental to the interest of the growers in India. I hope you know these matters better than me being the Head of the State in Sericulture We are also thinking to organise the growers throughout the country to protect the interests of rearers effectively. I want your kind co-operation in this regard".

೧೯೮೧ರಲ್ಲಿ, ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ರೇಷ್ಮೆ ಉದ್ದಿಮೆಗೆ ಸಂಬಂಧಪಟ್ಟಂತೆ ಅನೇಕ ಶಾಸಕರ ಸಭೆಯನ್ನು ಕರೆದು ಬೆಂಗಳೂರಿನಲ್ಲಿ ಈ ರೀತಿ ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ.

> " The proposal for import of raw silk from other countries has caused considerable shock and anxiety to all those engaged in the silk industry. The silk industry of Karnataka State which produces more than 80% of the silk produced in the country and provides employment to more than two million people in rural parts and has the potential to develop further to provide employment to many lakhs of people in rural parts is likely to be damaged by import of silk and therefore the meeting of MLAs of Sericultural areas of the Karnataka State urges the Karnataka and Central Government to abondon any proposal for import of silk from other countries in the interest of the silk industry of the country"

ಇದರ ಜೊತೆಗೆ ಸನ್ಮಾನ್ಯ ಮೊಯಿಲಿಯವರು ಅರ್ಥ ಮಂತ್ರಿಗಳಾಗಿದ್ದಾಗ ಅವರನ್ನೂ ಕೂಡಾ ನಾನು ಬಿಟ್ಟಿಲ್ಲ, ಅವರಿಗೂ ಪತ್ರ ಬರೆದಿದ್ದೇನೆ. ೪ ನವೆಂಬರ್ ೧೯೮೧ರಲ್ಲಿ ಮುಖ್ಯಮಂತ್ರಿಗಳಿಗೆ, ಮತ್ತು ತಮಗೆ ಇಬ್ಬರಿಗೂ ಪತ್ರವನ್ನು ಬರೆದಿದ್ದೇನೆ.

> " In the interest of the sustained growth of the silk industry of the country in general and of the silk industry of the Karnataka State in particular, the Karnataka Silk Association urges the Government of India and Government of Karnataka to abandon the proposal regarding import of raw silk from any country as the import of silk will be definitely suicidal to the growath of the silk industry of the country".

ಇದು ಅವರು ಅರ್ಥ ಮಂತ್ರಿಯಾಗಿದ್ದಾಗ ಬರೆದಂಥ ಪತ್ರ. ಇನ್ನು ೧೯೮೧ ರಲ್ಲಿ *i.e.*, on 13 11-1961 ಒಂದು ಪತ್ರ ಬರೆದಿದ್ದೇನೆ. This is the letter written to the Secretary to Government, Commerce and Industries Department, the contents are as follows.

> " Under the circumstances, import of silk from any country will be suicidal to the growth of silk industry of the country. Hence this request for moving the Government of India not to import silk from any country",

ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಹೆಮ್ಮೆಯಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಸಾರ್ವಜನಿಕ ಕ್ಷೇತ್ರಕ್ಕೆ ಸೇವೆ ಮಾಡುವುದಕ್ಕೆ ಹೊರಟ ನಾವು ಸಾಧ್ಯವಾದಾಗಲೆಲ್ಲಾ ಅನೇಕ ವಿಷಯದಲ್ಲಿ ರಾಷ್ಟ್ರದ, ರಾಜ್ಯದ ಪ್ರತಿನಿಧಿಗಳಾಗಿ ಜನಸಾಮಾನ್ಯರ ಹಿತವನ್ನು ರಕ್ಷಿಸುವುದರಲ್ಲಿ ಸಹಾ ಸಫಲರಾಗಿದ್ದೇವೆ ಎಂಬುದನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ೧೯೮೧ರಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ರೇಷ್ಮೆ ಬಿಕ್ಕಟ್ಟು ಚೀನಾಂಬರದ ಎಡವಟ್ಟು ಎನ್ನುವ ಒಂದು ಅಗ್ರ ಸಂಪಾದಕೀಯವನ್ನು ಬರೆದಿರುತ್ತದೆ, ನಾನು ಸದನದ ಹೆಚ್ಚು ಕಾಲವನ್ನು ತೆಗೆದುಕೊಳ್ಳಲಿಕ್ಕೆ ಆಗದೇ ಇರುವುದರಿಂದ ಅದನ್ನು ಪೂರ್ತಿ ಓದುವುದಕ್ಕೆ ಆಗುವುದಿಲ್ಲ. ಈ ಆಮದು ನೀತಿಯನ್ನು ಸ್ಪಷ್ಟವಾಗಿ ತನ್ನ ಸಂಪಾದಕೀಯದಲ್ಲಿ ಪ್ರಜಾವಾಣಿ ಪತ್ರಿಕೆ ವಿರೋಧಿಸಿದೆ. ೧೧-೫-೧೯೮೨ರಲ್ಲಿ ರೇಷ್ಮೆ ಆಮದಿನ ವಿರುದ್ಧ ರೈತರ ಚಳುವಳಿ, ರೇಷ್ಮೆ ನೂಲಿನ ಆಮದು ವಿರೋಧ ಆಂದೋಲನ ಆಮದು ಮಾಡಿದರೆ ಬಡ ಬೆಳೆಗಾರನಿಗೆ ಗೋರಿ.

೧೮-೪-೧೯೮೨ರಲ್ಲಿ ಪ್ರಜಾವಾಣಿ ಆ ಬಗ್ಗೆ ಅಗ್ರ ಲೇಖನಗಳನ್ನು ಬರೆದು ಈ ವಿಷಯವನ್ನು ಸಂಪೂರ್ಣವಾಗಿ ತಡೆಗಟ್ಟಬೇಕು ಎಂದು ಹೇಳಿದ್ದಾರೆ. ಜೊತೆಗೆ ರಾಜಕಾರಿಣಿಗಳನ್ನು ತೆಗಳಿದ್ದಾರೆ. ಯಾರೇ ಆಗಲಿ ಈ ರಾಜ್ಯದಲ್ಲಿರುವ ಈ ಉದ್ದಿಮೆಯ ಬಗ್ಗೆ ಚಿಂತನೆಯನ್ನು ಮಾಡದೆ ಈ ನೀತಿಯನ್ನು ವಿರೋಧ ಮಾಡುವುದಕ್ಕೆ ಯಾವುದೋ ಒಂದು ಕಾರಣದಿಂದ ಹಿಂಜರಿಯುತ್ತಿದ್ದಾರೆಂದು ನಮ್ಮೆಲ್ಲರನ್ನೂ ಸೇರಿಸಿ ತೆಗಳಿದ್ದಾರೆ. "ರೇಷ್ಮೆ ಹೊಸ ಆಮದು ನೀತಿ ರೈತರಿಗೇ ಮಾರಕ" ಎಂದು ವರದಿಯಾಗಿದೆ. ಕೊನೆಗೆ ಒಂದು ಮಾತನ್ನು ತಮ್ಮ ಗಮನಕ್ಕೆ ತಂದು ಈ ವಿಷಯವನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ಈ ರಾಜ್ಯದ ಅಂದಿನ ಮುಖ್ಯ ಮಂತ್ರಿಗಳಾಗಿದ್ದಂತಹ ಶ್ರೀಮಾನ್ ಆರ್. ಗುಂಡೂರಾವ್‌ರವರು ೯-೬-೧೯೮೨ರಲ್ಲಿ ಕೇಂದ್ರ ಸರ್ಕಾರಕ್ಕೆ ಬರೆದಂತಹ ಪತ್ರದ ಲಾಸ್ಟ್ ಪ್ಯಾರಾವನ್ನು ಓದುತ್ತೇನೆ. "Unless the inflow of imported silk is kept under check, I am afraid we would not be able to achieve the targets fixed for the Sixth Five Year Plan. May I, therefore, request you kindly to take a second look at the advance licensing system as well as the replenishment system available to the exporters of the silk fabrics from India and come to the rescue of this Labour intensive industry." ಅಂದಿನ ಮುಖ್ಯ ಮಂತ್ರಿಗಳಾಗಿದ್ದಂತಹ ಶ್ರೀಮಾನ್ ಗುಂಡೂರಾವ್‌ರವರು ೯-೬-೧೯೮೨ರಂದು ಭಾರತ ಸರ್ಕಾರಕ್ಕೆ ಯಾವುದೇ ಒಂದು ಮುಚ್ಚು ಮರೆ ಇಲ್ಲದೆ ಈ ಒಂದು ಆಮದು ನೀತಿಯಿಂದ ಈ ರಾಜ್ಯದ ರೇಷ್ಮೆ ಬೆಳೆಗಾರರಿಗೆ ಹಾಗೂ ನೂಲನ್ನು ಬಿಚ್ಚುವವರಿಗೆ ಇದರಿಂದ ತೊಂದರೆಯಾಗುತ್ತದೆಂದು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಅದನ್ನು ವಿರೋಧ ಮಾಡಿದ್ದಾರೆ. ಆದ್ದರಿಂದ ರಾಜಕೀಯ ಕಾರಣಕ್ಕಾಗಿ ನಾನು ಈ ನಿಲುವನ್ನು ತಾಳಿದ್ದೇನೆ ಎನ್ನುವ ಮಾತನ್ನು ಹೇಳಿರುವುದರಿಂದ ನನಗೆ ನೋವಾಗಿದೆ. ಇದಕ್ಕೆ ರಾಜಕೀಯ ಕಾರಣವೇನೂ ಇಲ್ಲ. ಅಂತಹ ವ್ಯಾಮೋಹವೂ ನನ್ನಲ್ಲಿಲ್ಲ. ಧರ್ಮದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರುವ ನಾನು ಈ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟೆಲ್ಲಾ ಆದ ಮೇಲೆ ೧೯೮೩ರಲ್ಲಿ ಈ ಮನೆಯ ಸದಸ್ಯನಾಗಿ ಬಂದ ಮೇಲೆ ಈ ಒಂದು ವಿರೋಧವನ್ನು ವ್ಯಕ್ತಮಾಡಿದ್ದಕ್ಕಾಗಿ ಸನ್ಮಾನ್ಯರನ್ನೂ ಹಾಗೂ ಸರ್ಕಾರವನ್ನು ಅಭಿನಂದಿಸಿದ್ದೇನೆ. ಸರ್ಕಾರ ತೆಗೆದುಕೊಂಡಂತಹ ನಿಲುವಿಗಾಗಿ ಅಭಿನಂದಿಸಿದ್ದೇನೆ. ಆವತ್ತು ರಾಜಕೀಯ ದುರುದ್ದೇಶ ಇರಲಿಲ್ಲವೇನು ? ಎರಡನೆಯದಾಗಿ ಈ ರಾಜ್ಯದ ಬೆಳೆಗಾರರಿಗೆ ಬೋನಸ್ ಯೋಜನೆಯನ್ನು ನಿರೂಪಿಸಿದ್ದಕ್ಕಾಗಿ ೧೯೮೩ನೇ ಬಜೆಟ್ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಸರ್ಕಾರವನ್ನು ಅಭಿನಂದಿಸಿದ್ದೇನೆ. ಆದ್ದರಿಂದ ರಾಜಕೀಯ ದುರುದ್ದೇಶದಿಂದ ಅಥವಾ ಕೇಂದ್ರ ಸರ್ಕಾರವನ್ನು ದೂಷಣೆ ಮಾಡಬೇಕೆಂಬ ಚಟದಿಂದ ಆ ರೀತಿ ಹೇಳಿಲ್ಲ. ಆ ಚಟ ನನ್ನಲ್ಲಿಲ್ಲ. ಅದರ ಅವಶ್ಯಕತೆಯೂ ಇಲ್ಲ. ಆದರೆ ಈ ಒಂದು ನೀತಿಯಿಂದ ರಾಷ್ಟ್ರದಲ್ಲಿ ಈ ಒಂದು ಉದ್ದಿಮೆಯನ್ನೇ ಅವಲಂಬಿಸಿರತಕ್ಕಂತಹ ಜನಗಳಿಗೆ ಆಗುತ್ತಿರುವ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವೇ ? ಎನ್ನುವ ಆಶೆಯಿಂದ ಈ ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ಈ ಒಂದು ಉದ್ಯಮದ ಬೆಳವಣಿಗೆಗೆ ಸದಸ್ಯರು ಏನೇನು ಆಸೆಗಳನ್ನು ವ್ಯಕ್ತಪಡಿಸಿದ್ದಾರೋ, ಅವುಗಳೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ರಾಜುಗೌಡರು ಕೇವಲ ಅಧಿಕಾರಿಗಳನ್ನು ಮಾತ್ರ ಹೊರದೇಶಗಳಿಗೆ ಕಳುಹಿಸುತ್ತೀರಿ. ಬೆಳೆಗಾರರನ್ನು ಏಕೆ ಕಳುಹಿಸುತ್ತಿಲ್ಲ ಎಂಬುದಾಗಿ ಅವರು ಕೇಳಿದ್ದಾರೆ. ಬಹಳ ಸಂತೋಷದಿಂದ ಹೇಳುತ್ತಿದ್ದೇನೆ, ಈ ವರ್ಷ ಸುಮಾರು ೨೦ ಜನ ರೇಷ್ಮೆ ಬೆಳೆಗಾರರನ್ನು ೨೦ ಜನ ರೇಷ್ಮೆ ಬಿಚ್ಚುವವರನ್ನು ಹೊರ ದೇಶಗಳಿಗೆ ಕಳುಹಿಸುವಂತಹ ತೀರ್ಮಾನವನ್ನು ಸರ್ಕಾರ ಈಗಾಗಲೆ ತೆಗೆದುಕೊಂಡಿದೆ. ಅದನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತಂದು ಈ ಒಂದು ಉದ್ದಿಮೆಗೆ ಅನುಕೂಲವಾಗುವುದಾದರೆ, ಅವರನ್ನೂ ಕೂಡ ಹೊರದೇಶಗಳಿಗೆ ಕಳುಹಿಸುವಂತಹ ಕೆಲಸವನ್ನು ಕಾರ್ಯರೂಪಕ್ಕೆ ತರುತ್ತೇನೆಂದು ಹೇಳುತ್ತಿದ್ದೇನೆ. ಮತ್ತೊಂದು ವಿಷಯವನ್ನು ಸನ್ಮಾನ್ಯ ಮೊಯ್ಲಿಯವರು ಹೇಳಿದರು. Have an officer who has an aptitude for a job. But, where to get these officers ? ನಮ್ಮಿಬ್ಬರ ಚಿಂತೆ ಒಂದೇ ಆಗಿದೆ. ಎಲ್ಲಿಂದ ತರಲಿ ಅಂತಹ ಅಧಿಕಾರಿಗಳನ್ನು ? ಅದು ನನ್ನ ಚಿಂತೆ. ತಾವು ಹೇಳುತ್ತೀರಿ. ದಕ್ಷ ಅಧಿಕಾರಿ ಅಂತ. ಆ

ಒಂದು ವಿಷಯದಲ್ಲಿ ಮಾನಸಿಕ ಶ್ರದ್ಧೆ ಇರುವಂತಹವರು ಆಗಿರಬೇಕು. ತಂತ್ರಜ್ಞ ಏನೂ ಬೇಕಾಗಿಲ್ಲ. ಸೊಪ್ಪು ಬೆಳೆಯುವುದಕ್ಕೆ ಮೊದಲು ತೋಟವನ್ನು ಅಗೆತ ಮಾಡಬೇಕು; ಗೊಬ್ಬರ ಹಾಕಬೇಕು, ಸೊಪ್ಪು ಬೆಳೆಯಬೇಕು, ಸೊಪ್ಪನ್ನು ಕೀಳಬೇಕು. ಹುಳುವನ್ನು ಸಾಕಬೇಕು. ಈ ಒಂದು ಕೆಲಸವನ್ನು ಮಾಡುವಂತಹ ಶ್ರದ್ಧೆ ಇರುವಂತಹ ಅಧಿಕಾರಿಗಳನ್ನು ಹುಡುಕುವುದರಲ್ಲಿ ನಾನು ಸಂಪೂರ್ಣವಾಗಿ ಸಫಲನಾಗಿದ್ದೇನೆ. ಅದನ್ನೇ ಮಾಡಬೇಕೆಂಬ ಆಸೆಯೂ ಇದೆ. ಇರುವಂತಹ ಅಧಿಕಾರಿಗಳಲ್ಲಿ ಎಷ್ಟು ಸಿಕ್ಕುತ್ತಾರೋ ನೋಡಿ. ಅವರ ಜಾತಕವನ್ನು ನೋಡುತ್ತೇವೆ. ಅದು ನನಗೆ ಸೂಟ್ ಆಗುವುದಾದರೆ, ಅಂತಹವರನ್ನು ಆ ಜಾಗದಲ್ಲಿ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೊಂದು ವಿಷಯವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುವುದೇನೆಂದರೆ. ಈ ಇಲಾಖೆಯು ಸರಿಯಾಗಿ ನಡೆಯುತ್ತಿಲ್ಲ, ರೇಷ್ಮೆ ದಾರವನ್ನು ಬಿಚ್ಚುವ ಕಾರ್ಖಾನೆಗಳು ನಷ್ಟದಿಂದ ನಡೆಯುತ್ತಿವೆ ಎನ್ನುವ ಆಪಾದನೆಯನ್ನೂ ಕೂಡ ಮಾಡಿದ್ದಾರೆ. ಅದು ನಿಜ. ಕೆ.ಎಸ್.ಐ.ಸಿ. ಯೂನಿಟ್‌ನಲ್ಲೂ ಲಾಸಾಗಿದೆ. ಸರ್ಕಾರದಿಂದ ನಡೆಯುತ್ತಿರುವ ಯೂನಿಟ್‌ಗಳಲ್ಲೂ ಲಾಸಾಗುತ್ತಿದೆ; ಎಂಬ ವಿಷಯವನ್ನು ಈ ಸಭೆಯ ಗಮನಕ್ಕೆ ಸನ್ಮಾನ್ಯ ಸದಸ್ಯರಾದ ಶ್ರೀ ಮೊಹಿಸುದ್ದೀನ್ ತಂದಿದ್ದಾರೆ. ೧೯೮೩-೮೪ ಹಾಗೂ ೧೯೮೪-೮೫ರಲ್ಲೂ ಅವರೇ ಆ ಸಂಸ್ಥೆಯ ಅಧ್ಯಕ್ಷರಾಗಿದ್ದಂತಹವರು. ಅವರ ಒಂದು ಅನುಭವದಿಂದ ಇದನ್ನು ತಡೆಯುವುದಕ್ಕೆ ಯಾವ ಕ್ರಮವನ್ನು ಕೈಗೊಂಡರೆ ಇದು ಫಲಪ್ರದವಾಗುತ್ತದೆಂದು ಹೇಳಿದರೆ, ಅವರು ಹೇಳುವಂತಹ ಸಲಹೆಗಳನೆಲ್ಲಾ ಗಮನದಲ್ಲಿಟ್ಟುಕೊಂಡು ಈ ಲಾಸ್‌ನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೊಂದು ಮಾತನ್ನು ಹೇಳಿದ್ದಾರೆ. ತಪ್ಪು ತಿಳುವಳಿಕೆಯನ್ನು ಕೊಟ್ಟಿದ್ದೇವೆ, ಗ್ರೈನೇಜ್ ಮಿನಿ ಪ್ಲಾಂಟ್ ಕಂಪ್ಲೀಟ್ ಆಗಿದೆ ಎಂಬುದಾಗಿ ಸರ್ಕಾರಕ್ಕೆ ಕಳುಹಿಸಿದಾಗ, ಅದನ್ನು ಪ್ರಿಂಟ್ ಮಾಡುವಾಗ ತಿದ್ದಿ ಕಳುಹಿಸಬೇಕಾಗಿತ್ತು. ಅದು ಒಂದು ಅಚಾತುರ್ಯ ಆಗಿದೆ, It is not intentional. It is only due to oversight. ಬೈವೋಲ್ಟೈನ್ ಕಕೂನ್‌ನನ್ನು ಬಿಚ್ಚುವ ಬಗ್ಗೆ ಟಿ. ನರಸೀಪುರದಲ್ಲಿರುವ ಕಾರ್ಖಾನೆಯ ಬಗ್ಗೆ ಹೇಳಿದ್ದಾರೆ. ರೇಷ್ಮೆ ದಾರವನ್ನು ಬಿಚ್ಚುವುದಕ್ಕೆ ಟಿ. ನರಸೀಪುರದಲ್ಲಿರುವ ಆ ಯೂನಿಟ್‌ನ್ನೇ ಮಾಡರ್ನೈಜ್ ಮಾಡಿ ಬೈವೋಲ್ಟೈನ್ ರೇಷ್ಮೆ ಗೂಡನ್ನು ನೂಲು ಮಾಡುವುದಕ್ಕೆ, ಆ ತರಹ ಅಳವಡಿಸಿದ್ದೇವೆ. ಆದರೆ ಬೈವೋಲ್ಟೈನ್ ರೇಷ್ಮೆ ಗೂಡು ಸಾಕಷ್ಟು ಸಿಕ್ಕುತ್ತಿಲ್ಲ. ಆದ್ದರಿಂದ ಈಗ ಮಿಶ್ರ ತಳಿ ರೇಷ್ಮೆ ಗೂಡನ್ನೂ ಬಿಚ್ಚುವುದಕ್ಕೆ ಹೊಂದಾಣಿಕೆಯಾಗುವಂತೆ ಬದಲಾವಣೆ ಮಾಡಬೇಕು. ಆ ರೀತಿ ಬದಲಾವಣೆ ಮಾಡಿಕೊಂಡು ಅದನ್ನು ಸಂಪೂರ್ಣವಾಗಿ ಉಪಯೋಗ ಮಾಡುತ್ತೇವೆ ಎಂಬುದಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ರೇಷ್ಮೆ ಇಲಾಖೆಯನ್ನು ಎರಡು ವಿಭಾಗಗಳನ್ನಾಗಿ ಮಾಡಿ ಎಂಬುದಾಗಿ ಸಲಹೆ ಮಾಡಿದ್ದಾರೆ. ಅದರ ಅವಶ್ಯಕತೆ ಇಲ್ಲ ಅಂತ ನಾನು ಭಾವಿಸುತ್ತೇನೆ. ಇಲಾಖೆಯನ್ನು ಎರಡು ವಿಭಾಗಗಳನ್ನಾಗಿ ಮಾಡುವ ಬದಲು ಆಡಳಿತಕ್ಕೆ ಐ.ಎ.ಎಸ್. ಅಧಿಕಾರಿಯನ್ನು ಇಟ್ಟುಕೊಂಡು, ಇಲಾಖೆಯ ಉಳಿದ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಅಡಿಷನಲ್ ಡೈರೆಕ್ಟರ್ ಪೋಸ್ಟನ್ನು ಕ್ರಿಯೇಟ್ ಮಾಡಬೇಕೆಂಬ ಆಸೆ ಇದೆ. ನಾನು ಅನೇಕ ವರ್ಷಗಳಿಂದ ಸರ್ಕಾರಕ್ಕೆ ಬರೆದು ತಿಳಿಸಿದ್ದೇನೆ ಅದನ್ನು ಈಗ ಕಾರ್ಯರೂಪಕ್ಕೆ ತರುವುದಕ್ಕೆ ಕಾನೂನು ಅಡ್ಡಿಯಾಗದಿದ್ದರೆ, ಅಥವಾ ಇಲಾಖೆಗೆ ಅದರಿಂದ ತೊಂದರೆಯಾಗದಿದ್ದರೆ, ಹಿಂದೆ ನಾನು ಏನು ಹತ್ತಾರು ವರ್ಷಗಳಿಂದ ಇಲಾಖೆಯಲ್ಲಿ ಅಡಿಷನಲ್ ಡೈರೆಕ್ಟರ್ ಪೋಸ್ಟನ್ನು ಕ್ರಿಯೇಟ್ ಮಾಡಬೇಕೆಂದು ಏನು ಇದ್ದೆ, ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ರೇಷ್ಮೆ ಬೆಳೆ ಸಾಕಷ್ಟು ಎಕ್ಸ್‌ಟೆನ್ಷನ್ ಆಗಿಲ್ಲ ಅಂತ ಹೇಳಿದ್ದಾರೆ. ೧೯೮೦-೮೧ರಲ್ಲಿ ೧,೧೪,೮೦೦ ಎಕರೆ ರೇಷ್ಮೆ ಬೆಳೆ ಇದ್ದರೆ, ಇವತ್ತು ೧,೨೬,೫೬೭ ಎಕರೆ ರೇಷ್ಮೆ ಬೆಳೆಯನ್ನು ರಾಜ್ಯದಲ್ಲಿ ಬೆಳೆಯುತ್ತಿದ್ದಾರೆ. ಇದು ಗಮನಾರ್ಹವಾದ ಬೆಳವಣಿಗೆ. ಮತ್ತೊಂದು ವಿಷಯ ಏನೆಂದರೆ ಮೊಟ್ಟೆಯನ್ನು ಕಡಿಮೆ ಮಾಡಿದ್ದೀರಿ ಎಂಬುದಾಗಿ ಹೇಳಿದ್ದಾರೆ. ಆ ಒಂದು ವಿಷಯದಲ್ಲಿ ಮಾನ್ಯ ಸದಸ್ಯರು ತಪ್ಪಾಗಿ ತಿಳಿದುಕೊಂಡಿದ್ದಾರೆಂದು ಹೇಳಿದರೆ ಅವರು ಸಿಟ್ಟಿಗೆ ಏಳಬಾರದು. ೧೯೮೪-೮೫ರಲ್ಲಿ ಮೊಟ್ಟೆಯನ್ನು ಕಡಿಮೆ ಮಾಡಿದ್ದೀರೆಂದು ಹೇಳಿದ್ದಾರೆ. ಅದು ಅಲ್ಲ. ಈ ಉದ್ದಿಮೆಯಲ್ಲಿ ನಿಜವಾಗಿಯೂ ಮೊಟ್ಟೆ ಕಡಿಮೆ ಆಗಬೇಕಾಗಿರತಕ್ಕದ್ದು. ಕಕೂನ್ ಪ್ರೊಡಕ್ಷನ್ ಜಾಸ್ತಿಯಾಗಬೇಕು. The production of layings should be reduced and the production of cocoon should be increased. In fact, it is a good sign. ಇದರಿಂದ ಏನು ತೋರಿಸುತ್ತಿದೆ ಎಂದರೆ, ಕೆಟ್ಟ ಮೊಟ್ಟೆಗಳು ಇಲ್ಲದೆ ಬೆಳೆ ಕೆಡುತ್ತಿಲ್ಲ ಎಂಬುದನ್ನು ತೋರಿಸುತ್ತದೆ.

ಕೊಡತಕ್ಕಂತಹ ಮೊಟ್ಟೆ ಯೋಗ್ಯವಾದವುಗಳಾಗಿದ್ದು, ಕಕೂನ್ ಈಲ್ಡ್ ಜಾಸ್ತಿಯಾಗುತ್ತಿದೆ ಎಂಬುದು ಇದರ ಅರ್ಥ. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಳ್ಳಬೇಕು ಪ್ರೊಡಕ್ಷನ್ ಜಾಸ್ತಿಯಾಗುತ್ತಿರುವುದು ಈ ಉದ್ದಿಮೆ ಬೆಳೆಯುವುದಕ್ಕೆ ಇದು ಒಂದು ಸೂಚನೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇವೆ. ಇನ್ನೂ ಅನೇಕ ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಸಾಧ್ಯವಾದ ಮಟ್ಟಿಗೆ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಉತ್ಪಾದನೆಯಾದಂತಹ ಎಲ್ಲ ಗೂಡು ಮಾರುಕಟ್ಟೆಗೆ ಬರುತ್ತಿಲ್ಲ ಎನ್ನುವ ಆಪಾದನೆಯನ್ನು ಮಾಡಿದ್ದಾರೆ. ೧೦೦ಕ್ಕೆ ೯೫ ಪರ್ಸೆಂಟ್ ರಾಜ್ಯದಲ್ಲಿ ಬೆಳೆದಂತಹ ಗೂಡು ನಮ್ಮ ಮಾರುಕಟ್ಟೆಗೆ ಬರುತ್ತಿವೆ.

ಮಾನ್ಯ ಸದಸ್ಯರಾದ ಮೊಯ್ಲಿಯವರು ವಿಶ್ವ ಬ್ಯಾಂಕ್‌ನಿಂದ ಬಂದಂಥ ಸುಮಾರು ೪೦ ಲಕ್ಷ ರೂಪಾಯಿಗಳು ಹೋಗುವಂಥ ಸಂದರ್ಭ ಇದೆಯೆಂದು ನನಗೆ ತಿಳಿದುಬಂದಿದೆಯೆಂದು ಹೇಳಿದರು. ಅಂಥ ಸಂದರ್ಭ ಬರುವುದಿಲ್ಲ. ೪೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬಿತ್ತನೆ ಗೂಡುಗಳಿಗೆ ಬೇಕಾದ ಲಿಫ್ಟ್ ಪರ್ಚೇಸ್ ಟೆಂಡರ್ ಕರೆಯಲಾಗಿತ್ತು. ಅದನ್ನು ರದ್ದು ಮಾಡಿ, ಬೇರೆ ಟೆಂಡರ್ ಕರೆಯಲಾಗಿದೆ. ೪೦ ಲಕ್ಷ ರೂಪಾಯಿಗಳಲ್ಲಿ ಯಾವ ರೀತಿಯಲ್ಲೂ ವಂಚಿತರಾಗುವುದಕ್ಕೆ ಅವಕಾಶ ಕೊಡುವುದಿಲ್ಲ. ಲಿಫ್ಟ್ ಪರ್ಚೇಸ್ ಮಾಡುತ್ತೇವೆ. ಉತ್ಪಾದನೆಯಾದಂಥ ಎಲ್ಲಾ ಗೂಡುಗಳಿಗೂ ವಿಮೆ ಮಾಡಬೇಕೆಂದು ಮಾನ್ಯ ಸದಸ್ಯರಾದ ರಾಜುಗೌಡರು ಹೇಳಿದರು. ಈಗಾಗಲೇ ಬೈವೋಲ್‌ಟೈನ್ ಬೆಳೆಗೆ ವಿಮೆ ಇದೆ. ಮಿಶ್ರತಳಿ ಗೂಡುಗಳಿಗೆ ವಿಮೆ ತರುವುದು ಸಾಧ್ಯವಲ್ಲ. ಅದರ ಅವಶ್ಯಕತೆ ಇಲ್ಲವೆಂದು ಅವರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.—ಈಗಾಗಲೇ ಒಂದು ತಾಸು ಆಯಿತು.

ಶ್ರೀ ವೈ. ಕೆ. ರಾಮಯ್ಯ.—ಇನ್ನು ಐದು ನಿಮಿಷದಲ್ಲಿ ಮುಗಿಸುತ್ತೇನೆ. ಬೀಜ ನಿಯಂತ್ರಣವನ್ನು ಭಾರತ ಸರ್ಕಾರದವರು ಮಾಡುವುದು ಬೇಡವೆಂದು ಮಾನ್ಯ ರಾಜುಗೌಡರು ಅಭಿಪ್ರಾಯಪಟ್ಟಿದ್ದಾರೆ. ಭಾರತ ಸರ್ಕಾರ ಇಡೀ ರಾಷ್ಟ್ರಕ್ಕೆ ಅನ್ವಯವಾಗುವಂತೆ ಒಂದು ನಿಯಮಾವಳಿ ರೂಪಿಸುವುದಕ್ಕೆ ಪ್ರಯತ್ನ ನಡೆಯುತ್ತಿದೆಂದು ತಿಳಿದುಬಂದದ್ದು. ಇದರ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿ ಕೊಟ್ಟಿದ್ದೇನೆ. ಈ ಉದ್ಯಮದ ಸಮಸ್ಯೆ ಒಂದು ಊರಿನಿಂದ ಮತ್ತೊಂದು ಊರಿಗೆ, ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ, ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಭಿನ್ನವಾಗಿರುವುದರಿಂದ, ಬೀಜೋತ್ಪಾದನೆ ನಿಯಂತ್ರಣ ಮಾಡುವ ಕಾನೂನು ಆಯಾಯಾ ರಾಜ್ಯಗಳಿಗೆ ಬಿಟ್ಟುಕೊಡುವುದು ಉತ್ತಮವೆಂದು ಈಗಾಗಲೇ ಬರೆದು ತಿಳಿಸಿದ್ದೇನೆ. ಸಲಹಾ ಸಮಿತಿಗಳನ್ನು ಮಾಡುವ ವಿಚಾರವನ್ನು ತಿಳಿಸಿದ್ದಾರೆ, ಕಳೆದ ವರ್ಷ ಸಲಹಾ ಸಮಿತಿ ಇತ್ತು, ಈಗ ಅಸ್ತಿತ್ವದಲ್ಲಿದೆಯೋ, ಇಲ್ಲವೋ ಗೊತ್ತಿಲ್ಲ. ಅಸ್ತಿತ್ವದಲ್ಲಿ ಇಲ್ಲದಿದ್ದರೆ ಸಲಹಾ ಸಮಿತಿಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ವಿಶ್ವ ಬ್ಯಾಂಕಿನಿಂದ ಈ ಉದ್ಯಮಕ್ಕೆ ಸಂಬಧಪಟ್ಟಂತೆ ಹೆಚ್ಚಿನ ನೆರವನ್ನು ಪಡೆದುಕೊಂಡು ಅಭಿವೃದ್ಧಿ ಪಡಿಸಬೇಕಂದು ತಮ್ಮ ಆಸೆಯನ್ನು ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. After the completion of the World Assistance schemes in Sericulture Department, I think, The Department will come only to the take-off stage. ೭೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಮತ್ತೆ ವಿಶ್ವ ಬ್ಯಾಂಕಿನ ನೆರವಿಗಾಗಿ ಕೆ.ಎಸ್.ಪಿ. ನಂ. ೨ ಒಂದು ಯೋಜನೆಯನ್ನು ತಯಾರು ಮಾಡುವ ದಿಸೆಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಸುಮಾರು ೧೦೦ ಕೋಟಿ ರೂಪಾಯಿ ವೆಚ್ಚದಲ್ಲಿ ಈ ಒಂದು ಯೋಜನೆಯನ್ನು ಮಾಡುವ ಉದ್ದೇಶ ಇರುವುದರಿಂದ ಮಾನ್ಯ ಪುಟ್ಟಸ್ವಾಮಿಯವರು ಕೊಟ್ಟಂತಹ ಸಲಹೆಗಳನ್ನು ಅಳವಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಮಾನ್ಯ ಸದಸ್ಯೆಯರಾದಂಥ ಶ್ರೀಮತಿ ಮುಕ್ತರುನ್ನಿಸಾ ಬೇಗಂರವರು ಮೈಸೂರಿನಲ್ಲಿರತಕ್ಕ ಸಿಲ್ಕ್ ಫ್ಯಾಕ್ಟರಿಯನ್ನು ಆಧುನೀಕರಣಗೊಳಿಸಬೇಕೆಂದು ಹೇಳಿದ್ದಾರೆ. ಈಗಾಗಲೇ ಸಾಕಷ್ಟು ಆಧುನೀಕರಣ ನಡೆದಿದೆ. ಇನ್ನು ಆಧುನೀಕರಣ ಮಾಡುವಂತಿದ್ದರೆ, ಆದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇಷ್ಟು ಹೇಳಿ, ಸನ್ಮಾನ್ಯ ಸದಸ್ಯ ಮಿತ್ರರು ಕೊಟ್ಟಂತೆ ಆ ಸಲಹೆಗಳನ್ನು ಆತ್ಮಪೂರ್ವಕವಾಗಿ ಸ್ವೀಕರಿಸಿ, ಉದ್ಯಮದ ಅಭಿವೃದ್ಧಿಗೆ ಅನುಕೂಲವಾಗುವುದಾದರೆ ಅವುಗಳನ್ನು ಕಾರ್ಯರೂಪಕ್ಕೆ ತರತಕ್ಕಂಥ

ಭರವಸೆಯನ್ನು ಕೊಡುತ್ತೇನೆ. ಕೊನೆಯದಾಗಿ ಈ ಮನೆ ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಯನ್ನು ಮಂಜೂರು ಮಾಡಿಕೊಡಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಮ್ಮ ಸಚಿವರು ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಅವರಿಗಿರತಕ್ಕ ಈ ಉದ್ದಿಮೆಯ ಆಳದ ವಿಚಾರದಲ್ಲಿ ಪ್ರಶ್ನೆ ಮಾಡುವುದಿಲ್ಲ. ಎರಡು ಮೂರು ವಿಚಾರಗಳ ಬಗ್ಗೆ ಮಾತ್ರ ವಿವರಣೆ ಬೇಕಾಗಿದೆ. ತಾವು ೧೮ನೇ ತಾರೀಖು ಪ್ರಜಾವಾಣಿ ಪತ್ರಿಕೆಯು ಹೇಳಿಕೆಗಳನ್ನು ಕೊಟ್ಟಿರಿ, "ರೇಷ್ಮೆ ಹೊಣೆ ರಾಜ್ಯಕ್ಕೆ ಬಿಡಿ, ಕೇಂದ್ರಕ್ಕೆ ಕರೆ" ಈ ವಿಚಾರದಲ್ಲಿ, ರೇಷ್ಮೆ ಆಮದು ನೀತಿಯ ಬಗ್ಗೆ ನೂರಕ್ಕೆ ನೂರು ಪಾಲು ತಮ್ಮ ವಾದವನ್ನು ನಾವು ಒಪ್ಪುತ್ತೇವೆ. ಹಿಂದೆ ಕೂಡ ಒಪ್ಪಿದ್ದೇವೆ. ಮುಂದೆ ಕೂಡ ಒಪ್ಪುತ್ತೇವೆ. ಹಿಂದೆ ಕೇರಳದಲ್ಲಿ ಕೂಡ ಎಡಿಬಲ್ಸ್ ಆಮದು ಮಾಡಿಕೊಂಡ ವಿಚಾರದಲ್ಲಿ ಎಲ್ಲ ಪಕ್ಷದವರು ಅಪೋಸ್ ಮಾಡಿದರು. ಇದು ಆಯಾಯಾ ರಾಜ್ಯದ ಜೀವಾಳದ ಪ್ರಶ್ನೆ ಇರುತ್ತದೆ ಇಂಥ ವಿಚಾರದಲ್ಲಿ ನಾವು ಯಾವಾಗಲೂ ನಿಮ್ಮ ಜೊತೆಯಲ್ಲಿರುತ್ತೇವೆ. ಆದರೆ, ಇದನ್ನು ರಾಜಕೀಯದಿಂದ ನೋಡುವುದು ಸರಿಯಲ್ಲ. ಇನ್ನು ಎರಡನೆಯ ವಿಚಾರ, ಇದನ್ನು ತಾವು ಕಿವಿ ಮಾತು ಎಂದು ತಿಳಿದುಕೊಂಡರೆ ಸಾಕು. ರೇಷ್ಮೆ ವ್ಯವಸಾಯ, ಕೈಗಾರಿಕೆ ಮತ್ತು ಕಲೆ ಇದನ್ನು ಬರೀ ಬೆಳೆಗಾರರ ದೃಷ್ಟಿಯಿಂದ ನೋಡಿದರೆ, ಮುಂದೆ ವ್ಯಾಪಕವಾಗಿ ಬೆಳೆಯತಕ್ಕಂಥ ರೇಷ್ಮೆ ಕೈಗಾರಿಕೆಗೆ ಬೇಕಾದಂಥ ಬೆಳವಣಿಗೆ ತೊಂದರೆಯಾಗಬಹುದು. ತಾವು ಈಗ ಮಂತ್ರಿಗಳಾಗಿದ್ದೀರಿ. ರೈತರ ಪ್ರತಿನಿಧಿಗಳು ಮಾತ್ರ ಅಲ್ಲ, ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. Practically, the consumption of silk in tne domestic market has come to a saturation point. I accept it. But you have to look for the International market. We have got the capacity to enter international market. Qualitywise, we are superior. Price factorwise, is it possible to compete ? Now, also we are paying the same cost, then what happens ? that itself will collapse. A dooms day may come to Sericulture Industry. As a Minister you have to think over it. We cannot compete. I want you to go in that perspective level of looking into the whole sericulture industry. You are the leader in the Sericulture Industry in the whole of the country. ರೇಷ್ಮೆ ಕೈಗಾರಿಕೆಯ ಜೀವ ತಂತುವನ್ನು ಕರ್ನಾಟಕದವರು ಹಿಡಿದುಕೊಂಡಿದ್ದೇವೆ. There is a foreign trade aspect of it ಆ ಸಾಮರ್ಥ್ಯ ಕೂಡ ಇದೆ. ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಇದು ಅಪ್ರಸ್ತುತ ಆದರೂ ಕೂಡ There are some countries who under-sale because they have to maintain certain foreign exchange balance or equilibrium. ಫಾರೀನ್ ಟ್ರೇಡ್ ಕ್ಯಾಪ್ಚರ್ ಮಾಡತಕ್ಕಂಥ ದೃಷ್ಟಿಯಿಂದ ಪ್ರಾರಂಭವಾಗಬೇಕು. The day may come that we have to go for under-sale. ಫಾರೀನ್ ಮಾರ್ಕೆಟ್ ಕ್ಯಾಪ್ಚರ್ ಮಾಡುವ ದೃಷ್ಟಿಯಿಂದ ನಾವು ಮುಂದುವರಿಯಬೇಕಾಗುತ್ತದೆ. Perhaps at the national level, they may be doing it. ಇದನ್ನು ಕೂಡ ನಮ್ಮ ರೈತರು ಅಪ್ರಿಷಿಯೇಟ್ ಮಾಡಬಹುದು. If you put the farmers on a confrontation line, even as on to-day that may work in the larger interest of the farmers. The level of thinking of the farmer will have to be raised. We will have to educate them. ಅದನ್ನು ತಾವು ಮಾಡುತ್ತೀರೆಂದು ನಾನು ಭಾವಿಸುತ್ತೇನೆ. Regarding Import policy, we are also totally against it. We are with you. You have to take up tbis matter with the Export Promotion Council. It should be used exclusively for export purpose. The consumption of silk in the domestic market or otherwise.

ಅದನ್ನು ತಾವು ರಾಜಕೀಯವಾಗಿ ಮಾತನಾಡಿಲ್ಲ, ಪ್ರೀತಿ ಕಳಕಳಿಯಿಂದ ಮಾತನಾಡಿದ್ದೇನೆ ಅಂದರೆ I totally agree with you. Don't put your legs in the shoes of farmers alone. Put your legs in the shoes of Entrepreneurs, Nationalists, farmers, all put together. With that tone, I spoke.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೆ, ಈ ಉದ್ಯಮದಲ್ಲಿ ಬೆಳೆಗಾರರು ಇದ್ದಾರೆ, ಅಷ್ಟೇ ಪ್ರಾಮುಖ್ಯವಾಗಿ ನೂಲು ತೆಗೆಯುವವರು ಇದ್ದಾರೆ, ಬಟ್ಟೆ ತಯಾರು ಮಾಡುವವರು ಇದ್ದಾರೆ, ವ್ಯಾಪಾರಸ್ಥರೂ ಇದ್ದಾರೆ ಬಡವರ ಹಿತಕ್ಕಾಗಿ ಎಷ್ಟು ತ್ಯಾಗ ಮಾಡಬಹುದು ಅಷ್ಟೂ ಹೇಳಿದ್ದೇನೆ. ಈ ಉದ್ಯಮದಲ್ಲಿ ಯಾವುದೇ ಒಂದು ಹಿತಾಸಕ್ತಿ ತುಳಿದು ಮತ್ತೊಂದು ಹಿತಾಸಕ್ತಿಯನ್ನು ವೃದ್ಧಿಪಡಿಸುವ ತಪ್ಪು ಕೆಲಸ ಮಾಡಲಾರೆ. ಉದ್ಯಮಕ್ಕೆ ಬೆಳೆಗಾರರು ಎಷ್ಟು ಪ್ರಾಮುಖ್ಯವೋ ಅಷ್ಟೇ ವ್ಯಾಪಾರಸ್ಥರು ಪ್ರಾಮುಖ್ಯ. ವ್ಯಾಪಾರ ಇದ್ದರೆ ಬೆಳೆಗಾರರಿಗೆ ಬೆಲೆ ಬರುವುದು. ಯಾವುದೇ ಒಂದು ಭಾಗದ ಹಿತವನ್ನು ಧಕ್ಕೆ ಮಾಡಿ ಮತ್ತೊಂದು ಜನರ ಹಿತವನ್ನು ವೃದ್ಧಿಪಡಿಸುವ ಮಾನಸಿಕ ದೌರ್ಬಲ್ಯಕ್ಕೊಳಗಾಗುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ. ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಪ್ರಾಮಾಣಿಕವಾಗಿ ಒಂದು ಮಾತನ್ನು ಹೇಳಿದ್ದಾರೆ. ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮ ವ್ಯಾಪಾರಕ್ಕೆ ತೊಂದರೆಯಾಗುತ್ತಿದೆ ಎಂದು ಹೇಳಿದ್ದಾರೆ. ಅಂತರ್‌ರಾಷ್ಟ್ರೀಯ ಮಾರ್ಕೆಟ್‌ನಲ್ಲಿ ನಮ್ಮ ಭಾರತದ ರೇಷ್ಮೆಗೆ ಇರತಕ್ಕ ಒಂದು ಬೇಡಿಕೆ ಯಾವುದು ಅಂದರೆ ಟಸ್ಸಾರ್ ಸಿಲ್ಕ್, ಸ್ಪನ್‌ಸಿಲ್ಕ್, ಡೂಬಿಯಾನ್ ಸಿಲ್ಕ್, ಕುಶನ್‌ಗಳಿಗೆ ಡೆಕೋರೇಷನ್‌ಗೆ ಇದನ್ನು ತರಿಸಿಕೊಳ್ಳುತ್ತಾರೆ. ಈ ಒಂದು ಫ್ಯಾಬ್ರಿಕ್ ಜಾಸ್ತಿ ಮಾಡಿದರೆ ಬೇಡಿಕೆ ಇದೆ. ಈ ದೇಶದ ರೇಷ್ಮೆ ಉದ್ಯಮದ ಅಭಿವೃದ್ಧಿಯನ್ನು ಪ್ರಾಮಾಣಿಕವಾಗಿ ಚಿಂತೆ ಮಾಡುವ ನನಗೆ ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಈ ರಾಜ್ಯದ ರೇಷ್ಮೆ ಚೈನಾ ಜೊತೆಯಲ್ಲಿ, ಅತಿ ಮೇಲ್ಮಟ್ಟದಲ್ಲಿ ಕಾಂಪೀಟ್ ಮಾಡಬೇಕೆಂಬುದೇ ನನ್ನ ಆಸೆ ಇರುವುದು. ನಾನು ಅಂತರ್‌ರಾಷ್ಟ್ರೀಯ ಮಾರ್ಕೆಟ್ ಹಿತವನ್ನು ಸಹ ಗಮನದಲ್ಲಿಟ್ಟುಕೊಂಡಿದ್ದೇನೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ.—ಅಧ್ಯಕ್ಷರೆ, ನಾನು ನಿನ್ನೆ ಮಾತನಾಡುವ ಕಾಲಕ್ಕೆ ಮಾನ್ಯ ಮಂತ್ರಿಗಳಿಂದ ಒಂದು ಸ್ಪಷ್ಟೀಕರಣ ಬಯಸಿದ್ದೆ. ಅವರು ಮುಂದಿನ ತಿಂಗಳು ಒಂದನೇ ತಾರೀಖಿನಿಂದ ಇಡೀ ರಾಜ್ಯದಲ್ಲಿ ಬೈವೋಲ್‌ಟೈನ್ ಮೊಟ್ಟೆ ತಯಾರು ಮಾಡಬೇಕು, ನಮ್ಮ ಬೇಸಿಕ್ ತಳಿಗಳ ಮೊಟ್ಟೆ ತಯಾರು ಮಾಡತಕ್ಕದ್ದು ನಿಲ್ಲಿಸಬೇಕೆಂದು ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಖಾಸಗೀ ಮೊಟ್ಟೆ ತಯಾರಕರು, ರೈತರು ಮತ್ತು ನಮ್ಮ ಭಾಗದಲ್ಲಿ ಎಲ್ಲ ಪ್ರತಿನಿಧಿಗಳಿಗೂ ಒತ್ತಾಯ ತಂದರು. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳಲ್ಲಿ ಸ್ಪಷ್ಟೀಕರಣ ಬಯಸಿ, ಅವರು ಅದನ್ನು ಹಂತ ಹಂತವಾಗಿ ಜಾರಿಗೆ ಕೊಡತಕ್ಕದರ ಬಗ್ಗೆ ಒಂದು ಹುಕ್ಕುಂ ಅನ್ನು ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಅಧ್ಯಕ್ಷರೆ, ಈ ಸಿಎಚ್ ತಳಿ ಗಂಡು ಚಿಟ್ಟೆ ಉಪಯೋಗಿಸಿಕೊಂಡು ವಿಶ್ರ ತಳಿ ಮಾಡುತ್ತೇವೆ, ಮೈಸೂರಿನಲ್ಲಿ ೧೫–೨೦ ಎಕರೆ ತೋಟಗಳು ಇವೆ. ಅಲ್ಲಿ ಹುರುಳಿ, ಜೋಳ ಹಾಕಿರುತ್ತಾರೆ. ತಮ್ಮ ಹಿರೆಕೇರೂರಿನಲ್ಲಿ ತುಂಬಾ ಚೆನ್ನಾಗಿದೆ. ಆದರೆ ಅಲ್ಲಿ ತೋಟಗಳು ಅಷ್ಟು ಚೆನ್ನಾಗಿಲ್ಲ. ಅಲ್ಲಿ ಟಿಪ್ಪು ಸುಲ್ತಾನನ ಕಾಲದಿಂದಲೂ ಮಾಡುತ್ತಿದ್ದಾರೆ, ಆದರೂ ಅಲ್ಲಿ ತೋಟಗಳು ಚೆನ್ನಾಗಿಲ್ಲ. ಅಲ್ಲಿ ಎಕ್ಸ್‌ಟೆನ್‌ಷನ್ ಜಾಸ್ತಿ ಇದೆ, ಅಲ್ಲಿ ಬೈವೋಲ್‌ಟೈನ್ ತಳಿ ಆಗುವುದಿಲ್ಲ. ನಾನು ಅವರನ್ನು ಕರೆದುಕೊಂಡು ಹೋಗಿ ಒಂದು ಸಭೆಯಲ್ಲಿ ಕೈಮುಗಿದು ಕೇಳಿಕೊಂಡಿದ್ದೇನೆ. ಒಂದು ಪರ್‌ಫಾರಮೆನ್ಸ್ ಫಿಗರ್ಸ್ ಬಗ್ಗೆ ನಮ್ಮ ಮಾನ್ಯ ಪುಟ್ಟಸ್ವಾಮಿಯವರಿಗೆ ಹೇಳಬೇಕೆಂದರೆ, ೫೯ ಸಾವಿರ ಎಕರೆ ಮೈಸೂರು ಜಿಲ್ಲೆಯಲ್ಲಿ ಇದೆ. ಅಲ್ಲಿ ಪರ್‌ಫಾರಮೆನ್ಸ್ ೧೦ ಸಾವಿರ ಎಕರೆಯಷ್ಟೂ ಬರುತ್ತಿಲ್ಲ. ನಾನು ರೈತರಿಗೆ ಕೈಮುಗಿದು ಕೇಳಿಕೊಂಡಿದ್ದೇನೆ. ಒಂದು ವರ್ಷದೊಳಗೆ ಏನಾದರೂ ಮಾಡಿ ಬೈವೋಲ್‌ಟೈನ್ ಗಂಡು ಚಿಟ್ಟೆ ಉಪಯೋಗಿಸಿ ತಳಿ ಮಾಡಬೇಕೆಂದು, ಗೂಡನ್ನು ಮಾಡುವುದು ಅಳವಡಿಸಿಕೊಳ್ಳಬೇಕೆಂದು ಹೇಳಿದ್ದೇನೆ. ರಾಜ್ಯದ ಉದ್ದಿಮೆಯ, ಏಳಿಗೆಯ ಹಿತದೃಷ್ಟಿಯಿಂದ ಇದನ್ನು ಮಾಡಬೇಕಾಗಿದೆ.

ಶ್ರೀ ಎಸ್. ಪುಟ್ಟಸ್ವಾಮಿ.—ಅದನ್ನು ಹಂತ ಹಂತವಾಗಿ ಜಾರಿಗೆ ಕೊಡಿ.

ಶ್ರೀ ವೈ. ಕೆ. ರಾಮಯ್ಯ.—ಹಾಗೆಯೇ ಮಾಡೋಣ.

ಶ್ರೀ ಎಸ್. ಪುಟ್ಟಸ್ವಾಮಿ.—ಬೈವೋಲ್‌ಟೈನ್ ಗಂಡು ಚಿಟ್ಟೆ ಉಪಯೋಗಿಸಿ ಮೊಟ್ಟೆ ತಯಾರು ಮಾಡತಕ್ಕದ್ದು ಆಗಬೇಕು. ಈಗ ನಮ್ಮ ಜಿಲ್ಲೆಯಲ್ಲಿ ೫೫ ಸಾವಿರ ಎಕರೆ ತೋಟ ಏನಿದೆ ಅದನ್ನು ಹಂತ ಹಂತವಾಗಿ ನೀರಾವರಿಗೆ ಒಳಪಡಿಸತಕ್ಕದ್ದು, ತೋಟದಲ್ಲಿ ಬೆಳೆಯತಕ್ಕದ್ದು ಉತ್ತಮಪಡಿಸಿಕೊಳ್ಳುವ ಬಗ್ಗೆ ನಮ್ಮ ಕೈಲಾದ ಪ್ರಯತ್ನ ನಮ್ಮ ಭಾಗದಲ್ಲಿ ಮಾಡುತ್ತೇವೆ. ಆದರೆ ಇದನ್ನು ಹಂತ ಹಂತವಾಗಿ ಜಾರಿಗೆ ಕೊಟ್ಟು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಹಂತ ಹಂತವಾಗಿ ಜಾರಿಗೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ರಾಜುಗೌಡ.—ಈಗ ರಾಸಿಲ್ಕ್, ವೇಸ್ಟ್‌ಸಿಲ್ಕ್, ಪ್ಯೂರ್‌ಸಿಲ್ಕ್, ಡೂಪಿಯಾನ್‌ಸಿಲ್ಕ್ ಎಂದು ಇದೆ, ಮಳೆಗಾಲದಲ್ಲಿ ಹುಳುಗಳು ಚಂದ್ರಿಕೆ ತಟ್ಟೆಯಲ್ಲಿ ಮೂತ್ರ ವಿಸರ್ಜನೆ ಮಾಡಿ ಗೂಡು ಗಟ್ಟಿಯಾಗಂತ್ತದೆ, ಅದರಿಂದ ರೇಷ್ಮೆ ಸರಿಯಾಗಿ ತೆಗೆಯಲಿಕ್ಕೆ ಬರುವುದಿಲ್ಲ. ಅದರ ಬಗ್ಗೆ ತಾವು ಏನು ಸಂಶೋಧನೆ ಮಾಡಿದ್ದೀರಾ ತಿಳಿಸಬೇಕು. ಹಾಗೆಯೇ ರಾಸಿಲ್ಕ್, ಪ್ಯೂರ್‌ಸಿಲ್ಕ್ ಹೆಚ್ಚುವರಿ ಬರಲಿಕ್ಕೆ ಏನು ಸಂಶೋಧನೆ ಮಾಡಿದ್ದೀರಾ ? ಇದು ಅಲ್ಲದೆ, ಸ್ಪೆಷಲ್ ಕಾಂಪೋನೆಂಟ್ ಟ್ರೈಬಲ್ ಸ್ಕೀಮಿನಲ್ಲಿ ಹರಿಜನರಿಗಾಗಿ ಸಹಾಯಧನ ಕೊಡುತ್ತಿದ್ದೀರಿ. ಕೇವಲ ೫ ಪರ್ಸೆಂಟ್ ಗೂಡು ಬರುವುದಿಲ್ಲ ಎಂದು ಹೇಳುತ್ತೀರಿ. ೪೦ ಸಾವಿರ ಟನ್ ಗೂಡು ಉತ್ಪಾದನೆಯಾಗಿದೆ. ೩೫ ಸಾವಿರ ಟನ್ ಮಾರ್ಕೆಟ್‌ಗೆ ಬಂದಿದೆ. ೧೮ ಪರ್ಸೆಂಟ್ ಗೂಡು ಹೊರಗಡೆ ಹೋಗಿದೆ. ಇದು ಎಲ್ಲಿ ಹೋಯಿತು ? ಮಾರ್ಕೆಟ್ ಗಳಿಸತಕ್ಕ ಕಮಿಷನ್ ಏನಾಯಿತು ಎಂಬುದನ್ನು ತಿಳಿಸಬೇಕು. ರೇಷ್ಮೆಯ ಗುಣಮಟ್ಟವನ್ನು ಹೇಗೆ ಅಭಿವೃದ್ಧಿಪಡಿಸುತ್ತೀರಾ ?

ಶ್ರೀ ವೈ. ಕೆ. ರಾಮಯ್ಯ.—ಅಧ್ಯಕ್ಷರೇ, ರೇಷ್ಮೆ ಗುಣಮಟ್ಟದ ಬಗ್ಗೆ ಇಂಪ್ರೂವ್ ಮಾಡಬೇಕೆಂದು ಹೇಳಿದ್ದಾರೆ. ರೇಷ್ಮೆ ಗುಣಮಟ್ಟ ಅಭಿವೃದ್ಧಿಪಡಿಸಬೇಕಾದರೆ, ಸೊಪ್ಪು ಬೆಳೆಯತಕ್ಕದ್ದರಲ್ಲೂ ಶ್ರದ್ಧೆ, ಇರಬೇಕು. ಇದಕ್ಕೆಲ್ಲಾ ಮಿಗಿಲಾಗಿ ನೂಲನ್ನು ತೆಗೆಯುವಾಗಲೂ ಎಚ್ಚರಿಕೆ ವಹಿಸಬೇಕು. ನೀರನ್ನು ನಾವು ಉಪಯೋಗಿಸುವಾಗ ಅನೇಕ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಹುಳು ಮೂತ್ರ ಹಾಕುವುದನ್ನು ಕಡಿಮೆ ಹಾಕಲಿಕ್ಕೆ ಸಂಶೋಧನೆ ನಡೆಸಿದ್ದೀರಾ ಎಂದು ಹೇಳಿದ್ದಾರೆ. ನಾನು ಆ ಮನೆಯಲ್ಲಿ ಹುಟ್ಟಿ ಬೆಳೆದವನು. ಯಾವಾಗ ಹುಳುಗಳಿಗೆ ರೋಗ ಬರುತ್ತದೆ ಆಗ ಅವು ಮೂತ್ರ ಜಾಸ್ತಿ ಹಾಕುತ್ತವೆ. ರೋಗ ಇಲ್ಲದೇ ಇದ್ದರೆ ಅದು ಬರುವುದಿಲ್ಲ. ಈಗ ರೋಗ ನಿಯಂತ್ರಣಕ್ಕೆ ಏನು ಸಂಶೋಧನೆ ಮಾಡುತ್ತೇವೆ, ಅದೇ ಸಂಶೋಧನೆ ಮೂತ್ರ ತಡೆಯಲಿಕ್ಕೂ ನಮಗೆ ಅನುಕೂಲವಾಗುತ್ತದೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಹರಿಜನ ಗಿರಿಜನರಿಗೆ ಸ್ಪೆಷಲ್ ಕಾಂಪೋನೆಂಟ್ ಸ್ಕೀಮಿನಲ್ಲಿ ಸಹಾಯ ಮಾಡಬೇಕೆಂದು ಹೇಳಿದ್ದಾರೆ. ನಾವು ಅವರಿಗೆ ಬಾವಿ ತೆಗೆಸಲಿಕ್ಕೆ ಸಹಾಯ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ (ಸಣ್ಣ ಕೈಗಾರಿಕಾ ಸಚಿವರು).—ಈ ಸದನದ ಮಾನ್ಯ ಸದಸ್ಯರು ಕೆಲವು ಒಳ್ಳೆಯ ಸೂಚನೆ ಮಾಡಿದ್ದಾರೆ. ಅದರ ಬಗ್ಗೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ರಾಜ್ಯದಲ್ಲಿಯಾಗಲೀ, ದೇಶದಲ್ಲಾಗಲೀ ಇವತ್ತು ಎರಡು ಬಹುದೊಡ್ಡ ಸಮಸ್ಯೆಗಳಿವೆ. ಒಂದು ಬಡತನ, ಮತ್ತೊಂದು ನಿರುದ್ಯೋಗ ಸಮಸ್ಯೆ. ಈ ಸಮಸ್ಯೆಗಳು ನಿವಾರಣೆಯಾಗಬೇಕಾದರೆ, ಸಣ್ಣ ಕೈಗಾರಿಕೆ ಹಿಂದುಳಿದ ಪ್ರದೇಶಗಳಲ್ಲಿ ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪನೆಯಾಗಬೇಕು. ಅದರಲ್ಲಿಯೂ ಅಗ್ರೋ ಬೇಸ್ಡ್ ಗುಡಿ ಕೈಗಾರಿಕೆ. ಆದ್ದರಿಂದ ಇದೇ ಒಂದು ಪ್ರಾಮಾಣಿಕ ಉದ್ದೇಶದಿಂದ ಜನತಾ ಸರ್ಕಾರವು ತನ್ನ ಇಂಡಸ್ಟ್ರಿಯಲ್ ಪಾಲಿಸಿಯಲ್ಲಿ ಪ್ರತಿ ತಿಂಗಳು ಒಂದು ಸಾವಿರ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆಂದು ಭರವಸೆ ಕೊಟ್ಟಿತ್ತು, ಅದನ್ನು ನಾನು ಒಪ್ಪುತ್ತೇನೆ. ಈ ನಿರ್ಣಯ ಆದದ್ದು ೧೯೮೩ನೇ ಇಸವಿಯಲ್ಲಿ. ಆದರೇ, ಅದನ್ನು ಅಪೇಕ್ಷೆ ಮಾಡುವುದು ಸರಿಯಲ್ಲ. ಆದರೂ ಸಹ, ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ೧೯೮೨–೮೩ನೇ ಇಸವಿಯಲ್ಲಿ ಆರು ಸಾವಿರದ ತೊಂಭತ್ತಾರು ಸಣ್ಣ ಕೈಗಾರಿಕೆಗಳು ನಿರ್ಮಾಣವಾದರೆ, ೧೯೮೪–೮೫ರಲ್ಲಿ ೧೧,೬೦೬ ಕೈಗಾರಿಕೆಗಳು ಸ್ಥಾಪನೆಯಾಗಿವೆ. ಸದನದ ಹಿರಿಯ ಸದಸ್ಯರಾದ ಶ್ರೀಮಾನ್ ವೀರಪ್ಪ ಮೊಯ್ಲಿಯವರು ಮತ್ತು ಶ್ರೀಮಾನ್ ಭೂಪತಿಯವರು ಮತ್ತು ಶ್ರೀಮಾನ್ ನಂಜಯ್ಯನಮಠ್‌ರವರು

ಕೆಲವೊಂದು ವಿಷಯಗಳನ್ನು ವ್ಯಕ್ತಪಡಿಸಿದ್ದಾರೆ. ಒಂದು ಮಾತನ್ನು ಶ್ರೀ ವೀರಪ್ಪ ಮೊಯ್ಲಿಯವರು ಹೇಳಿದರು. ೧೯೮೪-೮೫ನೇ ಇಸವಿಯಲ್ಲಿ ೧೧, ೭೦೬ ಸಣ್ಣ ಕೈಗಾರಿಕೆಗಳು ನಿರ್ಮಾಣವಾದರೂ ಇದರಲ್ಲಿ ಇನ್‌ವೆಸ್ಟ್‌ಮೆಂಟ್ ತೊಡಗಿಸಿರತಕ್ಕ ಹಣ ೭೨ ಕೋಟಿ ೨೪ ಲಕ್ಷ ಆಗಿದೆ. ಆದರೆ ೧೯೮೨-೮೩ರಲ್ಲಿ ೫೬.೭೮ ಕೋಟಿ ಆಗಿತ್ತು, ನಿಜ. ಆದರೆ, ಒಂದು ಮಾತನ್ನು ಶ್ರೀ ವೀರಪ್ಪಮೊಯ್ಲಿಯವರು ತಿಳಿಯಬೇಕು. ಈ ದಿನ ಸಣ್ಣ ಕೈಗಾರಿಕೆಗಳು ಅಷ್ಟೇ ಅಲ್ಲ, ಅತಿ ಚಿಕ್ಕ ಕೈಗಾರಿಕೆಗಳು ಕೂಡ ಈ ಕೈಗಾರಿಕೆಗಳಲ್ಲಿ ಬರುತ್ತವೆ. ಅದೇ ಪ್ರಕಾರ, ಈ ಸ್ವಯಂ ಉದ್ಯೋಗ ಯೋಜನೆಯಲ್ಲಿ ನಿರುದ್ಯೋಗಿ ಯುವಕರು ಏನಿದ್ದಾರೆ, ಅವರಿಗೂ ಸಹ ಸಾಲ ಕೊಡುತ್ತೇವೆ, ಅದು ಸಹ ಇದರಲ್ಲಿ ಸೇರಿದೆ. ಆದ್ದರಿಂದ ಇವತ್ತು ಬಹು ದೊಡ್ಡ ಬಂಡವಾಳದ ಸಣ್ಣ ಕೈಗಾರಿಕೆ ಹಾಗೂ ಅತಿ ಸಣ್ಣ ಕೈಗಾರಿಕೆಯನ್ನು ಶುರು ಮಾಡುವುದರಲ್ಲಿ ಹೆಮ್ಮೆಯಲ್ಲ. ಜನರಿಗೆ ಉದ್ಯೋಗ ಸಿಕ್ಕಬೇಕೆಂಬ ಉದ್ದೇಶದಿಂದ ಸರ್ಕಾರ ಈ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಈ ಒಂದು ಸಮಸ್ಯೆಯ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಯಾಕೆಂದರೆ ಈ ಒಂದು ಕಾರ್ಯಕ್ರಮದ ಬಗ್ಗೆ ತಮ್ಮ ಮುಖಾಂತರ ಸದನದ ಎಲ್ಲಾ ಸದಸ್ಯರ ಸಹಕಾರವನ್ನು ಕೋರುತ್ತೇನೆ. ಏಕೆಂದರೆ, ಸಣ್ಣ ಕೈಗಾರಿಕೆ, ಅತಿ ಸಣ್ಣ ಕೈಗಾರಿಕೆ ಗ್ರಾಮಾಂತರ ಪ್ರದೇಶಗಳಲ್ಲಿ ಆಗಬೇಕಾಗಿದೆ. ಆದ್ದರಿಂದ, ಅದಕ್ಕೆ ಸದನದ ಎಲ್ಲಾ ಸದಸ್ಯರ ಸಲಹೆ ಬೇಕಾಗಿದೆ. ಈ ಒಂದು ವಿಚಾರದಲ್ಲಿ ಸರ್ಕಾರ ಇವತ್ತು ಲೇಬರ್ ಇಂಡಸ್ಟ್ರೀಸ್‌ನಲ್ಲಿ ಎಲ್ಲಿ ಹೆಚ್ಚಿನ ಉದ್ಯೋಗಕ್ಕೆ ಅವಕಾಶವಿದೆ, ಅಲ್ಲಿ ಆ ಒಂದು ಅವಕಾಶ ಮಾಡಿಕೊಡುತ್ತಾ ಇದೆ. ಇವತ್ತು ರಾಜ್ಯದಲ್ಲಿ ೫೨ ಸಾವಿರ ಸಣ್ಣ ಕೈಗಾರಿಕೆಗಳಿವೆ. ಇದರಿಂದ ೫ ಲಕ್ಷ ಜನರಿಗೆ ಉದ್ಯೋಗಾವಕಾಶವಾಗಿದೆ ಮತ್ತು ಇದರಲ್ಲಿ ನಿರ್ವಹಣೆಯಾಗಿರುವುದು ೪೭೮ ಕೋಟಿ ರೂಪಾಯಿ. ಸರ್ಕಾರದ ಉದ್ದೇಶವೇನೆಂದರೆ, ಕಡಿಮೆ ಹಣವನ್ನು ತೊಡಗಿಸಿ, ಅದರಿಂದ ಹೆಚ್ಚು ಜನರಿಗೆ ಉದ್ಯೋಗ ಅವಕಾಶ ಕೊಡಬೇಕೆಂಬುದು. ಈ ದಿನ ನಮ್ಮ ರಾಜ್ಯದಲ್ಲಿ ಸೇಲ್ಸ್‌ಟ್ಯಾಕ್ಸ್ ಏನಿದೆ, ಇದು ಬಹಳ ಉತ್ಪಾದನೆ ಇರುವಂಥಾದ್ದು. ಅದೇ ರೀತಿ, ರಾಜ್ಯದ ಇಂಡಸ್ಟ್ರೀಸ್ ಕಾಂಟ್ರಿಬ್ಯೂಷನ್‌ನಲ್ಲಿ ೪೫ ರಿಂದ ೫೦ ಪರ್ಸೆಂಟ್ ಇರಬಹುದು, ಅದೇ ಪ್ರಕಾರ, ರಾಜ್ಯದ ಇಂಡಸ್ಟ್ರೀಸ್ ಪ್ರೊಡಕ್ಷನ್ ಏನಿದೆ, ಅದರಲ್ಲಿ ೫೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಇರಬಹುದು. ಅದರಲ್ಲಿ ಇವತ್ತು ಸಣ್ಣ ಕೈಗಾರಿಕೆಗಳು ಬೆಳೆಯಬೇಕಾಗಿದೆ. ಶ್ರೀಮಂತಿ ಮುಕ್ತ್ಯಾರು ನ್ನೀಸಾ ಬೇಗಂರವರು ಹೇಳಿದರು. ಮಹಿಳೆಯರಿಗೆ ಉದ್ಯೋಗಾವಕಾಶದಲ್ಲಿ ಪ್ರಾತಿನಿಧ್ಯತೆ ಕೊಡಬೇಕು ಎಂದು. ಅದನ್ನು ನಾನೂ ಒಪ್ಪುತ್ತೇನೆ. ಈಗಾಗಲೇ ನಮ್ಮ ಇಲಾಖೆಯ ಟೆಕ್ಸಾನ್‌ನಲ್ಲಿ ಮಹಿಳೆಯರಿಗಾಗಿ ಒಂದು ಸೆಲ್‌ನ್ನು ಮಾಡಿದೆ. ಆದರೂ ಸಹ ಮಹಿಳೆಯರಿಗೆ ಪ್ರಾತಿನಿಧ್ಯತೆ ಕೊರತೆಯಿಂದೆ ಎಂದು ಹೇಳಿದ್ದಾರೆ. ನಾನು ಒಂದು ಮಾತನ್ನು ಹೇಳಿದರೆ, ಯಾರೂ ಬೇಸರಪಟ್ಟುಕೊಳ್ಳಬಾರದು. ಈ ದೇಶದ ಪ್ರಧಾನಿಯವರು ಲೋಕಸಭೆಯಲ್ಲಿ ಒಂದು ಮಾತನ್ನು ಹೇಳಿದರು ಏನೆಂದರೆ, ಮಹಿಳೆಯರಿಗಾಗಿ ಜಾಬ್ ರಿಸರ್ವೇಷನ್ ಮಾಡುವುದು ಸರಿಯಲ್ಲ, ಎಂದು. ಆದ್ದರಿಂದ. ಮಹಿಳೆಯರಿಗೆ ಇದರಿಂದ ಅವಮಾನ ಮಾಡಿದಂತಾಗುತ್ತದೆ. ಈ ಸಣ್ಣ ಕೈಗಾರಿಕೆಗಳನ್ನು ಮಾಡುವಾಗ ಮಹಿಳೆಯರಿಗೆ ಏನು ಪ್ರಾಧಾನ್ಯತೆಯನ್ನು ಕೊಡಬೇಕೋ ಅದನ್ನು ಕೊಡುತ್ತೇವೆ,

ಶ್ರೀ ಎಂ. ವೀರಪ್ಪಮೊಯ್ಲಿ.—ನೀವು ಕೊಡುತ್ತೀರೋ ಇಲ್ಲವೋ ?

ಶ್ರೀ ಆರ್.ವಿ. ದೇಶಪಾಂಡೆ.—ನಾವು ಕೊಡುತ್ತೇವೆ. ಅದನ್ನೇ ನಾನು ಹೇಳಿದ್ದೇನೆ,

ಶ್ರೀ ಬಿ.ಎಸ್. ಯಡಿಯೂರಪ್ಪ.—ಪ್ರಧಾನಿಯವರು ಹೇಳದೇ ಇದ್ದರೂ ನಮ್ಮಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆಯನ್ನು ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ.—ಜನತಾ ಪಕ್ಷದ ಪ್ರಣಾಳಿಕೆಯಲ್ಲಿ ಉದ್ಯೋಗದಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೇವೆ. ಆದ್ದರಿಂದ, ನಮ್ಮ ಸರ್ಕಾರವು ಮಹಿಳೆಯರಿಗೋಸ್ಕರ ಒಂದು ವಿಮೆನ್ ಎಂಟರ್‌ಪ್ರಿನ್ಯೂಯರ್ ಇನ್‌ಸ್ಟಿಟ್ಯೂಟ್ ಸ್ಥಾಪನೆ ಮಾಡಬೇಕೆಂದು ಚರ್ಚೆಮಾಡುತ್ತಾ ಇದೆ. ಅದು ಆದಷ್ಟುಬೇಗನೇ ಜಾರಿಗೆ ಬರಬಹುದು. ಅದರಿಂದ ಸಾಕಷ್ಟು ಮಹಿಳೆಯರಿಗೆ ಸಹಾಯವಾದಂತಾಗುತ್ತದೆ. ಈ ದಿನ ಮಾನ್ಯ ಯಡಿಯೂರಪ್ಪನವರು ಈ ಒಂದು ಸರ್ಕಾರದಿಂದ ಸಿಕ್ಕತಕ್ಕ ಸೇಲ್ಸ್‌ಟ್ಯಾಕ್ಸ್ ರೀಫಂಡ್ ಬಗ್ಗೆ ಹೇಳಿದರು. ಸಣ್ಣ ಕೈಗಾರಿಕೆಗಳು ಮತ್ತು ಚಿಕ್ಕ ಕೈಗಾರಿಕೆಗಳು ಬೆಳೆಯಬೇಕೆಂದು ಹೇಳುತ್ತಿದ್ದಾರೆ. ಸೇಲ್ಸ್‌ಟ್ಯಾಕ್ಸ್ ರೀಫಂಡ್ ಬಗ್ಗೆ ವರ್ಕಿಂಗ್ ಕ್ಯಾಪಿಟಲ್ ರೂಪದಲ್ಲಿರಬಹುದು. ಸಬ್ಸಿಡಿ ರೂಪದಲ್ಲಿ ಅದು ಇರಬಹುದು, ಅಥವಾ ಬೇರೆ

ಯಾವುದೇ ರೂಪದಲ್ಲಿರಬಹುದು. ಆದರೆ, ಹಿಂದೆ ಸಣ್ಣ ಕೈಗಾರಿಕೆಗೆ ರಿಯಾಯಿತಿ ಕೊಡುವಂತೆ ಆದ ತಿದ್ದುಪಡಿಯಿಂದ ಸಹಾಯವಾಗಿದೆ. ಅದುದರಿಂದ, ಸರ್ಕಾರ ಈ ರಿಯಾಯಿತಿ ಅವರಿಗೆ ಕೊಡುತ್ತದೆ. ೧೯೭೮ರ ಸರ್ಕಾರಿ ಆಜ್ಞೆ ಪ್ರಕಾರ, ಸಣ್ಣ ಕೈಗಾರಿಕೆಗಳಿಗೆ ರಿಯಾಯಿ ಸಿಕ್ಕುತ್ತಿತ್ತು. ಈಗ ಅದು ಸಿಕ್ಕುತ್ತಿಲ್ಲ. ಇದರಿಂದ ಸಮಸ್ಯೆ ಆಗಿದೆ. ನಂತರ, ಅರ್ಥ ಇಲಾಖೆಯಿಂದ ಒಂದು ಆಜ್ಞೆ ಹೊರಡಿಸಿ, ಈ ಒಂದು ಸೇಲ್ಸ್‌ಟ್ಯಾಕ್ಸ್ ಕನ್‌ಸೇಷನ್ ಕೊಟ್ಟಿದೆ. ಇವತ್ತು ವರ್ಕಿಂಗ್ ಕ್ಯಾಪಿಟಲ್ ಸಾಲ ಕೊಡುತ್ತಾ ಇದೆ. ತಾವು ಒಂದು ಸಮಸ್ಯೆ ಹೇಳಿದ್ದಿರಿ. ನಾನು ಅದನ್ನು ಪರಿಶೀಲನೆಮಾಡುವ ಭರವಸೆ ಕೊಡುತ್ತೇನೆ. ಇನ್ನು ಸ್ವಯಂ ಉದ್ಯೋಗ ಯೋಜನೆ. ಇದು ಸಾಕಷ್ಟು ಪ್ರಗತಿಯಾಗಿದೆ. ಇದು ನಿರುದ್ಯೋಗಿ ಯುವಕರಿಗೆ ಸಹಾಯ ಮಾಡುವ ಯೋಜನೆಯಾಗಿದೆ. ೨ನೇ ಅಕ್ಟೋಬರ್ ೧೯೮೩ರಲ್ಲಿ ಈ ಆಜ್ಞೆ ಜಾರಿಗೆ ಬಂತು. ಈ ಯೋಜನೆಯಿಂದ ೨೫ ಸಾವಿರ ಯುವಕರಿಗೆ ಸಾಲ ಸಿಕ್ಕುತ್ತದೆ. ಮತ್ತು ೧೯೮೪-೮೫ರಲ್ಲಿ ಈ ಯೋಜನೆಯಿಂದ ೧೨,೮೧೦ ಯುವಕರಿಗೆ ಸಹಾಯವಾಗಿದೆ. ಈ ವರ್ಷ ೧೨,೪೦೦ ನಿರುದ್ಯೋಗಿ ಯುವಕರಿಗೆ ಸಹಾಯಮಾಡುವ ಯೋಜನೆಯಿದೆ. ಶ್ರೀಮಾನ್ ಭೂಪತಿಯವರು ಒಂದು ಮಾತನ್ನು ಹೇಳಿದರು. ಈ ಯೋಜನೆಯಲ್ಲಿ ನಿರುದ್ಯೋಗಿ ಬಡ ಯುವಕರಿಗೆ ಲಾಭ ಸಿಕ್ಕುತ್ತಿಲ್ಲ, ಕೇವಲ ಶ್ರೀಮಂತರು ಇದರಲ್ಲಿ ಲಾಭ ಪಡೆಯುತ್ತಿದ್ದಾರೆ ಎಂದು. ಅದನ್ನು ನಾನು ಒಪ್ಪುವುದಿಲ್ಲ. ಅದಕ್ಕಾಗಿ ಒಂದು ಸಮಿತಿಯಿಂದೆ. ಆ ಸಮಿತಿಯಲ್ಲಿ ಜನರಲ್ ಮ್ಯಾನೇಜರ್‌ವರು ಅಧ್ಯಕ್ಷರಾಗಿರುತ್ತಾರೆ ಮತ್ತು ಲೀಡ್ ಬ್ಯಾಂಕ್‌ನ ಮ್ಯಾನೇಜರ್‌ರವರು ಸದಸ್ಯರಾಗಿರುತ್ತಾರೆ. ಸಾಲವನ್ನು ಕೊಡಬೇಕಾದರೆ. ಯಾರಿಗೆ ವಯೋಮಿತಿ ೧೮ ರಿಂದ ೩೫ರೊಳಗೆ ಇದೆ ಮತ್ತು ಯಾರಿಗೆ ಬೇರೆ ಉದ್ಯೋಗ ಇಲ್ಲ ಅಂತಹವರಿಗೆ ಮಾತ್ರ ನೀಡಲಾಗುತ್ತದೆ. ಮಾನ್ಯ ಸದಸ್ಯರು ತಿಳಿದಿರುವಂತೆ, ಇಂಥ ವಿಚಾರಗಳು ಎಲ್ಲಾದರೂ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ, ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇನ್ನು ಮಾನ್ಯ ವೀರಪ್ಪಮೊಯ್ಲಿಯವರು ಕೈಮಗ್ಗದ ಬಗ್ಗೆ ಮಾಹಿತಿಗಳನ್ನು ಕೇಳಿದ್ದಾರೆ. ಇಂಟೆನ್ಸಿಯರ್ ಹಾಂಡ್‌ಲೂಂ ಪ್ರಾಜೆಕ್ಟ್‌ನಲ್ಲಿ ಎಷ್ಟು ಜನರಿಗೆ ಪ್ರಯೋಜನವಾಗಿದೆಯೆಂದು ಕೇಳಿದ್ದಾರೆ. ಈ ಯೋಜನೆಯಿಂದ ಸುಮಾರು ೬ ೭೨೦ ನೇಕಾರರಿಗೆ ಸಹಾಯವಾಗಿದೆ. ಅದೇರೀತಿ, ಹಿಡಕಲ್‌ನಲ್ಲಿ ೨,೫೦೦ ಗದಗ್‌ನಲ್ಲಿ ೧,೪೧೧ ಜನರಿಗೆ ಸಹಾಯವಾಗಿದೆ. Export orientsd Silk Unit, Bangalore ಇದರಲ್ಲಿ ೨,೩೯೦ ಜನರಿಗೆ ಸಹಾಯವಾಗಿದೆ. ೧೯೮೪ರಲ್ಲಿ ರಾಜ್ಯ ಸರ್ಕಾರ ಸಹ ಇಂತಹ ಮೂರು Intensive Handloom Development Projec ನ್ನು ಸ್ಥಾಪನೆಮಾಡಿದೆ. ಹಾಸನದಲ್ಲಿ ೬೮೨, ಚಿತ್ರದುರ್ಗದಲ್ಲಿ ೧,೨೦೦ ಜನರಿಗೆ, ಗುಲ್ಬರ್ಗಾದಲ್ಲಿ ೨೮೮೨ ಇಷ್ಟು ಜನ ನೇಕಾರರಿಗೆ ಹ್ಯಾಂಡ್‌ಲೂಂ ಕಾರ್ಪೊರೇಷನ್‌ನಲ್ಲಿ ಅನುಕೂಲವಾಗಿದೆ ಎಂದು.

ನಾನು ಹೆಮ್ಮೆಯಿಂದ ಹೇಳುತ್ತಿದ್ದೇನೆ. ೧೯೮೪-೮೫ ರಲ್ಲಿ ಈ ನಿಗಮ ಒಳ್ಳೆಯ ಪ್ರಗತಿಯನ್ನು ಸಾಧಿಸಿದೆ. ೧೯೮೩-೮೪ ರಲ್ಲಿ ೧೩೨೯ ಜನರಿಗೆ ಹತ್ತಿಯಲ್ಲಿ ಅನುಕೂಲ ಆಗಿದೆ, ೧೯೮೪-೮೫ ರಲ್ಲಿ ೨೬೯೦ ಜನರಿಗೆ ಅನುಕೂಲವಾಗಿದೆ. ಇದೇರೀತಿ ರೇಷ್ಮೆಯಲ್ಲಿ ೧೯೮೩-೮೪ ರಲ್ಲಿ ೧೯೫ ಜನರಿಗೆ ಅನುಕೂಲವಾಗಿದ್ದರೆ, ೧೯೮೪-೮೫ ರಲ್ಲಿ ೪೫೪ ಜನರಿಗೆ ಅನುಕೂಲವಾಗಿದೆ. ಇವತ್ತು ಟೋಟಲ್ ಕವರೇಜ್ ಆಫ್ ಲೂಂಸ್, ಕಾಟನ್‌ನಲ್ಲಿ ೧೭ ಸಾವಿರ ಚಿಲ್ಲರೆ, ಮತ್ತು ಸಿಲ್ಕ್‌ನಲ್ಲಿ ೪೧೦೦ ಚಿಲ್ಲರೆ. ಈ ನಿಗಮ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಇದೇರೀತಿ ಪ್ರೊಡಕ್ಷನ್‌ನಲ್ಲಿ ಕೂಡ. ೧೯೮೩-೮೪ ರಲ್ಲಿ ೧೧೫.೬೬ ಲಕ್ಷ ರೂಪಾಯಿ, ೧೯೮೪ ೮೫ ರಲ್ಲಿ ೧೩೫.೯೦ ಲಕ್ಷ ರೂಪಾಯಿಯಷ್ಟು ಉತ್ಪಾದನೆಯಾಗಿದೆ. ಇದೇರೀತಿ ವಿಶ್ವಬ್ಯಾಂಕ್ ಸಿಲ್ಕ್ ಪ್ರಾಜೆಕ್ಟ್ ಬಗ್ಗೆ ಕೂಡ ತಾವು ಕೇಳಿದ್ದೀರಿ. ೭೫ ಸೊಸೈಟಿಗಳನ್ನು ಸ್ಥಾಪನೆ ಮಾಡಿ ೫ ಸಾವಿರ ಜನರಿಗೆ ಅನುಕೂಲ ಮಾಡಿಕೊಡಬೇಕೆಂದಿದೆ. ಆದರೆ ಈ ಯೋಜನೆಯನ್ನು ವಿಶ್ವಬ್ಯಾಂಕ್‌ನವರು ಒಪ್ಪಿಕೊಂಡಿಲ್ಲವೆಂದು ಭಾರತ ಸರ್ಕಾರದವರು ತಿಳಿಸಿದ್ದಾರೆ. ಆದ್ದರಿಂದ ಕಾರ್ಪೊರೇಷನ್‌ನವರು ಒಂದು ಹೊಸ ಯೋಜನೆಯನ್ನು ನಬಾರ್ಡ್‌ಗೆ ಕಳಿಸಿದ್ದಾರೆ. ಈ ಯೋಜನೆಯ ಅಂದಾಜು ೫.೭೫ ಕೋಟಿ ರೂಪಾಯಿಗಳು. ಇದರಲ್ಲಿ modernisation of pit looms, coverage of new handlooms, starting of new show rooms, work-cum-shed ಇದೆಲ್ಲಾ ಕವರೇಜ್ ಆಗಿದೆ. ಈ ನಿಗಮದ ವ್ಯವಹಾರ ದಿನೇದಿನೇ ಬೆಳೆಯುತ್ತಿದೆ. ಈ ವರ್ಷ ೫ ಸಾವಿರ ಕೈಮಗ್ಗಗಳನು ಕವರೇಜ್ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಈಗಾಗಲೇ ೧೩೦೦ ಕೈಮಗ್ಗಗಳು ಕವರೇಜ್ ಆಗಿದೆ. ಇದೇರೀತಿ ಐ ಆರ .ಡಿ.ಪಿ.

ಯೋಜನೆಯಲ್ಲಿ ಬಡವರಿಗೆ ಅತ್ಯಂತ ಹೆಚ್ಚಿನ ಸಹಾಯ ಸಿಕ್ಕುವಂತೆ ಮಾಡಬೇಕೆಂದು ಸರ್ಕಾರದಿಂದ ಆದೇಶವನ್ನು ಕೊಟ್ಟಿದೆ. ಈ ನಿಗಮ ೧೮ ೩೫ ಕೋಟಿ ರೂಪಾಯಿಗಳ ಟರ್ನ್ಓವರ್ ಮಾಡಿದೆ. ಇಲ್ಲಿ ಒಂದು ಸಮಸ್ಯೆ ಏನು ನಿರ್ಮಾಣವಾಗಿದೆ ಎಂದರೆ, ಇದುವರೆಗೂ ಭಾರತ ಸರ್ಕಾರದವರು ೬೦ ದಿವಸಗಳಿಗೆ ರಿಬೇಟ್‌ನ್ನು ಕೊಡುತ್ತಿದ್ದರು. ಆದರೆ ಈ ವರ್ಷದಿಂದ ೩೦ ದಿವಸಗಳಿಗೆ ರಿಬೇಟ್ ಕೊಡುತ್ತೇವೆಂದು ಹೇಳಿದ್ದಾರೆ. ಇದರಿಂದಾಗಿ ಕೈಮಗ್ಗದ ನೇಕಾರರಮೇಲೆ ತುಂಬಾ ದುಷ್ಪರಿಣಾಮ ಉಂಟಾಗುತ್ತದೆ. ಆದ್ದರಿಂದ ಈ ರಿಬೇಟ್‌ನ್ನು ೬೦ ದಿವಸಗಳಿಗೆ ಕೊಡಬೇಕೆಂದು ಒತ್ತಾಯಿಸಿದ್ದಾರೆ.

ಇನ್ನು ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ೪ ಇಂಟೆನ್ಸಿವ್ ಹ್ಯಾಂಡ್‌ಲೂಂ ಡೆವಲಪ್‌ಮೆಂಟ್ ಪ್ರಾಜೆಕ್ಟ್‌ನ್ನು ಸ್ಥಾಪನೆಮಾಡಬೇಕೆಂದು ನಾವು ಯೋಚನೆ ಮಾಡಿದ್ದೇವೆ. ಇವುಗಳಲ್ಲಿ ೧೦ ಸಾವಿರ ಜನ ನೇಕಾರರಿಗೆ ಮನೆಗಳನ್ನು ಕಟ್ಟಿಸಿಕೊಡುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಅದು ಹುಡ್ಕೋ ಯೋಜನೆಯ ಮೂಲಕವಾಗಲಿ ಅಥವಾ ಡಚ್ ಯೋಜನೆಯ ಮೂಲಕವಾಗಲಿ ಆಗಬಹುದು.

ಇನ್ನು ಮಾನ್ಯ ಸದಸ್ಯರಾದ ನಂಜಯ್ಯನಮಠ್‌ರವರು ಕೆಲವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಒಂದು ಸೂಚನೆ ಎಂದರೆ ತರಬೇತಿ ಕೇಂದ್ರ ನಮ್ಮ ರಾಜ್ಯದಲ್ಲಿಲ್ಲ, ಅದು ಸೇಲಂನಲ್ಲಿದೆ. ಇದರಿಂದಾಗಿ ಈ ಕೈಮಗ್ಗದ ಉದ್ಯಮವು ನಮ್ಮ ರಾಜ್ಯದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ನಮ್ಮ ಸರ್ಕಾರ ಈ ವರ್ಷದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಹ್ಯಾಂಡ್‌ಲೂಂ ಟೆಕ್ನಾಲಜಿಯನ್ನು ಸ್ಥಾಪಿಸುವುದಕ್ಕೆ ಸಾಕಷ್ಟು ಹಣವನ್ನು ಮೀಸಲಿಟ್ಟಿದೆ. ಆದರೆ ಯಾವ ಸ್ಥಳದಲ್ಲಿ ಈ ಕೇಂದ್ರವನ್ನು ಸ್ಥಾಪಿಸಬೇಕೆಂಬ ಬಗ್ಗೆ ಇನ್ನೂ ಅಂತಿಮವಾಗಿ ನಿರ್ಧಾರವಾಗಿಲ್ಲ. ನೂಲಿನ ಮೇಲೆಯೂ ಕೂಡ ಬಡವರಿಗೆ ಎಂದರೆ ಯಾರು ಬಡನೇಕಾರರು ಇರುತ್ತಾರೆ ಅವರಿಗೆ ರಿಬೇಟ್‌ನ್ನು ಕೊಡಬೇಕೆಂದು ಹೇಳಿದ್ದಾರೆ. ಆದರೆ ಸಧ್ಯದಲ್ಲಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲದಿರುವುದರಿಂದ ಮುಂದೆ ಇದನ್ನು ಪರಿಶೀಲಿಸುತ್ತೇವೆಂದು ಭರವಸೆಯನ್ನು ಕೊಡುತ್ತೇನೆ.

ಇನ್ನು ಇದೇರೀತಿಯಲ್ಲಿ ತ್ರಿಫ್ಟ್ ಫಂಡ್‌ನಲ್ಲಿ ೬ ಪರ್ಸೆಂಟ್ ಕೊಟ್ಟಿರುವುದನ್ನು ೧೨ ಪರ್ಸೆಂಟ್ ಕೊಡಬೇಕೆಂದು ಕೇಳಿದ್ದಾರೆ. ಆದರೆ ಇದು ಸಧ್ಯದ ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಸಾಧ್ಯವಿಲ್ಲ ಎನ್ನುವ ಹೇಳಬಯಸುತ್ತೇನೆ. ಡಚ್ ಸ್ಕೀಂನಲ್ಲಿ ಸರಿಯಾಗಿ ಮನೆಗಳನ್ನು ಕಟ್ಟುತ್ತಿಲ್ಲವೆಂದು ಮಾನ್ಯ ಸದಸ್ಯರು ದೂರಿದ್ದಾರೆ. ಅವರು ಏನು ಹೇಳಿದ್ದಾರೆ ಅದು ನಿಜ. ಅದನ್ನು ನಾನು ಒಪ್ಪುತ್ತೇನೆ. ಈಗ ನಾವು ಏನು ಮಾಡಿದ್ದೇವೆಂದರೆ ಮನೆಗಳ ಡಿಸೈನ್‌ನ್ನು ಬದಲಾವಣೆ ಮಾಡಿ ಒಂದು ಸೂಟ್‌ನ್ನು ಹೆಚ್ಚಿಗೆ ಮಾಡಿ ಮನೆಯನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ನಂಜಯ್ಯನ ಮಠ್‌ರವರು, ಶ್ರೀ ಬಿ. ವಿ. ತುಂಗಳ್‌ರವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ಹ್ಯಾಂಡ್‌ಲೂಂ ಬಟ್ಟೆಯನ್ನು ೪ನೇ ದರ್ಜೆ ನೌಕರರಿಗೆ ಕೊಡುವ ಸಲುವಾಗಿ ಸರ್ಕಾರದವರೇ ಖರೀದಿ ಮಾಡಬೇಕೆಂದು ಹೇಳಿದ್ದಾರೆ. ಇದು ಬಹಳ ಒಳ್ಳೆಯ ಸೂಚನೆ. ನಾನು ಈಗಾಗಲೇ ಈ ರೀತಿಯ ಒಂದು ಆದೇಶವನ್ನು ನನ್ನ ಇಲಾಖೆಗೆ ಕೊಟ್ಟಿದ್ದೇನೆ. ಇದಕ್ಕೆ ಸದನದ ಎಲ್ಲಾ ಮಾನ್ಯ ಸದಸ್ಯರ ಸಹಕಾರ ಇದ್ದರೆ ಬಹಳ ಅನುಕೂಲವಾಗುತ್ತದೆ. ನಾವು ಪ್ರತಿ ವರ್ಷವೂ ರಿಬೇಟ್ ಕೊಡುತ್ತಿದ್ದೇವೆ. ಆದರೆ ಖಾಯಂ ಆಗಿ ರಿಬೇಟ್‌ನ್ನು ಕೊಡಬೇಕೆಂದು ಕೇಳುತ್ತಿದ್ದಾರೆ ಅದು ಸಾಧ್ಯವಿಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅಂದರೆ ಹ್ಯಾಂಡ್‌ಲೂಂ ಬಟ್ಟೆಗಾಗಲಿ, ಅಥವಾ ಖಾದಿ ಬಟ್ಟೆಗಾಗಲಿ ಖಾಯಂ ಆಗಿ ರಿಬೇಟ್‌ನ್ನು ಕೊಡುವುದಕ್ಕಾಗುವುದಿಲ್ಲ.

ಇನ್ನು ಲಿಡ್ಕರ್ ಬಗ್ಗೆ ಹೇಳುವುದಾದರೆ, ಬಡವರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರ ಈ ಯೋಜನೆಯನ್ನು ಹಾಕಿಕೊಂಡಿದೆ. ೧೯೮೩-೮೪ ರಲ್ಲಿ ಇದು ೧೦೦ ಲಕ್ಷ ರೂಪಾಯಿಯ ಟರ್ನ್ಓವರ್ ಮಾಡಿದೆ ; ೧೯೮೪-೮೫ ರಲ್ಲಿ ೨೧೪ ಲಕ್ಷ ರೂಪಾಯಿ ಟರ್ನ್ಓವರ್ ಮಾಡಿದೆ. ಇದರಿಂದ ಸಾವಿರಾರು ಜನ ಬಡವರಿಗೆ ಸಹಾಯವಾಗಿದೆ. ಈ ಯೋಜನೆಯಲ್ಲಿ ಹೊಸದಾಗಿ ಜನತಾ ಚಪ್ಪಲಿಯ ತಯಾರಿಕೆಯನ್ನು ಪ್ರಾರಂಭ ಮಾಡಿದ್ದೇವೆ. ಅದೇರೀತಿ ಶಾಲೆಗೆ ಹೋಗತಕ್ಕ ಮಕ್ಕಳಿಗೆ ಕಿಟ್‌ನ್ನು ತಯಾರಿಸುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು, ಮಾನ್ಯ ಯಡಿಯೂರಪ್ಪನವರೂ......

ಶ್ರೀ ಧರ್ಮಸಿಂಗ್.—ಜನತಾ ಚಪ್ಪಲಿ ಎಂದು ಏತಕ್ಕೆ ಹೆಸರು ಇಟ್ಟಿದ್ದೀರಿ ?

ಶ್ರೀ ಆರ್. ವಿ. ದೇಶಪಾಂಡೆ.—ಜನತೆಗೋಸ್ಕರ ಮಾಡುತ್ತಿರುವ ಚಪ್ಪಲಿಯಾದ್ದರಿಂದ ಇದಕ್ಕೆ ಜನತಾ ಚಪ್ಪಲಿ ಎಂದು ಹೆಸರಿಟ್ಟಿದ್ದೇವೆ. ಇದು ಬಡವರು ಉಪಯೋಗಿಸಲು ಕಡಿಮೆ ಹಣದಲ್ಲಿ ದೊರೆಯುತ್ತದೆ.

ಶ್ರೀ ಎಂ. ರಘುಪತಿ.—ಜನತಾ ಎಂದರೆ ಜನತೆಯು ಎಂದು.

ಶ್ರೀ ರಾಮನಾರಾಯಣ ನಾಯಕ್.—ಚಪ್ಪಲಿಗೆ ಜನತಾ ಹೆಸರನ್ನು ಇಟ್ಟಿರಿ, ಅದೇರೀತಿ...

ಶ್ರೀ ಎಂ. ರಘುಪತಿ.—ಟೋಪಿಗೆ ಕಾಂಗ್ರೆಸ್ ಹೆಸರನ್ನು ಇಡೋಣ ಬಿಡಿ.

ಶ್ರೀ ರಾಮನಾರಾಯಣ ನಾಯಕ್.—ಅಂಥ ಪರಿಸ್ಥಿತಿ ಈಗ ಏನು ಬಂದಿದೆ?

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಸವಣ್ಣನವರ ವಚನವನ್ನು ನೆನಪು ಮಾಡಿಕೊಂಡರೆ ಅರ್ಥವಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ನಾವು ಮಾಡತಕ್ಕ ಚಪ್ಪಲಿಗಳನ್ನು ಕೇವಲ ಕಾಲಿಗೆ ಹಾಕಿಕೊಳ್ಳುವುದಕ್ಕೆ ಮಾತ್ರ ಉಪಯೋಗಿಸುತ್ತಾರೆ. ಬೇರೆಯ ಉದ್ದೇಶಕ್ಕೆ ಉಪಯೋಗಿಸುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಮಂತ್ರಿಗಳು ಉತ್ತರ ಕೊಡುವಾಗ ಏನೂ ಕೇಳಬಾರದು. ಮಾನ್ಯ ದೇಶಪಾಂಡೆ ಅವರೇ ಮುಂದುವರೆಸಿ.

ಶ್ರೀ ಆರ್. ವಿ. ದೇಶಪಾಂಡೆ.—ಸದನದ ಮಾನ್ಯ ಸದಸ್ಯರುಗಳಾದ ಶ್ರೀನಿವಾಸ್ ಅವರು, ಯಡಿಯೂರಪ್ಪನವರು, ವೆಂಕಟರಾಮಯ್ಯನವರು, ಬಾಬುರೆಡ್ಡಿ ತುಂಗಳ್ ಅವರು ಮತ್ತು ಕಾನಡೆಯವರು ಮೇ ೧೯, ೧೯೮೫ರಂದು ಲಿಡ್‌ಕರ್‌ನಲ್ಲಿ ಆದ ಬೆಂಕಿ ಅನಾಹುತದ ಬಗ್ಗೆ ಸಿ.ಓ.ಡಿ. ತನಿಖೆ ನಡೆಸಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ. ಮಾನ್ಯ ಶ್ರೀನಿವಾಸ್ ಅವರು ಒಂದು ಮಾತನ್ನು ಹೇಳಿದರು. ಸ್ಟಾಕ್ ವೆರಿಫಿಕೇಷನ್ ಆಗುವ ಮುಂಚಿನ ದಿನ ಈ ಅನಾಹುತ ಉದ್ದೇಶಪೂರ್ವಕವಾಗಿ ಆಗಿದೆ ಎಂಬ ಮಾತನ್ನು ಹೇಳಿದರು. ಆನ್ಯುಯಲ್ ಸ್ಟಾಕ್ ವೆರಿಫಿಕೇಷನ್ ಏಪ್ರಿಲ್ ೧೩ನೇ ತಾರೀಖು ಆಗಿದೆ. ಆದರೂ ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಸದನದ ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ಮಾನ್ಯತೆ ನೀಡಿ ಈ ಪ್ರಕರಣವನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸುವುದಕ್ಕೆ ತೀರ್ಮಾನ ಮಾಡಿದ್ದೇವೆ ಎಂಬ ಮಾತನ್ನು ಇಲ್ಲಿ ಘೋಷಣೆ ಮಾಡುತ್ತೇನೆ. ಮಾನ್ಯ ವೀರಪ್ಪ ಮೊಯಿಲಿಯವರು ಡಚ್ ಏಡ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಡಚ್ ಅಸಿಸ್ಟೆನ್ಸ್ ಕಾರ್ಯಕ್ರಮದಲ್ಲಿ ಬೀದರ್‌ನಲ್ಲಿ ೮೪ ವರ್ಕ್‌ಷೆಡ್ಸ್ ಕುಮುಟಾದಲ್ಲಿ ೨೦, ಶಿಕಾರಿಪಟ್ಟಣದಲ್ಲಿ ೨೦. ಚನ್ನಪಟ್ಟಣದಲ್ಲಿ ೧೨೬, ಸಿರ್ಸಿಯಲ್ಲಿ ೩೦ ವರ್ಕ್‌ಷೆಡ್‌ಗಳ ಕೆಲಸ ನಡೆದಿದೆ. ಮೈಸೂರಿನಲ್ಲಿ ಈ ಕೆಲಸ ನಡೆಯುತ್ತಿದೆ. ಕಾಮನ್ ಫೆಸಿಲಿಟೀಸ್ ಸೆಂಟರ್, ವರ್ಕ್‌ಷೆಡ್ ಕೆಲಸ ಮೈಸೂರಿನಲ್ಲಿ ನಡೆಯುತ್ತಿದೆ. ಅಕ್ಟೋಬರ್‌ನಲ್ಲಿ ಕೆಲಸ ಮುಗಿಯಬಹುದು. ಆದ್ದರಿಂದ ಈ ನಿಗಮ ಸಹ ಬಡಜನರಿಗೆ ಕರಕುಶಲಕರ್ಮಿಗಳಿಗೆ ಸಾಕಷ್ಟು ಸಹಾಯ ಮಾಡುತ್ತಿದೆ. ಗಂಧವನ್ನು ಸಹ ಸಾಕಷ್ಟು ರಿಯಾಯಿತಿ ದರದಲ್ಲಿ ಕೊಡುತ್ತಿದ್ದಾರೆ. ಒಟ್ಟಿನಲ್ಲಿ ಈ ನಿಗಮ ಸಾಕಷ್ಟು ಪ್ರಗತಿಯನ್ನು ಮಾಡಿದೆ. ಖಾದಿ ವಿಲೇಜ್ ಇಂಡಸ್ಟ್ರೀಸ್ ಬಗ್ಗೆ ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರು, ಬಾಬುರಾವ್ ತುಂಗಳ್ ಅವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಮಹಾತ್ಮ ಗಾಂಧಿಯವರ ಕನಸು ನನಸಾಗಲಿಲ್ಲ. ಗ್ರಾಮಾಂತರ ಪ್ರದೇಶದ ತೀರಾ ದುರ್ಬಲವರ್ಗದವರಿಗೆ ಸಹಾಯ ಆಗಲಿಲ್ಲ ಎಂಬ ಆಪಾದನೆಯನ್ನು ಮಾಡಿದ್ದಾರೆ. ಅವರು ಹೇಳಿದ್ದರಲ್ಲಿ ಕೆಲವು ಅಂಶ ಸತ್ಯ ಇದೆ ಎಂದು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಯಾವುದೇ ತರಹದ ಬೆಳವಣಿಗೆ ಇವತ್ತಿನವರೆಗೂ ತಾಲ್ಲೂಕಾ ಪ್ರದೇಶದಲ್ಲಿ ಇರಲಿಲ್ಲ. ಇನ್‌ಫ್ರಾ-ಸ್ಟ್ರಕ್ಚರ್ ತಾಲ್ಲೂಕಾ ಮಟ್ಟದಲ್ಲಿ ಇರಲಿಲ್ಲ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರ ಕೆಲವು ನಿರ್ಣಯ ತೆಗೆದುಕೊಂಡಿದೆ. ಜಿಲ್ಲಾ ಮಟ್ಟದ ಸಮಿತಿಯನ್ನು ನಾವು ರಚನೆ ಮಾಡಿದ್ದೇವೆ. ವಿಕೇಂದ್ರೀಕರಣದಲ್ಲಿ ಜನತಾ ಸರ್ಕಾರ ಇಟ್ಟ ಹೆಜ್ಜೆ ಇದು. ಈ ಕಮಿಟಿಗಳು ಈಗಾಗಲೇ ರಚನೆಯಾಗಿವೆ. ೨೫ ಸಾವಿರ ರೂಪಾಯಿಗಳವರೆಗೆ ಸಾಲವನ್ನು ಜಿಲ್ಲಾ ಮಟ್ಟದಲ್ಲಿ ಮಂಜೂರು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಎಷ್ಟೋ ಬಡಜನರಿಗೆ ಇದರಿಂದ ಸಹಾಯವಾಗಬಹುದು. ವಸೂಲಾತಿ ಕೂಡ ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಈ ಸಂಸ್ಥೆಯಲ್ಲಿ ೫ ಕೋಟಿ ರೂಪಾಯಿಗಳು ಓವರ್ ಡ್ಯೂ ಇದೆ. ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದಹಾಗೆ ಜಿಲ್ಲಾಧಿಕಾರಿಯಿಂದಾಗಲೀ, ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುವ

ತಹಸೀಲ್ದಾರರಿಂದಾಗಲೀ ಆರ್.ಆರ್.ಸಿ. ಕೊಟ್ಟರೂ ವಸೂಲಾಗುವುದು ತೊಂದರೆಯಾಗಿದೆ. ಆದ್ದರಿಂದ ಸರ್ಕಾರ ಈಗಾಗಲೇ ಆಜ್ಞೆ ಹೊರಡಿಸಿ ನಾಲ್ಕು ಜನ ತಹಸೀಲ್ದಾರರನ್ನು ರಿಕವರಿ ಉದ್ದೇಶಕ್ಕೋಸ್ಕರವೇ ಖಾದಿ ಬೋರ್ಡಿಗೆ ಡೆಪ್ಯೂಟ್ ಮಾಡಿದೆ. ಇದರಿಂದ ವಸೂಲಾತಿ ಆಗಬಹುದೆಂಬ ವಿಶ್ವಾಸವಿದೆ. ತಾಲ್ಲೂಕು ಮಟ್ಟದಲ್ಲಿ ಕೆಲವು ಇನ್‌ಫ್ರಾ ಸ್ಟ್ರಕ್ಚರ್ ಇರಲಿಲ್ಲ. ಆದಷ್ಟು ಜಾಗ್ರತೆ ತಾಲ್ಲೂಕು ಮಟ್ಟದಲ್ಲಿ ಕೆಲವು ಸಿಬ್ಬಂದಿವರ್ಗವನ್ನು ಹಾಕಿ ಅಲ್ಲಿ ಬಡಜನರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂಬ ಭರವಸೆಯನ್ನು ಕೊಡುತ್ತಿದ್ದೇನೆ. ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ಸಹ ಬಹಳ ಒಳ್ಳೆಯ ಕೆಲಸ ಮಾಡುತ್ತಿದೆ. ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ ಬೇಕಾಗುವ ಸ್ಟೀಲಾಗಲೀ, ಸಿಮೆಂಟ್ ಗಲೀ ಅದು ಪೂರೈಕೆ ಮಾಡುತ್ತಿದೆ. ಅದೇ ಪ್ರಕಾರ ಷೆಡ್‌ಗಳನ್ನು ಕಟ್ಟಿ ಅಲಾಟ್‌ಮೆಂಟ್ ಮಾಡುತ್ತಿದೆ. ಈ ವರ್ಷ ಮೂರು ಮಲ್ಟಿಸ್ಟೋರೀಡ್ ಕಾಂಪ್ಲೆಕ್ಸ್ ಕಟ್ಟಿ ೧೨೬ ಸಣ್ಣ ಎಲೆಕ್ಟ್ರಾನಿಕ್ ಇಂಡಸ್ಟ್ರಿಸನ್ನು ಅಲ್ಲಿ ಸ್ಥಾಪನೆ ಮಾಡಬೇಕೆಂದು ವಿಚಾರ ಮಾಡಿದ್ದೇವೆ. ಅದರ ಪ್ರಕಾರ ಕೆಲಸ ಸಹ ನಡೆಯುತ್ತಿದೆ. ಇವತ್ತಿನವರೆಗೂ ಈ ನಿಗಮದಲ್ಲಿರುವ ಷೆಡ್ ಅಲಾಟ್‌ಮೆಂಟ್ ಕಮಿಟಿಯಲ್ಲಿ ಸಣ್ಣ ಕೈಗಾರಿಕಾ ಸಂಘಗಳಿಗೆ ಪ್ರಾತಿನಿಧ್ಯ ಇರಲಿಲ್ಲ. ಈಗ ನಾವು ಇವರಿಗೆ ಪ್ರಾತಿನಿಧ್ಯ ಕೊಟ್ಟಿದ್ದೇವೆ. ಷೆಡ್ ಅಲಾಟ್‌ಮೆಂಟ್ ಆದನಂತರ ಎಷ್ಟೋ ಜನರಿಗೆ ಬಾಡಿಗೆ ಕೊಡುವುದಕ್ಕೆ ಆಗಲಿಲ್ಲ, ಸಣ್ಣ ಕೈಗಾರಿಕೆಯಾಗಲೀ ದೊಡ್ಡ ಕೈಗಾರಿಕೆಯಾಗಲೀ ಪ್ರತಿಯೊಂದು ಕೈಗಾರಿಕೆಗೂ ವೈಟಿಂಗ್ ಪೀರಿಯಡ್ ಇರುತ್ತದೆ. ಷೆಡ್ ಅಲಾಟ್ ಆದನಂತರ ಮೂರು ತಿಂಗಳು ಅಥವಾ ೬ ತಿಂಗಳೊಳಗೆ ಕಂತು ಮರುಪಾವತಿ ಮಾಡುವ ಪದ್ಧತಿ ಮೊದಲಿತ್ತು. ಅದರಲ್ಲಿ ನಾವು ಬದಲಾವಣೆ ಮಾಡಿ ಷೆಡ್ ಅಲಾಟ್ ಆದನಂತರ ೧೦ ಪರ್ಸೆಂಟ್ ಇ ಎಂ ಡಿ,ಯನ್ನು ಒಬ್ಬ ಎಂಟರ್‌ಪ್ರಿನರ್ ಕಟ್ಟಬೇಕು. ಅದರ ನಂತರ ಒಂದು ವರ್ಷ ಯಾವುದೇ ಪೇಮೆಂಟ್ ಮಾಡುವ ಅವಶ್ಯಕತೆ ಇಲ್ಲ. ಎರಡನೇ ವರ್ಷದಲ್ಲಿ ಮೊದಲನೇ ವರ್ಷದ ಬಡ್ಡಿ ಕಟ್ಟಬೇಕು. ಮೂರನೇ ವರ್ಷ ಕಂತು ಮತ್ತು ಬಡ್ಡಿ ಕಟ್ಟುವ ಯೋಜನೆ ಹಾಕಿಕೊಂಡಿದ್ದೇವೆ. ಇಡೀ ಹಿಂದೂಸ್ಥಾನದಲ್ಲೇ ಈ ರೀತಿ ಮಾಡಿರುವುದು ನಾವೇ. ಆದ್ದರಿಂದ ಈ ನಿಗಮ ಸಹ ಒಳ್ಳೆಯ ಕೆಲಸ ಮಾಡಿದೆ ಎಂದು ಹೇಳಬಯಸುತ್ತೇನೆ. ಸಣ್ಣ ಕೈಗಾರಿಕೆಗಳು ಈ ರಾಜ್ಯದಲ್ಲಿ ಬೆಳೆಯಬೇಕು ಎಂಬ ದೃಷ್ಟಿಯಿಂದ ಏನು ಸಲಹೆಗಳನ್ನು ಕೊಟ್ಟಿದ್ದಾರೋ ಅದನ್ನು ಪರಿಶೀಲನೆ ಮಾಡುತ್ತೇನೆ. ಮತ್ತು ಅದರ ಪ್ರಕಾರ ಯಾವುದು ಸಾಧ್ಯವೋ ಅದನ್ನು ಜಾರಿಯಲ್ಲಿ ತರುತ್ತೇವೆ ಎಂಬ ಭರವಸೆಯನ್ನು ಕೊಟ್ಟು ಈ ಬೇಡಿಕೆಗೆ ಸದನ ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.–ಹಿಂದೆ "own your own shed" ಎನ್ನುವಯೋಜನೆ ಜಾರಿಯಲ್ಲಿತ್ತು. ಅದರ ಪ್ರಕಾರ ಅವರೇ ಕಂತು ಕಟ್ಟಿ ಅದನ್ನು ಸ್ವಂತ ಮಾಡಿಕೊಳ್ಳುವ ಅವಕಾಶ ಇತ್ತು. ಇನ್‌ಸೆಂಟೀವ್ ಕೊಡುವುದಕ್ಕೋಸ್ಕರ ಆ ಯೋಜನೆಯನ್ನು ನಾವು ಮಾಡಿದ್ದೆವು ಷೆಡ್ ಬಾಡಿಗೆಗೆ ಕೊಡುವ ಬದಲು ಮಾರಾಟಕ್ಕೆ ಕೊಟ್ಟು ಕಂತಿನ ಪ್ರಕಾರ ಹಣವನ್ನು ವಸೂಲು ಮಾಡತಕ್ಕ ಯೋಜನೆ ಮೊದಲು ಇದ್ದುದನ್ನು ಡಿಸ್‌ಕಂಟಿನ್ಯೂ ಮಾಡಿದ್ದೀರಿ. ಬಾಡಿಗೆ ವಸೂಲಾತಿ ಇದೆಲ್ಲಾ ತೊಂದರೆಯಾಗುವುದರಿಂದ ಹಿಂದಿನ ಓನ್ ಯುವರ್, ಓನ್ ಷೆಡ್ ಯೋಜನೆಯನ್ನು ಮುಂದುವರಿಸುವುದಕ್ಕೆ ಕಾರ್ಯ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತಿದ್ದೇನೆ. ಸಣ್ಣ ಕೈಗಾರಿಕೆ ಬೆಳೆಯುವುದಕ್ಕೆ ಇದು ಉಪಯುಕ್ತವಾದ ಯೋಜನೆ. ನಮ್ಮ ಅನುಭವದ ಪ್ರಕಾರ ಆ ಯೋಜನೆ ಯಶಸ್ವಿಯಾಗಿದೆ. ಆದ್ದರಿಂದ ಅದನ್ನು ಏತಕ್ಕೆ ಮುಂದುವರೆಸಬಾರದು ? ಎರಡನೆಯದಾಗಿ ಸಿಲ್ಕ್ ವೀವರ್ಸ್‌ಗೆ ವಿಶ್ವ ಬ್ಯಾಂಕಿನ ಯೋಜನೆ ಆಗುವುದಿಲ್ಲ ಎಂದು ಹೇಳಿದ್ದೀರಿ. ಈ ವಿಚಾರದಲ್ಲಿ ಡಚ್ ಸ್ಕೀಮ್ ಇದೆ. ಅದನ್ನು ಮುಗಿಸಿ ಈ ಸ್ಕೀಮನ್ನು ವಿಶ್ವಬ್ಯಾಂಕ್ ಒಪ್ಪದಿದ್ದರೆ ಬೈಲಾಟರಲ್ ಅಸಿಸ್ಟೆನ್ಸ್ ಎಂದು ಮಾಡುವ ಬಗ್ಗೆ ಮಾತನಾಡಬೇಕು. ತಾತ್ವಿಕವಾಗಿ ಇದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದರೂ it is a useful scheme, in view of the experience of the Dutch Government they may be agreeable also. ಡಚ್ ಸ್ಕೀಮನ್ನು ೧೯೮೬ರಲ್ಲಿ ಮುಗಿಸಬೇಕು. ಆನ್ ಗೋಯಿಂಗ್ ಸ್ಕೀಮನ್ನು ಮುಗಿಸಿ ೧೯೮೭ರಲ್ಲಿ ಇದನ್ನು ತೆಗೆದುಕೊಳ್ಳುವುದಕ್ಕೆ ಏತಕ್ಕೆ ಪ್ರಯತ್ನ ಮಾಡಬಾರದು ? ಮೂರನೆಯದಾಗಿ ಮಲ್ಟಿಪರ್ಪಸ್ ಕೋ–ಆಪರೇಟೀವ್ ಸೊಸೈಟಿಯನ್ನು ಖಾದಿ ಬೋರ್ಡಿನ ಮೂಲಕ ಮಾಡುವ ಹೊಸ ಪ್ರಯೋಗವನ್ನು ನೀವು ಮಾಡಿದ್ದೀರಿ. ೫೦–೬೦ ಸೊಸೈಟಿಗಳನ್ನು ಮೊದಲು ಮಾಡಿ ನಂತರ ೧೭೫ ತಾಲ್ಲೂಕ್‌ಗಳಲ್ಲಿ ವಿಸ್ತಾರ ಮಾಡಬೇಕು, ಸಮಗ್ರವಾಗಿ ಖಾದಿ ಕೈಗಾರಿಕೆ ಅಭಿವೃದ್ಧಿಯಾಗಬೇಕು ಎಂಬ ಉದ್ದೇಶದಿಂದ ಪ್ರಾರಂಭ ಮಾಡಿದ್ದೀರಿ. ಪ್ರಾರಂಭ ಚೆನ್ನಾಗಿತ್ತು.

ಇದಕ್ಕೆ ಇಂಡಸ್ಟ್ರಿಯೇಲ್ ಎಕ್ಸ್‌ಟೆನ್‌ಷನ್ ಆಫೀಸರನ್ನು ತಾಲ್ಲೂಕಾ ಲೆವಲ್‌ನಲ್ಲಿ ಎಕ್ಸ್‌ಅಫಿಷಿಯೋ ಸೆಕ್ರೆಟರಿ ಎಂದು ಮಾಡಿದ್ದರು. ಆದರೆ ಅವರು ಆ ಕೆಲಸವನ್ನು ನೋಡುವುದಿಲ್ಲ. ಇದರಿಂದ ಅದು ಹಾಳಾಗಿದೆ. ಆದ್ದರಿಂದ ಅದಕ್ಕೆ ಪರ್ಮನೆಂಟ್ ಸೆಕ್ರೆಟರಿಯನ್ನು ಮಾಡಿ. ಇಲ್ಲದಿದ್ದರೆ ಎಕ್ಸ್‌ಅಫಿಷಿಯೊ ಸೆಕ್ರೆಟರಿ ಏನಿದ್ದಾರೆ ಅವರೇ ಸಮರ್ಪಕವಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಿ. ಹಾಗೆ ಮಾಡದಿದ್ದರೆ ಕೆಲಸವಾಗುವುದು ತುಂಬಾ ಕಷ್ಟವಾಗುತ್ತದೆ. ಮಲ್ಟಿಪರ್ಪಸ್ ಸೊಸೈಟಿಗಳು ಈಗ ದುರ್ಗತಿಗೆ ಬಂದಿಳಿದಿವೆ. ಆದ್ದರಿಂದ ಅದಕ್ಕೆ ಪುನಃ ಜೀವ ಕೊಡತಕ್ಕ ಪ್ರಯತ್ನ ಮಾಡಬೇಕಾಗಿದೆ.

ಅಧ್ಯಕ್ಷರೇ, "Own your own shed" scheme ೧೯೮೦ ರಲ್ಲಿ ಜಾರಿಗೆ ಬಂತು. ಇದರಿಂದ ಎಷ್ಟೋ ಸಣ್ಣ ಕೈಗಾರಿಕೆಗಳಿಗೆ ಸಹಾಯಕವಾಗಿದೆ. ೧೯೮೩ ರಲ್ಲಿ ಜನತಾ ಸರ್ಕಾರ ಬಂದ ನಂತರ ಪುನಃ ಈ ಸ್ಕೀಮ್‌ಗೆ ಎಕ್ಸ್‌ಟೆನ್‌ಷನ್ ಕೊಟ್ಟರು. ಈ ಸ್ಕೀಮ್‌ನಲ್ಲಿ ಈಗಾಗಲೇ ಇನ್ನೂ ೩೨೦ ಪ್ರಕರಣಗಳು ಪೆಂಡಿಂಗ್‌ನಲ್ಲಿವೆ. ಈ ಬಗ್ಗೆ ನಾವು ಕಮಿಟ್‌ಮೆಂಟ್ ಮಾಡಿಕೊಂಡಿದ್ದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಆಕ್ಷೇಪ ಹಾಕಿದ್ದಾರೆ ಆದರೂ ಈ ೩೨೦ ಶೆಡ್‌ಗಳನ್ನು ಆದಷ್ಟು ಬೇಗ ಅವರಿಗೆ ಕೊಡುವುದರ ಬಗ್ಗೆ ನಮಗೆ ವಿಶ್ವಾಸ ಇದೆ. ಈ ಸ್ಕೀಮನ್ನು ಪುನಃ ಜಾರಿಗೆ ತರುವುದರಲ್ಲಿ ಇರುವ ಸಮಸ್ಯೆ ಏನೆಂದರೆ ಈ ಶೆಡ್‌ಗಳ ಬಗ್ಗೆ ಕಿಮ್ಮತ್ತಿನ ಲೆಕ್ಕ ಹಾಕಬೇಕಾದರೆ ಆ ಕಟ್ಟಡವನ್ನು ಕಟ್ಟಿದ ದಿನಾಂಕದಿಂದ ಅದರ ಲೆಕ್ಕವನ್ನು ತೆಗೆದುಕೊಳ್ಳಬೇಕು. ಹಾಗೂ ಈ ಶೆಡ್‌ಗಳನ್ನು ದೊಡ್ಡ ಪ್ರಮಾಣದಲ್ಲಿ ಅದಗಲ್ಲೂ ಹಿಂದುಳಿದ ಪ್ರದೇಶದಲ್ಲಿ ಮಾಡಬೇಕಾದರೆ ಸಾಧ್ಯವಿಲ್ಲದ ಮಾತು. ಹಾಗೂ ಹಿಂದೆ ಕಟ್ಟಿದಂತಹ ಶೆಡ್‌ಗಳು ಸಹ ಬೆಂಗಳೂರು, ಬೆಳಗಾಂ ಮುಂತಾದ ಕಡೆಗಳಲ್ಲಿ ಇವೆ. ಆದರೆ ಇವತ್ತು ಸರ್ಕಾರದಿಂದ ಶೆಡ್‌ಗಳನ್ನು ಎಸ್.ಎಸ್.ಐ. ಕಾರ್ಪೊರೇಷನ್‌ಗೆ ಕೊಟ್ಟು ಅವರು ಮಾರ್ಟ್‌ಗೇಜ್ ಮಾಡಿ ಸೆಕ್ಯುರಿಟಿ ಕೊಟ್ಟು ಅದರ ಮೇಲೆ ಸಾಲ ತೆಗೆದುಕೊಂಡು ದೊಡ್ಡ ಪ್ರಮಾಣದಲ್ಲಿ ಮಳಿಗೆ ಕಟ್ಟಬೇಕೆಂದು ಯೋಜನೆ ಹಾಕಿಕೊಂಡಿದೆ. ಅದು ಸಾಧ್ಯವಿಲ್ಲದ ಮಾತು. ಇನ್ನು ಬೈಲ್ಯಾಟರಲ್ ಸ್ಕೀಮ್ ಏನು ಚಾಲನೆಯಲ್ಲಿ ಇದೆ ಅದನ್ನು ಗಮನಕ್ಕೆ ತೆಗೆದುಕೊಂಡು ಮಾಡುತ್ತೇವೆ. ಇನ್ನು ಮಲ್ಟಿ-ಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಗಳ ಬಗ್ಗೆ ಹೇಳಿದ್ದಾರೆ. ಅಲ್ಲಿ ಒಂದು ಸರಿಯಾದ ವ್ಯವಸ್ಥೆ ಇಲ್ಲ, ಅಲ್ಲಿ ಇರುವ ಸೆಕ್ರೆಟರಿಗಳವರಿಂದ ಸರಿಯಾಗಿ ಕೆಲಸ ಆಗಬೇಕು ಎಂದು ಹೇಳಿದ್ದಾರೆ. ಅಲ್ಲಿಗೆ ಪರ್ಮನೆಂಟ್ ಸೆಕ್ರೆಟರಿಗಳನ್ನು ಪೋಸ್ಟ್ ಮಾಡುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಲಿಡ್‌ಕರ್‌ನಲ್ಲಿ ಆದಂತಹ ಬೆಂಕಿ ಪ್ರಕರಣದ ಬಗ್ಗೆ ಸಿ.ಒ.ಡಿ. ತನಿಖೆ ಮಾಡುತ್ತೇವೆಂದು ಹೇಳಿದ್ದಾರೆ ಇದರ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಇನ್ನು ಇಂಡಸ್ಟ್ರಿಯಲ್ ಶೆಡ್‌ಗಳನ್ನು ಏನು ಕಟ್ಟುತ್ತಿದ್ದಾರೆ ಅವಕ್ಕೆ ಏಕಾಏಕಿ ರೇಟನ್ನು ಜಾಸ್ತಿ ಮಾಡಿದ್ದಾರೆ. ಹಿಂದೆ ಅದು ಬಹಳ ಕಡಿಮೆ ಇತ್ತು. ಈಗ ತುಂಬಾ ಜಾಸ್ತಿ ಆಗಿದೆ. ಇದನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಿನ್ನೆ ಮೊನ್ನೆ ಯಾರು ಇಂಡಸ್ಟ್ರಿ ಪ್ರಾರಂಭ ಮಾಡಿದ್ದಾರೆ ಅವರಿಗೆ ಕನ್‌ಸೆಷನ್ ಕೊಡುವುದಕ್ಕೆ ದಯಮಾಡಿ ಯೋಚನೆ ಮಾಡಬೇಕು. ಇನ್ನೊಂದು ಮುಖ್ಯ ವಿಷಯ ಏನೆಂದರೆ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗೆ ಸೇಲ್ಸ್ ಟ್ಯಾಕ್ಸ್ ಬಗ್ಗೆ ಹೇಳಿದಿರಿ. ಆದರೆ ನನ್ನ ಪ್ರಶ್ನೆ ಏನೆಂದರೆ, ಈ ಹಿಂದೆ ೧೯೭೧ಕ್ಕೆ ಮುಂಚೆ ಗೌರ್ನಮೆಂಟ್ ಆರ್ಡರ್ ಪ್ರಕಾರ ಮೊದಲ ೫ ವರ್ಷಗಳಲ್ಲಿ ಕಂಪ್ಲೀಟಾಗಿ ಸೇಲ್ಸ್ ಟ್ಯಾಕ್ಸನ್ನು ರೀಫಂಡ್ ಮಾಡುತ್ತಿದ್ದಿರಿ. ಹಾಗೂ ಗೌರ್ನಮೆಂಟ್ ಆರ್ಡರ್ ಸಂಖ್ಯೆ ಎಫ್.ಡಿ.ಸಿ.ಎಸ್. ೭೯ ದಿನಾಂಕ ೧೬-೧೦-೧೯೮೧ರ ಪ್ರಕಾರ ಶೇಕಡಾ ೫೦ ಡಿಡೆಕ್ಟ್ ಮಾಡುವುದಕ್ಕೆ ಅವಕಾಶ ಇದೆ. ಆ ಗೌರ್ನಮೆಂಟ್ ಆರ್ಡರ್‌ನ ೨ನೇ ಭಾಗದಲ್ಲಿ ಈ ರೀತಿ ಹೇಳಿದ್ದೀರಿ.

"The provision of this notification shall also be applicable to such of the small scale units which are gone into commercial production between 1-4-1975 to 31-3-1981 and were eligible for concession of refund of sales-tax paid on raw materials under various Government Orders

ಎಂದು ಹೇಳಿ ಕೊನೆಗೆ.........

such of the units relinguish in writing its pending claim if any under the earlier Government order with regard to the

refund of sales-tax paid on the raw materials purchased during period prior to 1-4-1981..."

ಇದರಿಂದ ಎಷ್ಟೊಂದು ಅನ್ಯಾಯವಾಗುತ್ತದೆಂದರೆ ಹಿಂದೆ ಮೊದಲ ೫ ವರ್ಷಗಳವರೆಗೆ ಕನ್‌ಸೆಷನ್ ಇದ್ದವರಿಗೆ ೧-೪-೧೯೮೧ ಆದಮೇಲೆ ಆ ಆರ್ಡರ್ ಹಳಬರಿಗೆ ಅಪ್ಲೈ ಆಗುವುದಿಲ್ಲ. ಅವರು ರೈಟಿಂಗ್‌ನಲ್ಲಿ ಕೊಟ್ಟರೆ ಅವರಿಗೂ ಕೊಡುತ್ತೇವೆ ಎಂದು ಹೇಳುತ್ತೀರಿ. ಇವತ್ತು ಆ ಸರ್ಕಾರಿ ಆಜ್ಞೆಯೇ ತಪ್ಪು ಇದೆ. ಅದನ್ನು ಪರಿಶೀಲನೆ ಮಾಡಿ ಹಿಂದಿನ ಆರ್ಡರ್ ಪ್ರಕಾರ ೫ ವರ್ಷಗಳವರೆಗೆ ಕನ್‌ಸೆಷನ್ ಕೊಡುವುದಕ್ಕೆ ಅವಕಾಶ ಮಾಡಬೇಕು. ಈ ಬಗ್ಗೆ ನೇರವಾದ ಉತ್ತರವನ್ನು ತಮ್ಮಿಂದ ಬಯಸುತ್ತೇನೆ.

ಶ್ರೀ ಆರ್ ವಿ ದೇಶಪಾಂಡೆ.—ಮಾನ್ಯ ಸದಸ್ಯರು ಶೆಡ್‌ನ ಬಾಡಿಗೆ ಹೆಚ್ಚಾಗಿದೆ ಎಂದು ಹೇಳಿದರು. ೧೯೭೫ ರಲ್ಲಿ ಈ ಶೆಡ್‌ಗಳಿಗೆ ಬಾಡಿಗೆ ಫಿಕ್ಸ್ ಆಗಿದ್ದು ಒಂದು ಸ್ಕ್ವೇರ್ ಫೀಟ್‌ಗೆ ಇಷ್ಟು ಎಂದು ಇದೆ. ಬೆಂಗಳೂರಿನಲ್ಲಿ ೩೩ ಪೈಸೆ; ಬೆಳಗಾಂ, ಹುಬ್ಬಳ್ಳಿ, ಮೈಸೂರಿನಲ್ಲಿ ೨೦ ಪೈಸೆ; ಹಾಗೂ ತಾಲ್ಲೂಕು ಸ್ಥಳಗಳಲ್ಲಿ ೧೦ ಪೈಸೆ ಎಂದು ಇದೆ. ಅನಂತರ ೧೦ ವರ್ಷಗಳು ಆದ ನಂತರ ಈ ಒಂದು ಬಾಡಿಗೆ ಇವತ್ತು ರಿವೈಸ್ ಆಗಿದೆ. ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದವರು ಪ್ರತಿ ಚದರ ಅಡಿಗೆ ಬೆಂಗಳೂರಿನಲ್ಲಿ ೧ ರೂಪಾಯಿ; ಬೆಳಗಾಂ, ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿ ೭೫ ಪೈಸೆ; ತಾಲ್ಲೂಕು ಸ್ಥಳಗಳಲ್ಲಿ ೩೦ ಪೈಸೆ ಎಂದು ನಿರ್ಣಯ ತೆಗೆದುಕೊಂಡಿದ್ದಾರೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ ಸದಸ್ಯರು ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ಬೆಂಗಳೂರಿನಲ್ಲಿ ೧ ರೂ.ನಂತೆ ಪೀಣ್ಯದಲ್ಲಿ ನೀರು, ರಸ್ತೆ, ವಿದ್ಯುತ್ ಸೌಕರ್ಯವನ್ನು ಒದಗಿಸಿಕೊಡುವಾಗ ಇಷ್ಟು ಸಹ ಬಾಡಿಗೆ ಕೊಡಲು ಸಾಧ್ಯವಿಲ್ಲವೇ? ಇವತ್ತು ಅಷ್ಟು ಬೆಲೆಗೆ ಒಂದು ಮನೆಯೂ ಸಿಗುವುದಿಲ್ಲ. ಆದರೂ ಕೂಡಾ ನಾವು ರಾಜ್ಯದಲ್ಲಿ ಪ್ರವಾಸ ಮಾಡುವಾಗ ಈ ಒಂದು ಸಣ್ಣ ಕೈಗಾರಿಕಾ ಸಂಘದವರಿಂದ ಇದನ್ನು ಕಡಿಮೆ ಮಾಡಬೇಕೆಂದು ಬೇಡಿಕೆ ಬಂದಿತ್ತು. ಆ ದೃಷ್ಟಿಯಿಂದ ನಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ೧೫ನೇ ಆಗಸ್ಟ್ ೧೯೮೫ ರಿಂದ ೧೯೮೬ ರವರೆಗೆ ಬೆಂಗಳೂರಿನಲ್ಲಿ ೭೫ ಪೈಸೆಯಂತೆ; ಹುಬ್ಬಳ್ಳಿ, ಬೆಳಗಾಂ ಮತ್ತು ಮೈಸೂರಿನಲ್ಲಿ ೫೦ ಪೈಸೆಯಂತೆ; ಮತ್ತು ತಾಲ್ಲೂಕು ಸ್ಥಳಗಳಲ್ಲಿ ೨೦ ಪೈಸೆಯಂತೆ ಒಂದು ಚದುರ ಅಡಿಗೆ ಬಾಡಿಗೆ ಪಡೆಯಬೇಕೆಂದು ಆದೇಶವನ್ನು ಕೊಟ್ಟಿದ್ದೇವೆ. ಇನ್ನು ರೀಫಂಡ್ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಆ ಒಂದು ಆಜ್ಞೆಯನ್ನು ಹಣಕಾಸಿನ ಇಲಾಖೆಯವರು ಮಾಡಿದ್ದಾರೆ. ಇವತ್ತು ಸೇಲ್ಸ್ ಟ್ಯಾಕ್ಸನ್ನು ರೀಫಂಡ್ ಮಾಡಬೇಕಾದರೆ ಅದನ್ನು ಕೈಗಾರಿಕಾ ಇಲಾಖೆಯವರು ಮಾಡುವುದಕ್ಕಾಗುವುದಿಲ್ಲ. ಯಾವುದೇ ಒಂದು ಕೈಗಾರಿಕೆ ಸೇಲ್ಸ್ ಟ್ಯಾಕ್ಸ್ ಕೊಟ್ಟನಂತರ ಅದು ಕಮರ್ಶಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗುತ್ತದೆ. ಮಾನ್ಯ ಸದಸ್ಯರು ಹೇಳಿದ ಆ ಒಂದು ಆರ್ಡರ್‌ನಿಂದಾಗಿ ಎಷ್ಟೋ ಕೈಗಾರಿಕೆಗಳಿಗೆ ತೊಂದರೆ ಆಗಿರಬಹುದು ಎಂಬುದನ್ನು ನಾನು ಒಪ್ಪುತ್ತೇನೆ. ಹಾಗೂ ಈ ಬಗ್ಗೆ ಎಷ್ಟೋ ಜನ ಕೋರ್ಟಿಗೆ ಹೋಗಿದ್ದಾರೆ. ಹಾಗೂ ಕೇಸ್ ಪೆಂಡಿಂಗ್‌ನಲ್ಲಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನೀವು ಹೊಸಬರಿಗೆ ೫೦ ಪರ್ಸೆಂಟ್ ರಿಯಾಯಿತಿ ಕೊಟ್ಟಿದ್ದೀರಿ. ಆದರೆ ಹಣಕಾಸಿನ ಇಲಾಖೆಯವರು ಕಣ್ಣುಮುಚ್ಚಿಕೊಂಡು ಯಾವ ರೀತಿ ಕಾನೂನು ಮಾಡುತ್ತಾರೆ ಎನ್ನುವುದಕ್ಕೆ ಇದೇ ಒಂದು ಉದಾಹರಣೆ ಸಾಕಾಗುತ್ತದೆ. ಹಣಕಾಸಿನ ಇಲಾಖೆಯವರ ತಪ್ಪಿನಿಂದ ಪಾಪ ಆ ಬಡಪಾಯಿಗಳು ಕೋರ್ಟಿಗೆ ಹೋಗುವುದು ಬೇಡ. ನೀವು ೫೦ ಪರ್ಸೆಂಟ್ ರಿಯಾಯಿತಿ ಕೊಟ್ಟರೆ ಅದನ್ನು ಹಿಂದಿನವರಿಗೂ ಕೊಡಬೇಕು. ಈಗ ಸೇಲ್ಸ್ ಟ್ಯಾಕ್ಸ್ ಅಡ್ಜಸ್ಟ್ ಮಾಡುವುದು ಹೇಗೆ ಎನ್ನುವುದರ ಬಗ್ಗೆ ಆಜ್ಞೆಯನ್ನೂ ಹೊರಡಿಸಿದ್ದೀರಿ. ಈ ರೀತಿಯ ಅನ್ಯಾಯ ಹಣಕಾಸಿನ ಇಲಾಖೆಯವರಿಂದ ಆಗಿರುವಾಗ ಇದನ್ನು ಕ್ಲಾರಿಫೈ ಮಾಡಿ. ಇದರಿಂದ ಅವರು ಕೋರ್ಟಿಗೆ ಹೋಗುವ ಅವಶ್ಯಕತೆ ಇಲ್ಲ. ಇವತ್ತು ಆ ಬಡವರಿಗೆ ಅನುಕೂಲ ಮಾಡಿಕೊಡಿ. ಹಿಂದಿನ ಸರ್ಕಾರ ಅವರಿಗೆ ಒಂದು ಒಳ್ಳೆಯ ಕೆಲಸ ಮಾಡಿತ್ತು.

ಶ್ರೀ ಆರ್. ವಿ. ದೇಶಪಾಂಡೆ.—ನಿಮ್ಮ ಸಮಸ್ಯೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ಹಣಕಾಸಿನ ಇಲಾಖೆಗೆ ಸಂಬಂಧಪಟ್ಟ ವಿಷಯ. ಈ ಒಂದು ಸಮಸ್ಯೆ ನಿವಾರಣೆ ಮಾಡಬೇಕಾದರೆ ಸಮಯ ಬೇಕಾಗುತ್ತದೆ. ಈ ಬಗ್ಗೆ ಪರಿಶೀಲನೆ ಮಾಡಿ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆನ್ನುವ ಭರವಸೆಯನ್ನು ನಾನು ಕೊಡುತ್ತೇನೆ.

ಶ್ರೀ ಎಸ್. ಎಸ್. ನಂಜಯ್ಯನಮಠ್.—ಅಧ್ಯಕ್ಷರೇ, ಕೈಮಗ್ಗದ ಬಗ್ಗೆ ಮಾತನಾಡುತ್ತಾ ಮಾನ್ಯ ಸಚಿವರು, ಕೇಂದ್ರ ಸರ್ಕಾರ ೬೦ ದಿನಗಳು ಇದ್ದ ರಿಬೇಟ್‌ನ್ನು ೩೦ ದಿನಗಳಿಗೆ ಇಳಿಸಿದೆ ಎಂದು ಹೇಳಿದ್ದಾರೆ. ಹಾಗೂ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆಂದು ಹೇಳಿದ್ದಾರೆ. ಆದರೂ ಏನು ಇವತ್ತು ಇದರಿಂದ ನೇಕಾರರಿಗೆ ತೊಂದರೆ ಆಗಿದೆ ಅದನ್ನು ಅರಿತು ಕೇಂದ್ರದಿಂದ ಈ ಬಗ್ಗೆ ಉತ್ತರ ಬರುವವರೆಗೆ ರಾಜ್ಯ ಸರ್ಕಾರವೇ ಈ ಕೈಮಗ್ಗವನ್ನು ಅವಲಂಬಿಸಿರುವವರಿಗೆ ಹೆಚ್ಚಿನ ಅನುಕೂಲವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಹಾಗೂ ಈ ಬಗ್ಗೆ ತಾವು ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಮನವರಿಕೆ ಮಾಡಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಖಾದಿ ಸಂಘ ಸಂಸ್ಥೆಗಳು ಈಗಾಗಲೇ ರಿಬೇಟ್‌ನ್ನು ಕೊಟ್ಟು ಬಿಟ್ಟಿರುವುದರಿಂದ ತಾವು ಈ ೫೯ ಲಕ್ಷ ರೂ. ರಿಬೇಟ್‌ನ್ನು ಕೊಡತಕ್ಕ ವಿಚಾರವನ್ನು ಹೇಳಲೇ ಇಲ್ಲ. ದಯವಿಟ್ಟು ತಾವು ರಿಬೇಟ್ ಕೊಡುವ ವಿಚಾರವನ್ನು ಹೇಳಬೇಕು. ಇದರ ಜೊತೆಗೆ ಪವರ್ ಲೂಂಗಳ ಮೇಲೆ ಇರತಕ್ಕ ೫೦ ಲಕ್ಷ ರೂಪಾಯಿಗಳ ಬಡ್ಡಿಯನ್ನು ತಾವು ಮನ್ನಾ ಮಾಡಿದರೆ ಇದರಿಂದ ನೇಕಾರರಿಗೆ ತುಂಬಾ ಅನುಕೂಲವಾಗುತ್ತದೆ. ಪವರ್ ಲೂಂಗಳನ್ನು ಕೇವಲ ಬಡವರು ಮಾತ್ರ ಹಾಕಿರುವುದಿಲ್ಲ. ಶ್ರೀಮಂತರೂ ಕೂಡ ಹಾಕಿರುತ್ತಾರೆ. ಆದ್ದರಿಂದ ೪–೫ ಪವರ್ ಲೂಂಗಗಳನ್ನು ಯಾರು ಇಟ್ಟು ಕೊಂಡಿರುತ್ತಾರೆ ಅವರಿಗಾದರೂ ಈ ಬಡ್ಡಿಯನ್ನು ಮನ್ನಾ ಮಾಡತಕ್ಕ ವ್ಯವಸ್ಥೆಯನ್ನು ಮಾಡಿದರೆ ತುಂಬಾ ಸಹಾಯವಾಗುತ್ತದೆ. ಏಕೆಂದರೆ ಸಾಮಾನ್ಯವಾಗಿ ೪–೫ ಲೂಂಗಳನ್ನು ಇಟ್ಟು ಕೊಂಡಿರುವವರು ಬಡವರು.

ಇನ್ನು ಡಚ್ ಸ್ಕೀಂನಲ್ಲಿ ೧೦೦ ಮನೆಗಳನ್ನು ಕಟ್ಟಲು ಯೋಜನೆಯನ್ನು ಮಂಜೂರು ಮಾಡಲಾಯಿತು. ಆದರೆ ಈಗ ಕೇವಲ ೫೦ ಮನೆಗಳನ್ನು ಮಾತ್ರ ಕಟ್ಟಲಾಗಿದೆ. ಈಗ ಈ ಭೂ ಸ್ವಾಧೀನ ಮಾಡಿಕೊಳ್ಳುವ ಬಗ್ಗೆ ಕೂಡ ತಕರಾರು ಬಂದಿದೆಯೆಂದು ತಿಳಿದುಬಂದಿದೆ. ಉಳಿದ ಮನೆಗಳನ್ನು ಕಟ್ಟಲು ಬೇಕಾದ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು. ಹ್ಯಾಂಡ್‌ಲೂಂ ಕಾರ್ಪೊರೇಷನನ ನೌಕರರು ೧೫೦ ಜನರಿದ್ದಾರೆ. ಈಗ ಅವರಿಗೆ ೧೦೦ ಮನೆಗಳನ್ನಾದರೂ ಆದಷ್ಟು ಬೇಗ ಕಟ್ಟುವ ವ್ಯವಸ್ಥೆ ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಈ ವಿಷಯದ ಬಗ್ಗೆ ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಡಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ತಮ್ಮ ಮೊದಲನೇ ಸಮಸ್ಯೆಯ ಬಗ್ಗೆ ಹೇಳುವುದಾದರೆ ೬೦ ದಿವಸಗಳವರೆಗೆ ರಿಬೇಟ್‌ನ್ನು ಕೊಡಬೇಕೆಂದು ತಾವು ಕೇಳುತ್ತಿದ್ದೀರಿ. ಈ ವಿಚಾರವನ್ನು ಪರಿಶೀಲಿಸಿ ಸಾಕಷ್ಟು ಒತ್ತಾಯವನ್ನು ಕೇಂದ್ರ ಸರ್ಕಾರದ ಮೇಲೆ ನಾವು ತರುತ್ತೇವೆಂದು ಭರವಸೆ ಕೊಡುತ್ತೇನೆ.

ಇನ್ನು ಎರಡನೆಯದಾಗಿ ಖಾದಿ ಬಗ್ಗೆ ರಿಬೇಟ್ ಕೊಡಬೇಕೆಂದು ತಾವು ಕೇಳಿದ್ದೀರಿ. ಇದಕ್ಕೋಸ್ಕರ ಸರ್ಕಾರದಿಂದ ೫೯ ಲಕ್ಷ ರೂಪಾಯಿಗಳನ್ನು ರಾಜ್ಯಸರ್ಕಾರದಿಂದ ಆದಷ್ಟು ಬೇಗ ಬಿಡುಗಡೆ ಮಾಡುತ್ತೇವೆ.

ಶ್ರೀ ಎಸ್. ಎಸ್. ನಂಜಯ್ಯನ ಮಠ್.—ಇದಕ್ಕೆ ಯಾವುದಾದರೂ ಒಂದು ದಿನವನ್ನು ನಿರ್ದಿಷ್ಟವಾಗಿ ಹೇಳಿ.

ಶ್ರೀ ಆರ್. ವಿ. ದೇಶಪಾಂಡೆ.—ಆ ರೀತಿ ಹೇಳುವುದಕ್ಕಾಗುವುದಿಲ್ಲ. ಇನ್ನು ಪವರ್‌ಲೂಂಗಳ ಮೇಲೆ ಇರತಕ್ಕ ೫೦ ಲಕ್ಷ ರೂಪಾಯಿ ಬಡ್ಡಿಯ ಬಗ್ಗೆ ರಿಯಾಯಿತಿಯನ್ನು ಕೊಡಬೇಕೆಂದು ಕೇಳಿದ್ದೀರಿ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಹಣದ ತೊಂದರೆ ಇರುವುದರಿಂದ ಈ ವರ್ಷದಲ್ಲಿ ಇದನ್ನು ಬಿಡಲು ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ. ಇನ್ನು ಅಮ್ಮನಗಟ್ಟದಲ್ಲಿ ಡಚ್ ಸ್ಕೀಂನಲ್ಲಿ ೧೦೦ ಮನೆಗಳನ್ನು ಕಟ್ಟತಕ್ಕ ಯೋಜನೆ ಇದ್ದು ಅದರಲ್ಲಿ ಕೇವಲ ೫೦ ಮನೆಗಳನ್ನು ಕಟ್ಟಿದ್ದೀರಿ ಇನ್ನುಳಿದ ೫೦ ಮನೆಗಳನ್ನು ಆದಷ್ಟು ಬೇಗ ಕಟ್ಟಿಸಿ ಕೊಡಬೇಕೆಂದು ತಾವು ಹೇಳಿದ್ದೀರಿ. ಆದರೆ ಈ ಡಚ್ ಸ್ಕೀಂನಲ್ಲಿ ೧೦೦ ಮನೆಗಳನ್ನು ಕಟ್ಟಿ ಕೊಡಬೇಕೆಂದು ಇಲ್ಲ. ಅದರಲ್ಲಿ ೫೦ ಮನೆಗಳನ್ನು ಕಟ್ಟುವುದಕ್ಕೆ ಮಾತ್ರ ಅವಕಾಶ ಇರುವುದರಿಂದ ಅದರಂತೆ ನಾವು ೫೦ ಮನೆಗಳನ್ನು ಕಟ್ಟಿಕೊಟ್ಟಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ಹ್ಯಾಂಡ್‌ಲೂಂ ಕಾರ್ಪೊರೇಷನ್‌ನಲ್ಲಿ ಕೆಲಸ ಮಾಡುತ್ತಿರುವ ನೌಕರರ ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ಧಾರಣೆಗಳೆಲ್ಲಾ ತುಟ್ಟಿಯಾಗಿರುವ ಈ ಕಾಲದಲ್ಲಿ

ಆ ಬಡ ನೌಕರರಿಗೆ ಸಿಕ್ಕತಕ್ಕ ಕೂಲಿ ಬಹಳ ಕಡಿಮೆ ಇದೆ. ಅವರು ಇದರಿಂದ ಯಾವ ರೀತಿ ಜೀವನ ಮಾಡಬೇಕು ? ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ. ಕೈಮಗ್ಗದ ಕಾರ್ಪೊರೇಷನ್‌ನಲ್ಲಿ ದುಡಿಯುತ್ತಿರುವ ನೌಕರರಿಗೆ ಹೆಚ್ಚಿನ ವೇಜಸ್ ಸಿಕ್ಕುವಂತೆ ಮಾಡಬೇಕು. ಸರ್ಕಾರದವರು ಅವರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಿ ವೇಜಸ್‌ನ್ನು ಹೆಚ್ಚಿಗೆ ಕೊಡಬೇಕು.

ಎರಡನೆಯದಾಗಿ ಹೇಳುವುದಾದರೆ, ರೈತರು ಸೊಸೈಟಿಗಳಲ್ಲಿ ತೆಗೆದುಕೊಂಡ ಸಾಲವನ್ನು ಸೂಟು ಮಾಡಿದ್ದೀರಿ. ಅದೇ ರೀತಿ ಈ ನೇಕಾರರೂ ಕೂಡ ಸಹಕಾರ ಸಂಘಗಳಲ್ಲಿ ತೆಗೆದುಕೊಂಡ ಸಾಲಕ್ಕೆ ರಿಯಾಯಿತಿಯನ್ನು ಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. ಇಡೀ ರಾಜ್ಯದಲ್ಲಿ ರೈತರ ನಂತರ ಬರತಕ್ಕ ಜನರು ಎಂದರೆ ಈ ನೇಕಾರರು. ಇವರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆ. ಆದರೆ ಸರ್ಕಾರದಲ್ಲಿ ಹಣದ ತೊಂದರೆ ಇದೆಯೆಂದು ಹೇಳುತ್ತಿದ್ದೀರಿ. ಆದರೂ ಕೂಡ ಈ ನೇಕಾರರ ಸಮಸ್ಯೆಯನ್ನು ತಾವು ಹೋಗಲಾಡಿಸಬೇಕು.

ಶ್ರೀ ಆರ್. ವಿ. ದೇಶಪಾಂಡೆ.--ಬಡ ನೇಕಾರರ ಬಗ್ಗೆ ತಾವು ಅನುಕೂಲ ಮಾಡಿ ಕೊಡಬೇಕೆಂದು ಪ್ರಸ್ತಾಪ ಮಾಡಿದ್ದೀರಿ. ಸಂತೋಷ. ಈ ವಿಚಾರ ನನಗೂ ಚೆನ್ನಾಗಿ ಗೊತ್ತಿದೆ. ಅವರಿಗೆ ತುಂಬಾ ಕಡಿಮೆ ವೇಜಸ್ ಸಿಕ್ಕುತ್ತಿದೆ. ಈ ಬಗ್ಗೆ ಕೈಮಗ್ಗ ನಿಗಮ ಏನಿದೆ ಅದು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತದೆ. ಸಾಲವನ್ನು ತೆಗೆದುಕೊಂಡ ನೇಕಾರರಿಗೆ ಸಾಲವನು ಮನ್ನಾ ಮಾಡಿ ಎಂದು ಕೇಳಿದ್ದೀರಿ ಆದರೆ ನಾನು ಈಗಾಗಲೇ ಹೇಳಿದಂತೆ ನಮ್ಮ ಸರ್ಕಾರಕ್ಕೆ ಆರ್ಥಿಕ ಮುಗ್ಗಟ್ಟು ಇರುವುದರಿಂದ ಈ ಬೇಡಿಕೆಯನ್ನು ಈಡೇರಿಸಲು ಸಾಧ್ಯವಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.--ಅಸಿಸ್ಟೆಂಟ್ ಕಮಿಷನರ್‌ರವರು ೪ (೧) ನೋಟಿಫಿಕೇಷನ್, ಮತ್ತು ೬ (೧) ನೋಟಿಫಿಕೇಷನ್ ಕೊಟ್ಟು ರೈತರ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡು ಶೆಡ್ಡುಗಳನ್ನು ಕಟ್ಟುವುದಕ್ಕೆ ಕೊಡುತ್ತಾರೆ. ಷಹಬಾದ್‌ನಲ್ಲಿ ರೈತರ ಜಮೀನನ್ನು ಕೆಲವು ಕಡೆ ತೆಗೆದುಕೊಂಡಿದ್ದಾರೆ. ೪-೫ ಜನ ಅಣ್ಣ ತಮ್ಮಂದಿರಿಗೆ ಸೇರಿದ ೧೦ ಎಕರೆ ಜಮೀನನ್ನು ೪-೫ ಸಾವಿರ ರೂಪಾಯಿ ಬೆಲೆ ಕೊಟ್ಟು ತೆಗೆದುಕೊಂಡಿದ್ದಾರೆ. ಇದು ಬಡವರಿಗೆ ಸೇರಿದ ಜಮೀನು. ಆದರೆ ಇದರ ಪಕ್ಕದಲ್ಲೇ ಇದ್ದಂಥ ದೊಡ್ಡ ದೊಡ್ಡ ಸಾಹುಕಾರರಿಗೆ ಸೇರಿದ ೩೦-೪೦ ಎಕರೆ ಜಮೀನನ್ನು ಸರ್ಕಾರದವರು ತೆಗೆದುಕೊಂಡಿಲ್ಲ. ಬಡವರು ಕೋರ್ಟಿಗೆ ಹೋಗುವುದಕ್ಕೆ ಸಾಧ್ಯವಿಲ್ಲವೆಂದು ಅವರ ಜಮೀನನ್ನು ತೆಗೆದುಕೊಂಡಿದ್ದಾರೆ. ಕಳೆದ ೧೦ ವರ್ಷದಿಂದ ಅಲ್ಲಿ ಬೇಲಿ ಹಾಕಿದ್ದಾರೆ. ಅವರಿಗೆ ಯಾವುದೇ ಪರಿಹಾರ ಹಣವನ್ನೂ ಕೊಟ್ಟಿಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮರ್ವಾ ಎನ್ನುವವರು ಒಂದು ಚಿಕ್ಕ ಕೈಗಾರಿಕೆಯನ್ನು ಹಾಕಿದ್ದಾರೆ. ಅದಕ್ಕೆ ಸರ್ಕಾರ ಸಾಲವನ್ನೂ ಕೂಡ ಕೊಟ್ಟಿದೆ. ಈ ಜಮೀನನ್ನು ಈಗ ಸರ್ಕಾರ ವಶಕ್ಕೆ ತೆಗೆದುಕೊಂಡು ಅನಂತರ ನಿಮಗೇ ಇದನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಇದು ನನ್ನ ಅನುಭವದಲ್ಲೇ ಇದ್ದು ನಾನು ಕೈಗಾರಿಕೆಯನ್ನು ಮಾಡುತ್ತಿರುವುದರಿಂದ ಇದನ್ನು ನಾನು ಏತಕ್ಕೆ ಕೊಡಬೇಕೆಂದು ಕೇಳುತ್ತಿದ್ದಾರೆ. ಸರ್ಕಾರದವರು ಬಡವರ ಜಮೀನುಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡಾಗ ಅದಕ್ಕೆ ಹೆಚ್ಚಿನ ಪರಿಹಾರ ಧನವನ್ನು ಕೊಡುವಂತೆ ವ್ಯವಸ್ಥೆ ಮಾಡುತ್ತೀರಾ ? ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ವಂತವಾಗಿ ನಡೆಸತಕ್ಕ ಬಡ ಜನರಿಗೆ ಸರ್ಕಾರದಿಂದ ಹಣ, ಮತ್ತು ಜಾಗವನ್ನು ಕೊಡುತ್ತೀರಾ ? ಅವರು ಶೆಡ್ಡು ಕಟ್ಟಿಕೊಳ್ಳಲು ಅನುಕೂಲ ಮಾಡಿ ಕೊಡುತ್ತೀರಾ ?

ಶ್ರೀ ಆರ್. ವಿ ದೇಶಪಾಂಡೆ.--ಶೆಡ್ಡುಗಳನ್ನು ಕಟ್ಟಿಕೊಳ್ಳುವವರಿಗೆ ನಾವು ಜಮೀನನ್ನು ಕೊಡುತ್ತೇವೆ. ಯಾವುದೇ ಜಮೀನನ್ನಾಗಲಿ ಸರ್ಕಾರ ಸ್ವಾಧೀನ ಪಡಿಸಿಕೊಂಡಾಗ ಎಷ್ಟು ಪರಿಹಾರವನ್ನು ಕೊಡಬೇಕೆಂದು ಸರ್ಕಾರ ಒಂದು ನಿಗದಿ ಮಾಡಿಕೊಂಡಿರುತ್ತದೆ. ಆದರೆ ಅದಕ್ಕಿಂತ ಹೆಚ್ಚಿಗೆ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.--ಅವರ ಜಮೀನನ್ನು ಅವರಿಗೇ ಮತ್ತೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? You have acquired the lands for putting hup industrial sheds. Now, he is claiming that the land has to be returned back,

but the Commerce and Industries Department people are saying that we have already acquired the land, we will give you other land. But here the cost of his land will be more. What is the relief the Government would give to them ?

SRI R. V. DESHPANDE.—This cannot be a general policy but in case the land which has not been acquired, if we have not constructed industrial sheds, if such cases are brought to my notice I will examine those cases.

MR. SPEAKER.—I call Smt. Muktharunnisa ..

SMT. MUKTHARUNNISA.—Sir, I am happy that our Hon' ble Minister...

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಬೇಗಂರವರು ಕನ್ನಡದಲ್ಲಿ ಮಾತನಾಡಲಿ. ಅವರಿಗೆ ಕನ್ನಡ ಬರುತ್ತದೆ. ಬೇರೆ ಸಂದರ್ಭದಲ್ಲಿ ಅವರು ಕನ್ನಡದಲ್ಲೇ ಮಾತನಾಡುತ್ತಾರೆ...

(ಗೊಂದಲ)

ಅಧ್ಯಕ್ಷರು.—ತಾವೆಲ್ಲರೂ ಕುಳಿತುಕೊಳ್ಳಿ. ಮಾನ್ಯ ನಾರಾಯಣ ಕುಮಾರ್‌ರವರೇ ನೀವು ಇದೇ ರೀತಿ ಮಾಡುವುದಾದರೆ ನಿಮ್ಮ ಮೇಲೆ ನಾನು ಸ್ಟ್ರಿಕ್ಟ್ ಆ್ಯಕ್ಷನ್ ತೆಗೆದು ಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೆ, ಅವರು ಕನ್ನಡದಲ್ಲಿ ಮಾತನಾಡಬೇಕು. ಅವರಿಗೆ ಕನ್ನಡ ಗೊತ್ತು. ಕುಚೋದ್ಯದಿಂದ ಈ ರೀತಿ ಮಾತನಾಡುತ್ತಾರೆ...

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ನಾನೊಂದು ಕ್ರಿಯಾಲೋಪವನ್ನು ಎತ್ತುತ್ತೇನೆ.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಇಲ್ಲ, ಏನೂ ಇಲ್ಲ. ತಾವು ಕೂಡಿರಿ. ಎಲ್ಲರಿಗೂ ಪ್ರೊಟೆಕ್ಷನ್ ಕೊಡುವುದು ನನ್ನ ಕರ್ತವ್ಯ.

ಶ್ರೀ ಆರ್. ಎನ್. ನಾಯಕ್.—ನನ್ನ ಪಾಯಿಂಟ್ ಆಫ್ ಆರ್ಡರ್‌ಗೆ ತಾವು ಅವಕಾಶ ಕೊಡಲೇ ಇಲ್ಲ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಶ್ರೀಮತಿ ಬೇಗಂರವರು ಮಾತನಾಡಲಿ.

ಶ್ರೀ ಜಿ. ನಾರಾಯಣ ಕುಮಾರ್.—ಅವರು ಕನ್ನಡದಲ್ಲೇ ಮಾತನಾಡಲು ತಾವು ತಿಳಿಸಿರಿ.

ಅಧ್ಯಕ್ಷರು.—ತಾವು ಹೆಚ್ಚಾಗಿ ಸಭೆಗೆ ಬರುವುದಿಲ್ಲ. ಬಂದರೆ ಈ ರೀತಿ ಗಲಾಟೆ ಶುರು ಮಾಡುತ್ತೀರಿ.

ಶ್ರೀ ಜಿ. ನಾರಾಯಣ ಕುಮಾರ್.—ಕರ್ನಾಟಕದಲ್ಲಿ ಕನ್ನಡಕ್ಕೆ ಪ್ರಾಧಾನ್ಯತೆ ಕೊಡಬೇಕು. ಆದರಿಂದ, ಅವರು ಕನ್ನಡದಲ್ಲಿ ಮಾತನಾಡುವಂತೆ ತಿಳಿಸಿರಿ.

(ಗಲಾಟೆ)

ಒಬ್ಬ ಮಾನ್ಯ ಸದಸ್ಯರು.—ಶ್ರೀಮತಿ ಬೇಗಂರವರು ಹಿಂದಿಯಲ್ಲಿ ಬೇಕಾದರೆ ಮಾತನಾಡಲಿ, ನಾವು ಕೇಳುತ್ತೇವೆ. ಇಂಗ್ಲೀಷ್ ನಮಗೆ ಸಮೀಪವೋ, ಹಿಂದಿ ಸಮೀಪವೋ ?

ಅಧ್ಯಕ್ಷರು.—ಅವರಿಗೆ ಸರಿಯಾಗಿ ಕನ್ನಡ ಬರುವುದಿಲ್ಲವೆಂದು ನನಗೆ ಗೊತ್ತು. ತಾವು ಕೂಡಿರಿ. ಬೇಗಂರವರೇ ತಾವು ಮಾತನಾಡಿ.

SMT· MUKTHARUNNISA.— Sir, I am happy to note that our Hon'ble Minister has promised to open Women Entrepreneur Institute I would like to know whether he will give technical guidelines to start technical industries or only to small industries like pappad, Chatney, pickle etc; I am asking this question because under self-employment scheme you are paying Rs. 25,000/- for youths — that is the maximum amount In that, women are not entertained sufficiently. I learnt that only Rs. 5,000/- is being paid towards capital to this type of industries. I would ask the Government how could the women come up with this small capital amount. I therefore, request the Hon'ble Minister to take steps to distribute the amount equally among all the entrepreneurs ie., both men and women. Let there not be any discrimination. Women can also do good technical job.

ಶ್ರೀ ಆರ್. ವಿ. ದೇಶಪಾಂಡೆ.—Women Entrepreneur Institute ಈ ಒಂದು ಇನ್‌ಸ್ಟಿಟ್ಯೂಟ್ ಬಗ್ಗೆ ಮಾನ್ಯ ಸದಸ್ಯೆಯರು ಏನು ಹೇಳಿದ್ದಾರೆ, ಅದರ ಬಗ್ಗೆ ಮಾಡೆಲಿಟೀಸ್ ವರ್ಕ್-ಔಟ್ ಆಗಿಲ್ಲ. ನನ್ನ ಸಲಹೆ ಏನೆಂದರೆ, ಈ ಹಪ್ಪಳ, ಚಟ್ನಿ ಇವುಗಳನ್ನು ಮಾಡುವುದಕ್ಕೆ ಹೆಣ್ಣು ಮಕ್ಕಳನ್ನು ಬಿಟ್ಟರೆ, ಬೇರೆಯವರಿಂದ ಮಾಡಿಸಿದರೆ, ಪರಿಸ್ಥಿತಿ ಗಂಭೀರವಾಗುತ್ತದೆ. ಈ ಕೆಲಸ ಅವರಿಂದಲೇ ಆಗಬೇಕು.

ಶ್ರೀ ಜಿ. ನಾರಾಯಣ ಕುಮಾರ್.—ಹಪ್ಪಳ, ಸಂಡಿಗೆ ಇವುಗಳನ್ನು ಇಂಗ್ಲೀಷ್‌ನವರು ತಿನ್ನುತ್ತಾರೆಯೋ ? ಕನ್ನಡದವರಲ್ಲವೇ ?

ಅಧ್ಯಕ್ಷರು.—ನೀವು ಹೀಗೆ ಮಾಡುತ್ತಾ ಹೋದರೆ, ನಿಮ್ಮ ಮೇಲೆ ನಾನು ಸ್ಟ್ರಿಕ್ಟಾಗಿ ಆ್ಯಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀಮತಿ ಮುಕ್ತಾರುನ್ನೀಸಾ.—ಈ ಮನೆಯಲ್ಲಿ ಮಾನ್ಯ ಡಿಸೋಜಾ ಮತ್ತಿತರರು ಇಂಗ್ಲೀಷಿನಲ್ಲಿ ಮಾತನಾಡಿದರೆ. ಅವರು ಏನೂ ಮಾತನಾಡುವುದಿಲ್ಲ. ನಾನು ಒಬ್ಬ ಹೆಣ್ಣುಮಗಳು ಇಂಗ್ಲೀಷಿನಲ್ಲಿ ಮಾತನಾಡುವುದಕ್ಕೆ ಪ್ರಾರಂಭಮಾಡಿದರೆ ಸಾಕು ಅವರು ಈ ರೀತಿ ಗಲಾಟೆ ಮಾಡುವುದು ಸರಿಯಲ್ಲ. ನಾನು ಮಾತನಾಡುವುದಕ್ಕೆ ಶುರುಮಾಡಿದಾಗ; ಅವರು ಈ ರೀತಿ ಗಲಾಟೆ ಮಾಡಿದರೆ ನನಗೆ ಏನು ಮಾತನಾಡಬೇಕೆನ್ನುವುದು ಕನ್‌ಫ್ಯೂಜನ್ ಆಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಶ್ರೀ ಜಿ. ನಾರಾಯಣ ಕುಮಾರ್‌ರವರು ಈ ರೀತಿಯಾಗಿ, ಹೆಣ್ಣುಮಕ್ಕಳ ಮೇಲೆ ಗಲಾಟೆ ಮಾಡುವುದು ತಪ್ಪು. ಮುಂದೆ ಹಾಗೇನಾದರೂ ಮಾಡಿದರೆ, ಹೊರಕ್ಕೆ ಕಳಿಸಬೇಕು.

ಅಧ್ಯಕ್ಷರು.—ಅದಕ್ಕೆ ನಾನು ಅವರಿಗೆ ವಾರ್ನಿಂಗ್ ಕೊಟ್ಟಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಹಪ್ಪಳ, ಚಟ್ನಿ ಮಾಡುವ ಬಗ್ಗೆ ಅವರು ಹೇಳಿದ್ದಾರೆ. ಅದರ ಬಗ್ಗೆ ಟೆಕ್ನಿಕಲ್ ಗೈಡೆನ್ಸ್ ಸಹ ಕೊಡುತ್ತೇವೆ. ಮಾನ್ಯ ಸದಸ್ಯೆಯರು ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಂ ಬಗ್ಗೆ ಇದರಲ್ಲಿ ಸಾಕಷ್ಟು ಪ್ರಾಧಾನ್ಯತೆ ಸಿಕ್ಕುತ್ತಿಲ್ಲವೆಂದು ಹೇಳಿದ್ದಾರೆ. ನಾನು ಅದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮೊದಲನೆಯದಾಗಿ, ಈ ಡಿಆರ್‌ಡಿಎಸ್ ಮತ್ತು ಇಂಡಸ್ಟ್ರೀಸ್ ಇಲಾಖೆ ಎರಡೂ ಸಮನ್ವಯಗೊಂಡು ರಾಜ್ಯದಲ್ಲಿ ೧೯೮೩-೮೪ರಲ್ಲಿ ಸಾಮೂಹಿಕ ಕಾರ್ಯಾಗಾರ ಕಟ್ಟಲು ಒಂದೊಂದು ತಾಲ್ಲೂಕಿಗೆ ಒಂದು ಲಕ್ಷ ರೂಪಾಯಿಯ ಯೋಜನೆ ಹಾಕಿಕೊಂಡಿದ್ದರು. ಈಗ ಅದು ನಿಂತು ಹೋಗಿದೆ. ಅದನ್ನು ಮುಂದುವರಿಸುತ್ತೀರಾ? ಕುಶಲ ಕೈಗಾರಿಕೆಗಳು, ಅಂದರೆ ಕುಂಭಾರ, ಬಡಗಿ ಯಾರೇ ಆಗಲಿ, ಅವರಿಗೊಂದು ಸಾಮೂಹಿಕ ಕಾರ್ಯಾಗಾರವನ್ನು ಈ ಎರಡೂ ಇಲಾಖೆಗಳು ಸಮನ್ವಯಗೊಂಡಂತೆ ಕಟ್ಟಲು ಏನಾದರೂ ಯೋಚನೆ ಮಾಡಿದ್ದೀರಾ?

ಶ್ರೀ ಆರ್.ವಿ. ದೇಶಪಾಂಡೆ.—ಇದರ ಬಗ್ಗೆ ವಿವರವಾದ ಮಾಹಿತಿ ಈಗ ನನ್ನಲ್ಲಿ ಇಲ್ಲ, ತರಿಸಿ ನೋಡುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ, ಖಾದಿ ಬೋರ್ಡ್ ಸ್ಥಾಪನೆಯಾಗಿ ಬಹಳ ದಿವಸಗಳಾಗಿದೆ ಎನ್ನುವುದು ಗೊತ್ತಿದೆ. ದೇಶಪ್ರೇಮದ ಸಂಕೇತವಾಗಿರತಕ್ಕ ದೊಡ್ಡ ವಸ್ತು ಖಾದಿ ಎನ್ನುವುದು ಗೊತ್ತಿದೆ ಹೀಗಿರುವಾಗ, ಕರ್ನಾಟಕದಲ್ಲಿ ಇದನ್ನು ಆದಷ್ಟು ಪ್ರಚಾರ ಮಾಡಿ, ಹೆಚ್ಚು ಜನರು ಕೊಂಡುಕೊಳ್ಳುವುದಕ್ಕೆ ಏನಾದರೂ ಒಂದು ಹೊಸ ವ್ಯವಸ್ಥೆ ಮಾಡಿದ್ದೀರಾ? ಎರಡನೆಯದಾಗಿ ಖಾದಿ ಬೋರ್ಡಿನಲ್ಲಿರತಕ್ಕಂತಹಸರ್ವಜನರೂ ಕೂಡ ಖಾದಿ ತೊಡುವ ಹಾಗೆ ಮತ್ತು ಸದಸ್ಯರು ಕೂಡ ಖಾದಿಯನ್ನು ತೊಡುವ ಹಾಗೆ ಒಂದು ಉಪಾಯ ತಂತ್ರವನ್ನು ಮಾಡುತ್ತೀರಾ? ಮೂರನೆಯದಾಗಿ, ಖಾದಿ ಬೋರ್ಡಿನ ನೌಕರರ ಬೇಡಿಕೆ ಬಹಳ ಕಾಲದಿಂದ ಇದೆ. ಇದನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಕಂಡಿದ್ದೇವೆ, ಕೇಳಿದ್ದೇವೆ. ಆದುದರಿಂದ ತಾವು ಏನಾದರೂ ಅವರ ಬೇಡಿಕೆಯನ್ನು ಬಗೆಹರಿಸುತ್ತೀರಾ ?

ಶ್ರೀ ಆರ್.ವಿ. ದೇಶಪಾಂಡೆ.—ಒಂದು ಮಾತನ್ನು ನಾನು ಒಪ್ಪುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಈ ಖಾದಿಯ ಬಗ್ಗೆ ಎಷ್ಟು ಪ್ರಚಾರ ಆಗಬೇಕಿತ್ತೋ ಅಷ್ಟು ಪ್ರಚಾರವಾಗಿಲ್ಲ ಮತ್ತು ಈ ಖಾದಿ ಮಂಡಳಿಯ ಲಾಭ ಪಡೆದುಕೊಂಡವರು ಬೆಂಗಳೂರಿನಲ್ಲಿ ಮತ್ತು ಅದರ ಸುತ್ತಮುತ್ತಲೂ ಹೆಚ್ಚಾಗಿದ್ದಾರೆ, ಅದನ್ನೂ ನಾನು ಒಪ್ಪುತ್ತೇನೆ. ತಾಲ್ಲೂಕು ಲೆವೆಲ್‌ನಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಲು ಸಿಬ್ಬಂದಿಯನ್ನು ಪೋಸ್ಟ್ ಮಾಡುತ್ತೇವೆ. ಖಾದಿ ಮಂಡಳಿ ಕಾರ್ಯಕ್ರಮದಲ್ಲಿ ಇದೂ ಇದೆ. ಇದಕ್ಕೆ ಸಾಕಷ್ಟು ಪ್ರಚಾರ ಮಾಡಬೇಕು ಎರಡನೆಯದಾಗಿ, ಖಾದಿ ಮಂಡಳಿಯಲ್ಲಿ ಕೆಲಸ ಮಾಡುವ ಎಲ್ಲಾ ಜನರು ಕಂಪಲ್ಸರಿಯಾಗಿ ಖಾದಿ ಬಟ್ಟೆಯನ್ನೇ ತೊಡಿರಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಕಾರಣ, ಡೆಮಾಕ್ರಾಟಿಕ್ ಕಂಟ್ರಿಯಲ್ಲಿ ಯಾರು ಯಾವ ಬಟ್ಟೆಯನ್ನಾದರೂ ಹಾಕಿಕೊಳ್ಳಬಹುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಾಮಿ, ಇದು ಖಾದಿ ಬೋರ್ಡ್ ರೂಲ್ಸ್‌ನಲ್ಲಿದೆ. ಸಿ ಅಂಡ್ ಆರ್ ರೂಲ್ಸ್‌ನಲ್ಲೂ ಇದೆ. ನಾನು ಕೆಲವು ಕಡೆ ಟೂರ್‌ಗೆ ಹೋಗಿದ್ದಾಗ ಖಾದಿ ಬೋರ್ಡ್ ಎಂಪ್ಲಾಯೀಸ್ ನನ್ನ ಹತ್ತಿರ ಬಂದಿದ್ದರು. ಅವರಿಗೆ ಆಗ ನಾನು ಹೇಳಿದ್ದೇನೆ. I don't think the relevant rule has been amended.

SRI R. V. DESHPANDE.—I will look into that. If it is there I will implement it. ಮುಷ್ಕರದ ಬಗ್ಗೆ ಈಗಾಗಲೇ ಮುಖಂಡರ ಹತ್ತಿರ ಚರ್ಚೆ ಮಾಡಿದ್ದೇನೆ. ಅವರ ಸಮಸ್ಯೆಯನ್ನು ಸಹಾನುಭೂತಿಯಿಂದ ಬಗೆಹರಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೆ, ಈ ಗಂಧದಕಡ್ಡಿ ತಯಾರಿಕೆ ಏನಿದೆ. ಇದನ್ನು ಸಾಮಾನ್ಯವಾಗಿ ಮೈಸೂರು ನಗರದಿಂದ ಹಿಡಿದು ಬೆಂಗಳೂರು ನಗರದ ತನಕ ಹಲವಾರು ಶ್ರೀಮಂತರ ಕೈಯಲ್ಲಿ ಸಿಕ್ಕಿಹಾಕಿಕೊಂಡಿರತಕ್ಕ ಈ ಒಂದು ಕೈಗಾರಿಕೆಯಾಗಿದೆ. ಸಾಮಾನ್ಯವಾಗಿ ಇದನ್ನು ತಯಾರು ಮಾಡತಕ್ಕಂತಹ ಜನರು ಬಹಳ ಬಡವರಾಗಿದ್ದಾರೆ. ಬಡ ಕುಟುಂಬದವರೇ ಈ ಕೆಲಸವನ್ನು ಮಾಡುತ್ತಾರೆ. ಮನೆಮನೆಗಳಲ್ಲೂ ಇದನ್ನು ತಯಾರು ಮಾಡುತ್ತಾರೆ. ಈ ಬಡವರು ತಯಾರು ಮಾಡಿದಂತಹ ಗಂಧದ ಕಡ್ಡಿಗಳನ್ನು ಶ್ರೀಮಂತರು ಕಡಿಮೆ ಬೆಲೆಯಲ್ಲಿ ಕೊಂಡುಕೊಳ್ಳುತ್ತಾರೆ ಮತ್ತು ಹೆಚ್ಚಿನ ಬೆಲೆಗೆ ಮಾರಿಕೊಳ್ಳುತ್ತಾರೆ. ಶ್ರೀಮಂತರು ಒಬ್ಬೊಬ್ಬರು ಎಂಟು, ಹತ್ತು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ಗಂಧದ ಕಡ್ಡಿಗಳನ್ನು ದೇಶದೇಶಗಳಿಗೆ ರಫ್ತು ಮಾಡಿ, ಹೆಚ್ಚಿನ ಲಾಭವನ್ನು ಗಳಿಸಿಕೊಳ್ಳುತ್ತಿದ್ದಾರೆ. ಗಂಧದ ಕಡ್ಡಿಗಳನ್ನು ಮನೆಮನೆಗಳಲ್ಲಿ ಆ ಬಡವರು ಏನು ತಯಾರು ಮಾಡುತ್ತಿದ್ದಾರೆ, ಅವರಿಗೆ ನೀವೇ ಹಣಕೊಟ್ಟು ತಯಾರು ಮಾಡುವ ಹಾಗೆ ಏನಾದರೂ ಒಂದು ವ್ಯವಸ್ಥೆ ಮಾಡಿ, ಮಾರ್ಕೆಟ್ಟಿನಲ್ಲಿ ಅದನ್ನು ಮಾರಾಟ ಮಾಡುವ ಹಾಗೆ ವ್ಯವಸ್ಥೆ ಮಾಡುತ್ತೀರಾ? ಎನ್ನುವ ಮಾತನ್ನು ಮಾನ್ಯ ಸದಸ್ಯರು ಕೇಳಿದ್ದಾರೆ.

ಕುಶಲಕರ್ಮಿಗಳಿಗೆ ಗಂಧದ ಕಟ್ಟಿಗೆಯನ್ನು ಸಾಕಷ್ಟು ರಿಯಾಯಿತಿ ದರದಲ್ಲಿ ಕೊಡುತ್ತಿದ್ದೇವೆ. ೭೫ ಪರ್ಸೆಂಟ್ ಸಬ್‌ಸಿಡಿ ಕೊಡುತ್ತಿದ್ದೇವೆ. ಅವರು ಮಾಡತಕ್ಕಂಥ ವಸ್ತುಗಳಿಗೂ ಸಹ ನಾವು ಯೋಗ್ಯ ಬೆಲೆಯನ್ನು ಕೊಟ್ಟು ಖರೀದಿ ಮಾಡುತ್ತಿದ್ದೇವೆ. ಆದರೆ ಮಾನ್ಯ ಸದಸ್ಯರು ಹೇಳತಕ್ಕಂಥ ಸಮಸ್ಯೆ ಏನು ಇದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಈಗಾಗಲೇ ನಿಗಮಕ್ಕೆ ಬಂದು ಹೆಚ್ಚಿನ ದರ

ವನ್ನು ಕೊಡಲು ಪರಿಶೀಲನೆ ಮಾಡಬೇಕೆಂದು ತಿಳಿಸಿರುತ್ತೇನೆ. ಆದಷ್ಟು ಜಾಗ್ರತೆಯಾಗಿ ಹೆಚ್ಚಿನ ಪ್ರಮಾಣದಲ್ಲಿ ಇವರುಗಳು ತಯಾರು ಮಾಡಿದಂಥ ವಸ್ತುಗಳನ್ನು ಕೊಂಡುಕೊಳ್ಳಲು ಪ್ರಯತ್ನ ಮಾಡುತ್ತೇನೆಂದು ಭರವಸೆಯನ್ನು ಕೊಡುತ್ತೇನೆ,

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಲಿಡ್ಕರ್‌ನಲ್ಲಿ ಆದಂಥ ಘಟನೆಯ ಬಗ್ಗೆ ಸಿ.ಓ.ಡಿ. ತನಿಖೆ ಮಾಡುತ್ತೇವೆಂದು ಹೇಳಿದರು. ಇದರ ಬಗ್ಗೆ ಆವಂಥ ನಷ್ಟದ ಬಗ್ಗೆ ಒಂದು ಪ್ರಶ್ನೆಯನ್ನು ಹಾಕಿದಾಗ ಇನ್ಶೂರೆನ್ಸ್ ಕ್ಲೈಮ್ ಮಾಡಿದ್ದಾರೆ. ಇನ್ಶೂರೆನ್ಸ್ ಬರುತ್ತದೆಂದು ಹೇಳಿದರು. ಇದು ಕೇಂದ್ರ ಸರ್ಕಾರದ ಅಧೀನದಲ್ಲಿ ಬರತಕ್ಕಂಥ ಕೈಗಾರಿಕಾ ಕೇಂದ, ಇದರಿಂದ ಕೇಂದ್ರ ಸರ್ಕಾರಕ್ಕೆ ಮೋಸ ಮಾಡಿದಂತಾಗುತ್ತದೆ. ಇನ್ಶೂರೆನ್ಸ್ ೨೨ ಲಕ್ಷ ರೂಪಾಯಿಗಳಷ್ಟು ಕ್ಲೈಮ್ ಮಾಡಿರುತ್ತಾರೆಂದು ಹೇಳಿರುತ್ತಾರೆ. ಆದರೆ ಅವರು ಕೊಟ್ಟಿರತಕ್ಕಂಥದ್ದು ಬಹಳ ಕಡಿಮೆ ಹಣ ಇರುತ್ತದೆ. ಆದ್ದರಿಂದ ಇದನ್ನು ಏತಕ್ಕೆ ಸಿಬಿಐ.ಗೆ ರೆಫರ್ ಮಾಡಬಾರದೆಂದು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಸಿ.ಓ.ಡಿ.ಯಿಂದ ತನಿಖೆ ಮಾಡಿಸಬೇಕೆಂದು ಕೇಳಿದ್ದರಿಂದ ಸಿಓಡಿ. ತನಿಖೆ ಮಾಡಿಸಿರುತ್ತೇವೆ. ಸಿಬಿಐ.ಗೆ ರೆಫರ್ ಮಾಡತಕ್ಕಂಥ ಅವಶ್ಯಕತೆ ಇರುವುದಿಲ್ಲ. ೨೨ ಲಕ್ಷ ರೂಪಾಯಿಗಳು ಬೆಂಕಿ ಅನಾಹುತದಿಂದ ನಷ್ಟ ಸಂಭವಿಸಿದೆ ಎಂದು ಹೇಳಿದ್ದರು. ಈಗ ೧೫ ಲಕ್ಷ ರೂಪಾಯಿಗಳು ಇನ್ಶೂರೆನ್ಸ್ ಕಂಪೆನಿಯವರ ಕಡೆಯಿಂದ ಬಂದಿರುತ್ತದೆ. ಸಿ.ಓ.ಡಿ. ತನಿಖೆಯ ಸಂದರ್ಭದಲ್ಲಿ ಅಧಿಕಾರಿಗಳ ಜವಾಬ್ದಾರಿ ಸಾಕಷ್ಟು ಇಲ್ಲದಿದ್ದರೆ ಅಧಿಕಾರಿಗಳ ಮೇಲೆಯೇ ಕ್ರಮ ತೆಗೆದುಕೊಳ್ಳುತ್ತಿದ್ದರು ಎಂದು ಇಷ್ಟು ಹೇಳಿ ನನ್ನ ಖಾತೆಗೆ ಸಂಬಂಧಪಟ್ಟ ಬೇಡಿಕೆಯನ್ನು ಮಂಜೂರು ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇವೆ.

ಶ್ರೀ ಜೆ.ಎಚ್. ಪಟೇಲ್ (ಮಾನ್ಯ ಕೈಗಾರಿಕಾ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ ಕೈಗಾರಿಕಾ ಇಲಾಖೆ ಮತ್ತು ರೇಷ್ಮೆ ಇಲಾಖೆಯ ಬೇಡಿಕೆಗಳ ಮೇಲೆ ಸಾಕಷ್ಟು ಚರ್ಚೆಯಾಗಿದೆ. ನನ್ನ ಸಹೋದ್ಯೋಗಿಗಳು ಬಹುಭಾಗ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಭಾರಿ ಮತ್ತು ಮಧ್ಯಮ ಉದ್ಯಮಗಳ ಇಲಾಖೆಯ ಬೇಡಿಕೆಯ ಬಗ್ಗೆ ಸನ್ಮಾನ್ಯ ಸದಸ್ಯರುಗಳು ಒಂದು ಆಡಳಿತಾತ್ಮಕವಾದಂಥ ಮತ್ತು ಸೈದ್ಧಾಂತಿಕವಾದಂಥ ಆರೋಪಗಳನ್ನು ಮಾಡಿದ್ದಾರೆ, ಒಂದು ವಿಚಾರ ರಾಜ್ಯಾಂಗದಲ್ಲಿರುವ ಹಾಗೆ ಕೈಗಾರಿಕೆಗಳನ್ನು ಹೇಗೆ ನಡೆಸಬೇಕು, ಸರ್ಕಾರದವರು ಈ ಕೈಗಾರಿಕೆಗಳನ್ನು ನಡೆಸಲು ತಳೆದ ಪ್ರಥಮ ಉದ್ದೇಶವೇನು ಎನ್ನುವುದನ್ನು ಹೇಳಬೇಕಾಗುತ್ತದೆ. ಅವುಗಳು ಏನೇ ಇರಲಿ, ಈ ಇಲಾಖೆಯ ಬಗ್ಗೆ ಸಂಶಯ ಬರುವಂತೆ ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರೆ. ಕೆಲವು ವೇಳೆ ಸಮಾಜವಾದದ ಹೆಸರಿನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸಮಾಜವಾದವನ್ನು ನಮ್ಮ ಹಿರಿಯರು ಒಪ್ಪಿಕೊಂಡಿದ್ದಾರೆ. ನಾವೂ ಕೂಡ ಒಪ್ಪಿಕೊಂಡಿರುತ್ತೇವೆ. ಈ ರಾಜ್ಯದಲ್ಲಿ ೧೯೪೯ನೇ ಇಸವಿ ನವೆಂಬರ್ ೨೬ರಂದು Sovereign socialist secular democratic republic ಎಂದು ಒಪ್ಪಿಕೊಂಡಿದ್ದೇವೆ. ನಮಗೋಸ್ಕರವಾಗಿ ಇಂಥ ರಾಜ್ಯಾಂಗವನ್ನು ಒಪ್ಪಿಕೊಂಡಿದ್ದೇವೆ. ಸೋಸಿಯಲಿಸಮ್ ಸೋಷಿಯಲಿಸ್ಟಿಕ್ ಪಾಲಿಸಿಯ ಬಗ್ಗೆ ಜಗತ್ತಿನಲ್ಲಿ ಸಾಕಷ್ಟು ಇವತ್ತು ವಾದ ವಿವಾದಗಳು ಇದೆ. ನಮ್ಮ ಸದನದಲ್ಲೂ ಕೂಡ ಬಹಳ ಜನರು ಇದರ ಬಗ್ಗೆ ಗೊಂದಲದಲ್ಲಿರುವಂತೆ ಕಾಣುತ್ತದೆ. ಆದರೆ ಸಮತೆವಾದ ಸಮಾಜ ಒಂದು ಕಾಲಕ್ಕೆ ಸ್ವೀಕಾರವಾದುದಲ್ಲ. ಕಾಲಕಾಲಕ್ಕೂ ರೂಪಿತವಾಗಿರತಕ್ಕಂಥದ್ದಾಗಿರುತ್ತದೆ. ಈ ಸಿದ್ಧಾಂತದಲ್ಲಿ ಒಂದು ವಿಚಾರವನ್ನು ಹೇಳುವುದಾದರೆ ಇವತ್ತು ಮಾನವ ಸಮಾಜ ಬೆಳೆಯುತ್ತಿರುವ ರೀತಿಯಲ್ಲಿ ವೈಜ್ಞಾನಿಕವಾಗಿ ಹೆಚ್ಚು ಹೆಚ್ಚು ವಿಷಯಗಳನ್ನು, ವಸ್ತುಗಳನ್ನು ಶೋಧನೆ ಮಾಡುತ್ತಾ ಹೋದಹಾಗೆ, ಬದಲಾವಣೆಯಾಗತಕ್ಕಂಥ ಚಲನಾ ಶಕ್ತಿ ಇರತಕ್ಕಂಥದ್ದು ಒಂದು ವಿಚಾರ. ಈಗ ಜಗತ್ತಿನಲ್ಲಿ ಇರತಕ್ಕಂಥದ್ದು ಮೂರು ವಲಯಗಳು ಒಂದು ಕ್ಯಾಪಿಟಲಿಸ್ಟ್ ವರ್ಲ್ಡ್ ಅಂದರೆ ಬಂಡವಾಳ ಶಾಹಿ ಜಗತ್ತು ಮತ್ತೊಂದು ಜಗತ್ತು ಸಮತಾವಾದಿಗಳದು ಮತ್ತೊಂದು ಕಮ್ಯುನಿಸ್ಟ್ ಜಗತ್ತು, ಇವನ್ನು ಬಿಟ್ಟರೆ ಬೇರೆ ಬೇರೆ ಜಗತ್ತಿನಲ್ಲಿ ನಾನಾರೀತಿಯಲ್ಲಿ ಜನರು ಇದ್ದಾರೆ. ಈ ಮೂರು ವ್ಯವಸ್ಥೆಗಳು ಇರತಕ್ಕಂಥ ಪ್ರಪಂಚದಲ್ಲಿ ಕೆಲವು ರಾಷ್ಟ್ರಗಳು ಸಮತಾವಾದದಲ್ಲಿ ಚಿಂತನೆ ಇರತಕ್ಕಂಥವರು ಸಮತಾವಾದಿ ಸಮಾಜವನ್ನು ಒಪ್ಪಿಕೊಂಡಿರುತ್ತಾರೆ. ನಮ್ಮ ಸರ್ಕಾರವೂ ಕೂಡ ಸಮತಾವಾದಿ ಸಮಾಜವನ್ನು ಒಪ್ಪಿಕೊಂಡಿರತಕ್ಕಂಥ ಸರ್ಕಾರವಾಗಿದೆ. ಸಮತಾವಾದ ಸಮಾಜವೆಂದರೆ ಏನು ಅರ್ಥ ? ಅದಕ್ಕೆ ನಾನು ಜಾರ್ಜ್ ಬರ್ನಾರ್ಡ್ ಷಾರವರ ಸೋಷಿಯಲಿಸಮ್‌ನ್ನು ಡಿಫೈನ್ ಮಾಡಲೇ ? ಅಥವಾ

ಕಾರ್ಲ್‌ಮಾರ್ಕ್ಸ್‌ರವರ ಸಮಾಜವಾದವನ್ನು ಡಿಫೈನ್‌ಮಾಡಲೇ ? ನಮ್ಮ ದೇಶದಲ್ಲಿ ಬಹಳ ಮೇಧಾವಿಗಳಾಗಿದ್ದಂಥ ಆಚಾರ್ಯ ನರೇಂದ್ರದೇವ್, ಜಯಪ್ರಕಾಶ್‌ನಾರಾಯಣ್ ರಾಮ್‌ಮನೋಹರ ಲೋಹಿಯಾರವರನ್ನು ನಾನು ಡಿಫೈನ್ ಮಾಡುವುದಿಲ್ಲ ಮತ್ತು ಈವತ್ತು ಈ ಎಲ್ಲಾ ಹಿಂದಿನ ಅನುಭವದ ಆಧಾರದಮೇಲೆ ಒಂದುಕಡೆ ಬಂಡವಾಳಶಾಹಿ ಜಗತ್ತಿನ ಪ್ರಗತಿ ಅಲ್ಲಿ ನಡೆಯುತ್ತಿರತಕ್ಕಂಥ ಉದ್ಯೋಗಗಳ ಪ್ರಗತಿ, ಒಂದು ಕಡೆ ಸಮತವಾದ ಸಮಾಜದ ವಿಚಾರದ ಅಡಿಯಲ್ಲಿರತಕ್ಕ ರಾಷ್ಟ್ರಗಳಲ್ಲಿ ನಡೆಯುತ್ತಿರತಕ್ಕಂಥ ಆರ್ಥಿಕ ಸಮಾಜಿಕ ಬದಲಾವಣೆಗಳು ಏನಿದ್ದಾವೆ ಅವುಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ದೇಶದ ಆರ್ಥಿಕ ಸಂಪನ್ಮೂಲಗಳ ಆಧಾರದಮೇಲೆ, ನಮ್ಮ ದೇಶದಲ್ಲಿರತಕ್ಕ ಮಾನವ ಶಕ್ತಿಯನ್ನು ಹೇಗೆ ಬಳಸಿಕೊಳ್ಳಬೇಕು ಎನ್ನುವ ಆಧಾರದಮೇಲೆ ಯಾವ ತಂತ್ರವನ್ನು ಅನುಸರಿಸಬೇಕು ಎನ್ನುವುದು ನನ್ನ ದೃಷ್ಟಿಯಲ್ಲಿ ರಿಲೆವೆಂಟ್ ಸಮಾಜವಾದ, ನಮ್ಮ ದೇಶದಲ್ಲಿರುವ ಮಾನಶಕ್ತಿ ಏನಿದ್ದಾವೆ, ಆರ್ಥಿಕ ಸ್ಥಿತಿ ಗತಿಗಳು ಏನಿವೆ, ನಮ್ಮ ದೇಶದಲ್ಲಿ ಸಂಪನ್ಮೂಲಗಳು ಏನಿದೆ ಅವುಗಳನ್ನು ಹೇಗೆ ಮಾನವಶಕ್ತಿಯನ್ನು ಉಪಯೋಗಿಸಿಕೊಂಡು ಉತ್ಪಾದನೆ ಮಾಡಿ ಅದನ್ನು ವಿತರಣೆ ಮಾಡುವಾಗ ಕೊನೇ ಮನುಷ್ಯನವರೆವಿಗೂ ತಲುಪತಕ್ಕಂಥಹ ಸಾಮಾಜಿಕ ನ್ಯಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಗೆ ಮಾಡಬೇಕೋ ಆ ರೀತಿಯಾಗಿ ವಿತರಣೆ ಮಾಡಬೇಕಾಗಿದೆ. ಬಹಳ ಜನರಿಗೆ ಉತ್ಪಾದನೆ ಮಾಡುವುದರಲ್ಲಿಯೇ ಬಹಳ ಆಸಕ್ತಿ ಇವೆ. ಉತ್ಪಾದನೆ ಇದನ್ನು ಲೆನಿನ್ ಬಾಷೆಯಲ್ಲಿ ಹೇಳುವುದಾದರೆ ಯಾವುದೇ ಎಕಾನಮಿಯಲ್ಲಿ ಹೇಳುವುದಾದರೆ ಸ್ಟೇಟ್ ಸೆಕ್ಟರ್‌ನಲ್ಲಿ ಇಂಡಸ್ಟ್ರಿಗಳನ್ನು ನಡೆಸಿದರೆ ಕಮ್ಯೂನಿಸಮ್ ಅಲ್ಲ ಅಥವಾ ಸೋಷಿಯಲಿಸಮ್ ಅಲ್ಲ. ಯಾವುದೇ ರಾಷ್ಟ್ರದಲ್ಲಿ ಕೈಗಾರಿಕಾ ಪ್ರಪಂಚದ ಉತ್ಪಾದನೆ ಎಷ್ಟು ಎಂದರೆ ಅದು ರಾಜ್ಯ ಸರ್ಕಾರದ ಅಡಿಯಲ್ಲಿ ರಾಷ್ಟ್ರದ ಅರ್ಥ ವ್ಯವಸ್ಥೆಯನ್ನು ತಾನು ಕಂಟ್ರೋಲ್ ಮಾಡತಕ್ಕ ಶಕ್ತಿ ಅದಕ್ಕೆ ಇರಬೇಕು. ಸುಮ್ಮನೆ ನಾನು ಒಂದು ಫೈವ್‌ಸ್ಟಾರ್ ಹೋಟೆಲ್ ಮಾಡುವುದಕ್ಕೆ ಒಂದು ಪಬ್ಲಿಕ್ ಅಂಡರ್ ಟೇಕಿಂಗ್ ಮಾಡಿದೆ, ಫೇಸ್ ಪೌಡರ್ ಮಾಡುವುದಕ್ಕೆ ಒಂದು ಪಬ್ಲಿಕ್ ಅಂಡರ್ ಟೇಕಿಂಗ್ ಮಾಡಿದೆ. ಬ್ಲೇಡ್ ತಯಾರು ಮಾಡುವುದಕ್ಕೆ ಒಂದು ಮಾಡಿದೆ, ಎಂದು ಹೇಳಿದರೆ ಅದು ಅಲ್ಲ. ಸ್ಟೇಟ್ ಸೆಕ್ಟರ್ ಅಥವಾ ಪಬ್ಲಿಕ್ ಸೆಕ್ಟರ್‌ನಲ್ಲಿ ಅದು ಟೋಟಲ್ ಎಕಾನಮಿಯಲ್ಲಿ ಅದರ ಹೈಟ್ಸ್, ಕಮ್ಯಾಂಡಿಂಗ್ ಪವರ್ ಏನು ಇದೆ ಆ ಇಂಡಸ್ಟ್ರಿ ಸ್ಟೇಟ್ ಸೆಕ್ಟರ್‌ನಲ್ಲಿದೆ ಅದು ಮುಖ್ಯ. ನಮ್ಮ ರಾಷ್ಟ್ರದಲ್ಲಿ ಈವತ್ತು ಸುಮಾರು ೨೦ ಸಾವಿರ ಕೋಟಿ ರೂಪಾಯಿಗಳಷ್ಟು ಕೃಷಿ ಉತ್ಪಾದನೆ ಇರುತ್ತದೆ. ೧೯೮೪–೮೫ರಲ್ಲಿ ೧,೦೬,೫೦೦ ಕೋಟಿ ರೂಪಾಯಿಗಳು. ಈವತ್ತು ಅಗ್ರಿಕಲ್ಚರ್ ಔಟ್‌ಪುಟ್ ೨೦,೦೦೦ ಕೋಟಿ ರೂಪಾಯಿಗಳು ಇದೆ. ಇಂಡಸ್ಟ್ರೀ ಮ್ಯಾನುಫ್ಯಾಕ್ಚರಿಂಗ್ ೧,೦೬,೫೦೦ ಕೋಟಿ ರೂಪಾಯಿಗಳು. ಅಂದರೆ ೬೦ ಸಾವಿರ ಕೋಟಿ ರೂಪಾಯಿಗಳ ಮೌಲ್ಯದ ಉತ್ಪಾದನೆ ಕೃಷಿ ವಲಯದಲ್ಲೂ ೧,೦೬,೫೦೦ ಕೋಟಿ ರೂಪಾಯಿಗಳ ಬೆಲೆಯ ಉತ್ಪಾದನೆ ಔದ್ಯೋಗಿಕ ಕ್ಷೇತ್ರದಲ್ಲಿಯೂ ಆಗಿದೆ. ಇದು ಎಷ್ಟು ಇಂಪ್ರೂವ್ ಆಗುತ್ತಾ ಬಂದಿದೆ ಎಂದರೆ ೧೯೨೦–೨೧ರಲ್ಲಿ ಕೇವಲ ೧೭ ಸಾವಿರ ಕೋಟಿ ರೂಪಾಯಿಗಳು ಇದ್ದುದು ಈಗ ೨೦ ಸಾವಿರ ಕೋಟಿ ರೂಪಾಯಿಂಗಳಿಗೆ ಬಂದಿದೆ. ಯಾವುದು ಎಂದರೆ ಕೃಷಿ ವಲಯದಲ್ಲಿ, ಇನ್ನು ಔದ್ಯೋಗಿಕ ವಲಯದಲ್ಲಿ ಕೇವಲ ೧೫ ಸಾವಿರ ಕೋಟಿ ಇದ್ದುದು, ೧,೦೬,೫೦೦ ಕೋಟಿ ರೂಪಾಯಿಗಳಿಗೆ ಬಂದಿದೆ. ಅಂದರೆ ಈಗ ಉತ್ಪಾದನೆ ಯಾಗಿರತಕ್ಕಂಥದ್ದು ಕೃಷಿ ವಲಯದಲ್ಲಿ ಏನು ಇದೆ ಇದು ಸಾಮೂಹಿಕ ಆಡಳಿತ ಯಜಮಾನಿಕೆಯ ಮೇಲಲ್ಲ ಇರುವುದು. ಸಮಾಜವಾದವೆಂದರೆ ಸಾಮೂಹಿಕ ಅಥವಾ ಸಮಾಜದ ಆಡಳಿತ ಇದ್ದರೆ ಅದು ಸಮಾಜವಾದ ಎನ್ನತಕ್ಕಂಥ ಅಭಿಪ್ರಾಯ ಯಾರಿಗಾದರೂ ಇದ್ದರೆ ಆ ಕಲ್ಪನೆ ಯಾರಿಗಾದರೂ ಇದ್ದರೆ ಅದು ಭ್ರಮೆ. ಕೃಷಿ ಇವೊತ್ತು ಖಾಸಗಿ ವಲಯದಲ್ಲಿರುವುದು, ಕೃಷಿಯನ್ನು ರಾಷ್ಟ್ರೀಕರಣ ಮಾಡಲಿಲ್ಲ. ಜಮೀನನ್ನು ರಾಷ್ಟ್ರೀಕರಣ ಮಾಡಲಿಲ್ಲ. ಕೈಗಾರಿಕೆಗಳಲ್ಲ ಕೆಲವೊಂದು ಕಡೆ ನಾವು ಟೋಟಲ್ ಇನ್‌ವೆಸ್ಟ್‌ಮೆಂಟ್ ಏನು ಇದೆ ಅದು ನಮ್ಮ ರಾಷ್ಟ್ರದಲ್ಲಿ ಆ ಟೋಟಲ್ ಇನ್‌ವೆಸ್ಟ್‌ಮೆಂಟ್‌ನಲ್ಲಿ ೫೦ ಪರ್ಸೆಂಟ್ ಇಲ್ಲ.

ಆದ್ದರಿಂದ ನಾವು ಸಮಾಜವಾದ ಕಲ್ಪನೆ ಮಾಡುವಾಗ ಅಥವಾ ಹೇಳುವಾಗ, ವಿಐಎಸ್‌ಐಎಲ್ ಅನ್ನು ಖಾಸಗಿಯವರಿಗೆ ಕೊಟ್ಟು ಬಿಡುತ್ತಾರೆ, ಇದು ಯಾವ ತರಹ ಸಮಾಜವಾದ ? ಎಂದು ತಮಗೆ ಅಂಶಿಕವಾಗಿ ಬೆ.ಕಾದದುದನ್ನು ಮಾತ್ರ ತೆಗೆದುಕೊಂಡು ಮಾತನಾಡುವುದಿಲ್ಲ. ರಾಷ್ಟ್ರದ ಸಮಗ್ರ ಉತ್ಪಾದನೆ ೧,೦೬,೫೦೦ ಕೋಟಿ ಇದ್ದು, ೨೦ ಸಾವಿರ ಕೋಟಿ ಕೃಷಿ ಇದ್ದರೂ ಪರ್ ಕ್ಯಾಪಿಟಾ ಕನ್ಸ್‌ಪಶನ್ ಎಷ್ಟು ಇದೆ ? The per capita consumption the increase is 1.2%

from 1970-71 to 1984 85. The Industrial production has increased by 14%. The agriculture production has increased by 10.4%. The consumption is only 1.2%. This is very revaling. ಅಂದರೆ ನಮ್ಮ ದೇಶದಲ್ಲಿ ಉತ್ಪಾದನೆ ಆಗತಕ್ಕಂಥಾದ್ದು, ಮೂಲಗಳ ಶಕ್ತಿಗಳು ಯಾರ ಕೈಯಲ್ಲೇ ಇರಲಿ, ಖಾಸಗಿಯವರಿರಲಿ, ಜಾಯಿಂಟ್ ಸೆಕ್ಟರ್ ಇರಲಿ ಅಥವಾ ಕೋಆಪರೇಟಿವ್ ಸೆಕ್ಟರ್ ಇರಲಿ, ಇದ್ದರೂ ನಮ್ಮ ದೇಶದ ಉತ್ಪಾದನೆ ಹೆಚ್ಚು ಆದಂತೆಲ್ಲಾ ಸಾಮಾನ್ಯ ಮನುಷ್ಯನ ಬಳಕೆಯಲ್ಲಿ ಅದು ಪ್ರಕಟವಾಗುತ್ತಿಲ್ಲ. ಆದ್ದರಿಂದಲೇ ಬಡತನ ರೇಖೆಯ ಕೆಳಗೆ ಬರತಕ್ಕಂಥದವರ ಸಂಖ್ಯೆ ವರ್ಷವರ್ಷೇ ಜಾಸ್ತಿಯಾಗುತ್ತಲೇ ಇದೆ. ನಾವೇನು ಸಮಾಜವಾದದ ಮಾತನ್ನು ಆಡಿದ ಹಾಗೆಲ್ಲಾ ಬಡತನ ರೇಖೆಯ ಕೆಳಗೆ ಜನ ಜಾಸ್ತಿಯಾಗಿ ಬರುತ್ತಿದ್ದಾರೆ. ಇದನ್ನು ನಾವು ಸ್ವಲ್ಪ ಗಂಭೀರವಾಗಿ ಆಲೋಚನೆ ಮಾಡಬೇಕು. ಅಲ್ಲದೆ ಸಮಾಜವಾದಿಗಳು ಎಂದು ಅನ್ನಿಸಿಕೊಂಡಿರತಕ್ಕಂಥವರು, ಜಗತ್ತಿನ ಪ್ರಮುಖ ರಾಷ್ಟ್ರಗಳ ಅವರ ಒಂದು ಪರಿಕಲ್ಪನೆ ಏನಿದೆ ? ಪ್ಯಾರಾಮೀಟರ್ಸ್ ಆಫ್ ಸೋಶಿಯಾಲಿಸಮ್ ಇದೂ ಸ್ವಲ್ಪ ಬದಲಾವಣೆಯಾಗುತ್ತಿದೆ. ಯುರೋಪ್ ರಾಷ್ಟ್ರಗಳ ಉದಾಹರಣೆ ಕೊಟ್ಟಾಕ್ಷಣ ಅದು ನಮಗೆ ಸಮಂಜಸ ಎಂದು ಅಲ್ಲ. ಉದಾಹರಣೆಗೆ ಎಂದು ಅಂತ ಹೇಳುತ್ತಿದ್ದೇನೆ. ಗ್ರೀಸ್ ದೇಶದ ಸಮಾಜವಾದಿಗಳ ಪೈಕಿ ಪ್ರಸಿದ್ಧರಾದವರು ಸಹಿತ ಹಳೆಯ ಕಾಲದ ಡಾಗ್ಮೇಟಿಕ್ ಸೋಶಿಯಲಿಸಮ್‌ನ್ನು ಬಿಟ್ಟು ಬಂದಿದ್ದಾರೆ. ಹೋದಸಲ ಚೈನಾದಲ್ಲಿ ನನಗಾದ ಒಂದು ಅನುಭವವನ್ನು ಹೇಳಿದ್ದೆ. ೧೯೮೧ನೇ ಇಸವಿಯಲ್ಲಿ ನಾನು ಚೈನಾ ದೇಶಕ್ಕೆ ಹೋದಾಗ, ಅಲ್ಲಿ ಅಮೆರಿಕಾ, ಫ್ರಾನ್ಸ್, ಜರ್ಮನಿ ದೇಶಗಳ ಹಣ ಹೂಡಿಕೆ ಎಷ್ಟು ರಭಸದಿಂದ ನಡೆದಿದೆ ಎಂದರೆ, ನಾನು ಅಲ್ಲಿಯ ಒಬ್ಬ ಸ್ನೇಹಿತರನ್ನು ಕೇಳಿದೆ "ನಾವು ಕೋಕೋಕೋಲಾವನ್ನು ಹೊರಹಾಕುತ್ತಿರುವಾಗ, ನೀವು ಕೋಕೋಕೋಲಾವನ್ನು ಒಳಗೆ ತರುತ್ತಿದ್ದೀರಿ. ಇದು ಸರಿಯೆ ?" ಎಂದು. ಅದಕ್ಕೆ ಅವರ ಹೆಸರು ಪ್ರೊಫೆಸರ್ ಕೂ ಅಂತ. ಅವರು ಹೇಳಿದರು "ನೀವು ತಪ್ಪು ಮಾಡಿದಿರಿ' ಕುಡಿಯುವ ನೀರನ್ನು ಕೊಡುವುದಕ್ಕಿಂತ ಮುಂಚೆ ಕೋಕೋ ಕೋಲಾವನ್ನು ಕೊಟ್ಟಿರಿ ಅದಕ್ಕೆ ಅದು ಜನರಿಗೆ ಜೀರ್ಣ ಆಗಲಿಲ್ಲ. ನಾವು ಮೊದಲು ಕುಡಿಯುವ ನೀರನ್ನು ಕೊಟ್ಟು ಪ್ರಜೆಗಳನ್ನು ೩೦ ವರ್ಷ ಕಾಲ ಸದೃಢರನ್ನಾಗಿ ಮಾಡಿದ್ದೇವೆ. ಆದ್ದರಿಂದ ಕೋಕೋ ಕೋಲಾವನ್ನು ಕುಡಿದವರು ಮತ್ತು ಮಾಡಿದವರೂ ಕೂಡ ಜೀರ್ಣಿಸಿಕೊಳ್ಳುವುದಕ್ಕೆ ಶಕ್ಯರಾಗಿದ್ದಾರೆ" ಎಂದು. ಚೈನಾದವರು ಅಮೆರಿಕಾ ಫ್ರಾನ್ಸ್, ಜರ್ಮನಿಗಳಿಂದ ಹೂಡಲಾದ ಹಣವನ್ನು ಉಪಯೋಗಿಸಿಕೊಂಡು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಬಲಿಷ್ಠರಾದ ಒಂದು ಪೀಳಿಗೆಯನ್ನು, ಜನಾಂಗವನ್ನು ಅವರು ತಯಾರು ಮಾಡಿದ್ದಾರೆ. ನಾವು ಇದನ್ನು ಮಾಡಲಿಲ್ಲ. ಕುಡಿಯುವ ನೀರನ್ನು ಕೊಟ್ಟಿಲ್ಲ, ಆದರೆ ಏಕಾಏಕಿಯಾಗಿ ೨೧ನೇ ಶತಮಾನದ ಬಗ್ಗೆ ಮಾತನಾಡುತ್ತಿದ್ದೇವೆ, ಕಂಪ್ಯೂಟರೈಜೇಷನ್ ಬಗ್ಗೆ ಮಾತನಾಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೇ, ಈ ತರಹದ ವಿಚಾರಧೋರಣೆ ಯಾವ ಸಮಾಜವಾದವೆಂದು ನನಗೆ ದಿಗ್‌ಭ್ರಮೆಯಾಗುತ್ತಿದೆ. ಮಾನ್ಯ ಸದಸ್ಯರಾದ ಶ್ರೀ ವೆಂಕಟರಾಮಯ್ಯನವರು ಈಗ ಇಲ್ಲಿಲ್ಲ. ಅವರ ಪಾರ್ಟಿಯ ಮುಖಂಡರಾದ ಜ್ಯೋತಿಬಸು ಅವರು ಚೆನ್ನಾಗಿ ಹೇಳಿದ್ದಾರೆ. ಏನೆಂದರೆ ಹಿಂದೂಸ್ತಾನ್ ಲಿವರ್ಸ್, ಮಲ್ಟಿನ್ಯಾಷನಲ್ ಕಂಪನಿಗಳಲ್ಲಿ ದೊಡ್ಡದಾದುದನ್ನು ನಾವು ಇನ್‌ವೈಟ್ ಮಾಡುತ್ತೇವೆ ಎಂದು ಹೇಳಿದರು. ನಾವು ಇಲ್ಲಿ ಅದನ್ನು ವಿಚಾರ ಮಾಡುತ್ತಿದ್ದೇವೆ ಎಂದು ಹೇಳಿದ್ದಕ್ಕೆ. ಇದು ಯಾವ ಸಮಾಜವಾದ ? ಎಂದು ಕೇಳುವುದಕ್ಕೆ ಹೊರಟಿದ್ದಾರೆ......

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಸಮಾಜವಾದವನ್ನು ನಾವು ನೋಡುತ್ತಿದ್ದೇವೆ. ವೆಸ್ಟ್ ಬೆಂಗಾಲ್‌ನವರು ಮಾಡಿದ್ದು ಸರಿಯೆನ್ನುವ ಹಾಗೆ ಮಾತನಾಡುತ್ತಿದ್ದೀರಿ. ನಿಮಗೆ ಇಂಡಿಪೆಂಡೆಂಟ್ ಆಗಿ ಯೋಚನೆ ಮಾಡುವ ಶಕ್ತಿ ಇದೆ. ಬುದ್ಧಿಯನ್ನು ಏಕೆ ಬಾಡಿಗೆಗೆ ಪಡೆಯುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್.—ಬುದ್ಧಿ ಇನ್ನಷ್ಟು ಎರವಲು ಕೊಡುವಷ್ಟು ಇದೆ. ನಾನು ವಿಚಾರ ಮಾಡುತ್ತಿದ್ದುದು ಏನೆಂದರೆ, ಮಾನ್ಯ ಕೃಷ್ಣನ್‌ರವರು, ವೆಂಕಟರಾಮಯ್ಯನವರು, ವಿರಪ್ಪ ಮೊಯಿಲಿ ಮತ್ತು ಕೆ.ಎಚ್. ಶ್ರೀನಿವಾಸ್ ಅವರುಗಳು ಸಾರ್ವಜನಿಕ ಹಣದಿಂದ ನಡೆಯತಕ್ಕ ಕಾರ್ಖಾನೆಗಳನ್ನು ಏನಾದರೂ ನಷ್ಟಗಳನ್ನು ಹೂಡಿ ಖಾಸಗಿ ವಲಯಕ್ಕೆ ಮಾರಾಟ ಮಾಡಿದರೆ ಸಮಾಜ ದೃಷ್ಟಿಯಿಂದ ಒಳ್ಳೆಯದಲ್ಲ ಎಂಬ ಮಾತನ್ನು ಹೇಳಿದರು. ಅದಕ್ಕೆ ನಾನು ಹೇಳುವುದೇನೆಂದರೆ, ಇದು ಎಲ್ಲೋ ಒಂದು ಕಡೆ ಸ್ಟ್ಯಾಟಿಕ್ ಆಗಿ ಇರತಕ್ಕದ್ದಲ್ಲ. It is a moving ideology. It lives along

with the progress of mankind. ಆದ್ದರಿಂದ ಮಾರಾಟ ಮಾಡಲಿಕ್ಕೆ ನೆಪ ಹೂಡ ತಕ್ಕದ್ದೇನಿಲ್ಲ. ನಾನು ಈಗಾಗಲೇ ಹೇಳಿದಹಾಗೆ ಕೈಗಾರಿಕೆಯಲ್ಲಿ ಒಟ್ಟು ೧,೦೬,೫೦೦ ಕೋಟಿಯಲ್ಲಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಸುಮಾರು ೪೪,೦೦೦ ಕೋಟಿ ರೂ ಗಳನ್ನು ಇನ್‌ವೆಸ್ಟ್ ಮೆಂಟ್ ಮಾಡಿದ್ದೇವೆ. ಹೋದವರ್ಷ ೧,೦೦೦ ಕೋಟಿ ಲಾಭ ಬಂದಿದೆ. ೪೪ ಸಾವಿರ ಕೋಟಿಗೆ ೬೦೦ ಕೋಟಿ ಲಾಭ ಬಂದಿದೆ. ನಾನು ಹೇಳುತ್ತೇನೆ, ನಮಗೆ ಕಂಟ್ರೋಲ್ ಇರಬೇಕು. ಎಲೆಕ್ಟ್ರಿಸಿಟಿಯಲ್ಲಿ ಕಂಟ್ರೋಲ್ ಇರಬೇಕು, ಆಯಿಲ್‌ನಲ್ಲಿ ಕಂಟ್ರೋಲ್ ಇರಬೇಕು, ಇದನ್ನು ಖಾಸಗಿಯವರಿಗೆ ಕೊಡುವುದಲ್ಲ, ಲಂಕ್ಷಾನು ಆದರೂ ಚಿಂತೆಯಿಲ್ಲ. From th strategic and total security point of view, they must be Public Undertakings. I agree with you. ದಿನವೊಂದಕ್ಕೆ ಸಾವಿರದ ಇನ್ನೂರರಿಂದ ಸಾವಿರದ ಮುನ್ನೂರು ರೂಪಾಯಿಗಳ ಬಾಡಿಗೆಗೆ ಕೊಡುವ ರೂಮುಗಳನ್ನು ಕಟ್ಟಿ ವಿಸ್ತರಣೆ ಮಾಡುವ ಫೈವ್‌ಸ್ಟಾರ್ ಹೋಟೆಲುಗಳಿಂದ ಯಾವ ಸಮಾಜವಾದವನ್ನು ನಿರೀಕ್ಷಿಸಬಹುದು ? Whom are you serving and why should you incur loss on extending Five Star Hotels ? ಬ್ಲೇಡು. ಸೋಪುಗಳಿಗಷ್ಟೇ ಪ್ರಾಧಾನ್ಯತೆ ಕೊಡಬೇಕೆ ? ವಿದೇಶ ವ್ಯಾಮೋಹದಿಂದ ಕೂಡಿದವರಾಗಿ ಅಲ್ಲಿಯವರು ಇಲ್ಲಿಗೆ ಬಂದಾಗ, ಅವರನ್ನು ಫೈವ್‌ಸ್ಟಾರ್ ಹೋಟೆಲುಗಳಲ್ಲಿ ಉಳಿಸಿಕೊಂಡು ಬಡ್ಡಿ ಆಮೇಲೆ ಕೊಡುತ್ತೇವೆ, ಸಾಲಕೊಡಿ ಎಂದು ಹೇಳಿದರೆ, ಬಡತನ ರೇಖೆಯ ಡಿಯಲ್ಲಿ ಬರುವ ಜನಸಂಖ್ಯೆ ಏಕಪ್ರಕಾರವಾಗಿ ಹೆಚ್ಚುತ್ತಿರುವಾಗ ಇವರು ಸಮಾಜವಾದದ ಬಗ್ಗೆ ಮಾತನಾಡುತ್ತಾರೆ. ನನ್ನನ್ನು ಕೇಳಿದರೆ ಪಬ್ಲಿಕ್ ಅಂಡರ್‌ಟೇಕಿಂಗ್ ಎಂದರೆ ಶಾಸ್ತ್ರೀಯವಾಗಿ ಇಂಥಾದ್ದನ್ನೇ ಉತ್ಪಾದಿಸಬೇಕೆಂದಿಲ್ಲ. ನನ್ನ ದೃಷ್ಟಿಯಲ್ಲಿ ಒಟ್ಟು ಸಂಪತ್ತಿನ ಉತ್ಪಾದನೆಯ ಮೇಲೆ ಸಮಾಜದ ಹಿಡಿತ ಎಷ್ಟು ಮುಖ್ಯವೋ, ಇದು ಹೇಗೆ ಸಮಾಜಕ್ಕೆ ವಿತರಣೆಯಾಗುತ್ತದೆ ಎಂಬುದು ಕೂಡ ಅಷ್ಟೇ ಮುಖ್ಯ. ಆದಕ್ಕಾಗಿಯೇ ನಾನು ಹೇಳುವುದೇನೆಂದರೆ, ಔದ್ಯೋಗಿಕ ರಂಗದಲ್ಲಿ ೧,೦೬,೫೦೦ ಕೋಟಿ ಉತ್ಪಾದನೆ ಈ ವರ್ಷ ಆಗಿದೆ. ಆದರೆ ಬಡತನ ರೇಖೆಯ ಕೆಳಗೆ ಜನರು ಬರುತ್ತಲೇ ಇದ್ದಾರೆ.

ಇವೊತ್ತು ನಮ್ಮ ಹಳ್ಳಿಗಾಡಿನಲ್ಲಿರುವಂತಹ ಜನರ ಪರಿಸ್ಥಿತಿಯಾದರೂ ಏನು? ಈ ಜನರ ಬಗ್ಗೆ ಲೋಹಿಯಾ ಅವರು ಪಂಡಿತ್ ನೆಹರೂ ಅವರು ಮತ್ತು ಮಹಾತ್ಮಾ ಗಾಂಧೀಜಿ ಅವರು ಎಂತಹ ಅಭಿಪ್ರಾಯ ಹೊಂದಿದ್ದರೆಂಬುದನ್ನು ನಾವು ಸ್ವಲ್ಪ ಆಲೋಚನೆ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಲೋಹಿಯಾ ಅವರ ಸಿದ್ಧಾಂತವಾದರೂ ಏನು? He always thinks interms of reaching a part of the society, reaching a maximum attained by the world. That is cosmopolitan. With great respect, Mr. Speaker Sir, I would say that Jawaharlal Nehru was also cosmopolitan. Mahatma Gandhi was a Universalist. ಇವರೆಲ್ಲರೂ ಮೊದಲು ಹಳ್ಳಿಗಳ ಉದ್ಧಾರವಾಗಬೇಕೆಂದು ಹೇಳುತ್ತಿದ್ದರು. ಆದರೆ ಇವೊತ್ತು ಹಳ್ಳಿಗಳಲ್ಲಿ ಸರಿಯಾದ ಕಕ್ಕಸ್ ವ್ಯವಸ್ಥೆ ಇಲ್ಲದಿದ್ದರೂ ಸಹ ಪಟ್ಟಣಗಳಲ್ಲಿ ೫ ಸ್ಟಾರ್ ಹೋಟೇಲ್‌ಗಳನ್ನು ಕಟ್ಟಿಸುತ್ತಿರುವುದು ಸರಿಯೇ? ಹಳ್ಳಿಗಳಲ್ಲಿರುವ ಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲದಿದ್ದರೂ ಸರಿಯೇ, ರಾಕೇಶ್ ಶರ್ಮಾ ಅವರನ್ನು ರಾಕೆಟ್‌ನಲ್ಲಿ ಕಳಿಸಲಾಯಿತು. ಹಳ್ಳಿಗಳಲ್ಲಿರುವ ಚಮ್ಮಾರ ಕಮ್ಮಾರ ಹಾಗೂ ಕುಂಬಾರರಿಗೆ ಕೆಲಸವಿಲ್ಲದೆ ಇವೊತ್ತಿನ ದಿವಸ ಕೆಲಸ ಹುಡುಕಿಕೊಂಡು ಪಟ್ಟಣಗಳಿಗೆ ಬಂದು ಇಲ್ಲಿಯ ಫುಟ್‌ಪಾತಿನಲ್ಲಿ ವಾಸ ಮಾಡುತ್ತಿದ್ದಾರೆ. ಇಂತಹವರಿಗೆ ಹಳ್ಳಿಗಳಲ್ಲಿಯೇ ಕೆಲಸ ಒದಗಿಸುವುದಕ್ಕೆ ಬದಲು ಸರ್ಕಾರದ ಬಂಡವಾಳದಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದು ಸರಿಯೇ? ಇದು ಗಾಂಧಿವಾದ ಆಗಿರಲಿಲ್ಲ. ಇದು ಮಾನವೀಯತೆಯಿಂದ ಕೂಡಿದ ವಾದವೂ ಅಲ್ಲ. ಬೇರೆ ದೇಶದವರು ಯಾವ ರೀತಿ ಬೆಳೆದಿದ್ದಾರೆ, ಅವರ ಆರ್ಥಿಕ, ಸಾಮಾಜಿಕ ಸ್ಥಿತಿಯ ಹಿನ್ನೆಲೆ ಏನು, ಅವರ ಇತಿಹಾಸ ಏನು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳದೆ, ಅಲ್ಲಿಂದ ಇಷ್ಟು. ಇಲ್ಲಿಂದ ಅಷ್ಟು ನಮ್ಮ ದೇಶಕ್ಕೆ ತಂದು ಇಟ್ಟುಕೊಳ್ಳುವುದು ಯಾವ ರೀತಿಯಿಂದಲೂ ಸರಿಯಲ್ಲ, ನೆಹರೂ ಅವರ ಕಾಲದಲ್ಲಿಯೂ ಇದೇ ವಾದವನ್ನು ಕೆಲವರು ಮಾಡಿದರೂ ಅವರು ಕೇಳಲಿಲ್ಲ. ಅವರ ಕಾಲದಲ್ಲಿ ದೊಡ್ಡ ದೊಡ್ಡ ಡ್ಯಾಮ್‌ಗಳನ್ನು ಕಟ್ಟಲಾಯಿತು ಮತ್ತು ದೊಡ್ಡ ದೊಡ್ಡ ಫ್ಯಾಕ್ಟರಿಗಳನ್ನು ಪ್ರಾರಂಭ ಮಾಡಲಾಯಿತು. ಹೀಗೆ ನಾವು ದೊಡ್ಡ ದೊಡ

ಫ್ಯಾಕ್ಟರಿಗಳ ಮೇಲೆ ಸರ್ಕಾರದ ಹಣವನ್ನು ತೊಡಗಿಸುವುದಕ್ಕೆ ಬದಲು ನಮ್ಮ ಜನರನ್ನು ಅಕ್ಷರಸ್ಥರನ್ನಾಗಿ ಮಾಡಿದ್ದರೆ ನಮ್ಮ ದೇಶ ಇನ್ನೂ ಮುಂದೆ ಬರಲು ಸಾಧ್ಯವಾಗುತ್ತಿತ್ತು. ಅದೇ ಚೈನಾ ದೇಶದಲ್ಲಿ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ೧೦೫ ಕೋಟಿ ಜನರನ್ನು ಅಕ್ಷರಸ್ಥರನ್ನಾಗಿ ಮಾಡಿದರು. ಇವೊತ್ತು ಚೈನಾ ದೇಶದಲ್ಲಿ ಅನಕ್ಷರಸ್ಥರೇ ಇಲ್ಲ. ಅಲ್ಲಿನ ಜನರಿಗೆ ಕುಡಿಯಲು ಒಳ್ಳೆಯ ನೀರನ್ನು ಕೊಟ್ಟರು. ಇದರಿಂದ ಆ ಜನರ ಆರೋಗ್ಯ ಸುಧಾರಣೆಯಾಯಿತು. ಅವರ ಮನಸ್ಸು ಸುಧಾರಣೆಯಾಯಿತು. ಇದರಿಂದ ಆ ಜನರು ಢೋಂಗಿತನಕ್ಕೆ ಪೊಳ್ಳು ಘೋಷಣೆಗಳಿಗೆ ಬಲಿ ಬೀಳುವುದಕ್ಕೆ ಅವಕಾಶವಾಗಲಿಲ್ಲ. ಆ ದೇಶದಲ್ಲಿ ಆಂತರಿಕ ಪ್ರಜಾಪ್ರಭುತ್ವ ಎಂಬುದು ಇಲ್ಲದಿರಬಹುದು. ಆದರೆ ಜನರು ಬೇರೆ ರೀತಿಯಿಂದ ಚೆನ್ನಾಗಿದ್ದಾರೆ. There is no illiterate in China, a country with nearly half of the population of the word. ಆದರೆ ಅದು ಕಮ್ಯುನಿಸ್ಟ್ ದೇಶ. ಕಮ್ಯುನಿಸ್ಟರ ಬಗ್ಗೆ ನಾನೂ ನಿಷ್ಠೂರವಾಗಿದ್ದೇನೆ. ಏಕೆಂದರೆ ಅವರದು Dictatorship of Prolitariat and the Dictatorship of the Bourgeoisir. ಇಂತಹವರು ನಮ್ಮ ಯಾವುದೇ ಸಮಾಜವಾದದ ತತ್ವಗಳನ್ನು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ......

SRI M. S. KRISHNAN.—What is Dictatorship and what is democracy? It is a random statement won't convince anybody. We do not want bogus theories to be enunciated here. ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಬಹಳ ಒಳ್ಳೆಯ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಇದರ ಮೇಲೆ ಮಾತನಾಡಲು ನಮಗೂ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಈಗ ಬೇಡ. ತಾವು ಕೊನೆಯಲ್ಲಿ ಬೇಕಾದರೆ ಕ್ಲಾರಿಫಿಕೇಷನ್ ರೂಪದಲ್ಲಿ ಕೇಳಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳು ನಮ್ಮ ರಾಜ್ಯದ ಕೈಗಾರಿಕೆಗಳ ವಿಚಾರಕ್ಕೆ ಬರಲು ಇನ್ನೂ ಒಂದು ಗಂಟೆ ಬೇಕಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್.—ನಾನು ಬೇಕಾದರೆ ನೇರವಾಗಿ ಕೈಗಾರಿಕೆಗಳಿಗೆ ನುಗ್ಗಲು ತಯಾರಿದ್ದೇನೆ. ಆದರೆ ಅದಕ್ಕೂ ಮೊದಲು ನಾವು ಬೇರೆ ಕೆಲವು ಅಂಶಗಳನ್ನು ಗಮನಿಸುವುದು ಒಳ್ಳೆಯದೆಂದು ಕೊಂಡು ಇದನ್ನೆಲ್ಲಾ ಹೇಳುತ್ತಿದ್ದೇನೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳಿಗೆ ಎಲ್ಲೋ ವೋಲ್ಟೇಜ್ ಕಡಿಮೆ ಇರುವಂತೆ ಕಾಣುತ್ತಿದೆ.

ಶ್ರೀ ಜೆ.ಎಚ್. ಪಟೇಲ್.—ಮಾನ್ಯ ಸದಸ್ಯರು ನನಗೆ ವೋಲ್ಟೇಜ್ ಕಡಿಮೆ ಎಂದು ಹೇಳಿದರು. ವೋಲ್ಟೇಜ್ ಕಡಿಮೆ ಇದ್ದರೆ ಟ್ಯೂಬ್-ಲೈಟ್ ಹತ್ತುವುದಿಲ್ಲ. ಆದರೆ ಬಲ್ಬುಗಳು ಹತ್ತುತ್ತವೆ. ಅವರು ಟ್ಯೂಬ್-ಲೈಟ್ ಆದರೆ ನಾನೇನು ಮಾಡಲಿ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಕಡೆ ಒಂದು ಟ್ಯೂಬ್-ಲೈಟ್ ಇರಬಹುದು. ಅದು ತಡವಾಗಿ ಹತ್ತಿಕೊಳ್ಳಬಹುದು. ಆದರೆ ನಿಮ್ಮ ಕಡೆ ಬಹಳ ಟ್ಯೂಬ್-ಲೈಟ್‌ಗಳು ಇವೆ. ಆದ್ದರಿಂದ ಅವುಗಳ ಗತಿ ಏನಾಗಬೇಕು?

ಶ್ರೀ ಕೆ.ಎಚ್. ಶ್ರೀನಿವಾಸ್.—ನಾವು ಏನೇ ಹೇಳಿದರೂ ಸಹ, ಅದು ಮಾನ್ಯ ಪಟೇಲರ ತಲೆಯಲ್ಲಿ ಕೂಡಲೇ ರಿಫ್ಲೆಕ್ಟ್ ಆಗುತ್ತದೆ.

ಶ್ರೀ ಜೆ. ಎಚ್. ಪಟೇಲ್.—ಒಂದಾನೊಂದು ಕಾಲದಲ್ಲಿ ನನಗೂ ಸಹ ನಿಮ್ಮ ತರಹವೇ ಸುಂದರವಾದ ಕೂದಲು ಇತ್ತು. ಈಗ ಇಲ್ಲ ಅಷ್ಟೆ! ನನ್ನ ತಲೆ ಈ ರೀತಿ ಕಂಡರೂ ಸಹ ತಲೆ ಒಳಗಡೆ ಚೆನ್ನಾಗಿದೆ. ಈಗಿನ ಚರ್ಚೆಗೆ ಕೆಲವೊಂದು ವಿಷಯಗಳನ್ನು ಹೇಳುವುದು ಅವಶ್ಯಕವೆಂದುಕೊಂಡು ನಾನು ಹೇಳುತ್ತಿದ್ದೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಮುಖ್ಯವಾಗಿ ಔದ್ಯೋಗಿಕ ವಲಯದಲ್ಲಿ ಉತ್ಪಾದನೆ ಜಾಸ್ತಿ ಇದ್ದರೂ ಸಹ ಕೃಷಿ ವಲಯದಲ್ಲಿ ಮಾತ್ರ ಉತ್ಪಾದನೆ ಕಡಿಮೆಯಾಗಿದೆ. ನಮ್ಮ ರಾಜ್ಯದಲ್ಲಿ ಮಾನ್ಯ ವೀರಪ್ಪ ಮೊಯ್ಲಿ ಅವರು ಹೇಳಿದಂತೆ the generation of wealth from agriculture is 40 o/o and 18 o/o from the Industries. ಅದೇ ನಮ್ಮ ರಾಷ್ಟ್ರಮಟ್ಟ

ದಲ್ಲಿರುವಂತಹ public undertakingsನಲ್ಲಿ 44 thousand croresನ್ನು ನಾವು ತೊಡಗಿಸಿದ್ದೇವೆ. ಆದರೆ ಬಂದಿರುವಂತಹ ಲಾಭವೆಂದರೆ ಕೇವಲ ೯೦೦ ಕೋಟಿ ರೂಪಾಯಿಗಳು ಇಷ್ಟೊಂದು ನಷ್ಟವಾದರೆ ಇವುಗಳನ್ನು ನಡೆಸುವುದಾದರೂ ಹೇಗೆ? ಇದಕ್ಕೆ ನನ್ನ ಸಲಹೆಯಾದರೂ ಇಷ್ಟೆ, ವಿದ್ಯುತ್, ಕಲ್ಲಿದ್ದಲು ಹಾಗೂ ಎಣ್ಣೆಯ ಉತ್ಪಾದನೆಯನ್ನು ಖಾಸಗಿಯವರಿಗೆ ವಹಿಸಿಕೊಡುವುದಕ್ಕಾಗುವುದಿಲ್ಲ. ಆದರೆ ಅನಾವಶ್ಯಕವಾಗಿರುವಂತಹ ಕೆಲವು ಉತ್ಪಾದನೆಗಳು ಏನಿವೆ. ಅಂದರೆ ೫ಸ್ಟಾರ್ ಹೋಟೇಲ್, ಟಾಲ್ಕಂ ಪೌಡರ್, ಬ್ಲೇಡ್ ಮುಂತಾದವನ್ನೆಲ್ಲಾ ಖಾಸಗಿಯವರು ತಯಾರು ಮಾಡಬಹುದು. ನಮ್ಮ ರಾಜ್ಯಕ್ಕೆ ಬಂದರೆ, ಸಾರ್ವಜನಿಕ ವಲಯದಲ್ಲಿರುವಂತಹ ಉದ್ಯಮಗಳನ್ನು ಸರಿಯಾಗಿ ನಡೆಸಿಕೊಂಡು ಬಂದಿಲ್ಲ ಎನ್ನುವ ಮಾತನ್ನು ಹೆಚ್ಚು ಕಡಿಮೆ ಎಲ್ಲ ಮಾನ್ಯ ಸದಸ್ಯರೂ ಹೇಳಿದ್ದಾರೆ. ಈ ಬಗ್ಗೆ ಎಲ್ಲರೂ ಸರ್ವಸಮ್ಮತವಾದಂಥ, ಅಭಿಪ್ರಾಯಕ್ಕೆ ಬಂದಿದ್ದಾರೆ. ಈ ಬಗ್ಗೆ ಅಧಿಕಾರಿಗಳನ್ನು ಬೈಯಬಹುದು ಅಥವಾ ಬೇರೆಯವರನ್ನು ಬೈಯಬಹುದು. ನಮ್ಮಲ್ಲಿರುವಂತಹ ೩೦ ಸರ್ಕಾರಿ ಉದ್ಯಮಗಳ ಪೈಕಿ ೧೪ ಮಾತ್ರ ಲಾಭದಲ್ಲಿವೆ. ಈ ರೀತಿ ಕೆಲವು ಕಾರ್ಖಾನೆಗಳಿಂದ ಬಂದಂಥ ಲಾಭವನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಸಹ ೧೯೮೨-೮೩ರಲ್ಲಿ ೭ ಕೋಟಿ ರೂಪಾಯಿಗಳಷ್ಟು, ೧೯೮೩-೮೪ರಲ್ಲಿ ೩೫ ಕೋಟಿ ರೂಪಾಯಿಗಳಷ್ಟು ಮತ್ತು ೧೯೮೪-೮೫ರಲ್ಲಿ ಸುಮಾರು ೪೫ ಕೋಟಿ ರೂಪಾಯಿಗಳಷ್ಟು ನಷ್ಟವನ್ನು ಅನುಭವಿಸಿವೆ ಎಂದು ಮಾನ್ಯ ವಿರಪ್ಪಮೊಯ್ಲಿ ಅವರೇ ಹೇಳಿದ್ದಾರೆ. ಪ್ರತಿಯೊಂದು ಕೈಗಾರಿಕೆಯೂ ಸಹ ಯಾವ ಕಾರಣದಿಂದ ನಷ್ಟದಲ್ಲಿವೆ, ಏನು ಮಾಡಿದರೆ ಅವು ಲಾಭ ಗಳಿಸುತ್ತವೆ ಎಂಬುದನ್ನು ನಾವು ವಿಮರ್ಶೆ ಮಾಡಿ ನೋಡಬೇಕಾಗಿದೆ. ಪ್ರತಿಯೊಂದಕ್ಕೂ ನಾವು ಕಾರಣವನ್ನು ಅನ್-ಮೆರಿಟ್ ಮೇಲೆ ನೋಡಬೇಕು. ಸ್ಟೀಲ್ ಇಂಡಸ್ಟ್ರಿ ನಷ್ಟದಲ್ಲಿದ್ದರೆ ಅದಕ್ಕೆ ಒಂದು ಕಾರಣವಿರುತ್ತದೆ. ಸಕ್ಕರೆ ಇಂಡಸ್ಟ್ರಿ ನಷ್ಟದಲ್ಲಿದ್ದರೆ ಅದಕ್ಕೆ ಮತ್ತೊಂದು ಕಾರಣ ಇರುತ್ತದೆ. ನಾಲ್ಕೈದು ರಾಜ್ಯಗಳವರಿಗೆ ಸಕ್ಕರೆ ಉದ್ಯಮವನ್ನು ಸರಿಯಾಗಿ ನೋಡಿಕೊಳ್ಳಲು ಬಾರದ ಕಾರಣದಿಂದ ಇವರುಗಳು ಕೇಂದ್ರ ಸಕ್ಕರೆ ನೀತಿಯನ್ನು ಟೀಕೆ ಮಾಡುತಿದ್ದಾರೆಂದು ಮಾನ್ಯ ವೀರಪ್ಪಮೋಯ್ಲಿ ಅವರು ಹೇಳಿದರು, ಆದರೆ ಸಕ್ಕರೆ ಉದ್ಯಮ ನಷ್ಟದಲ್ಲಿರುವುದಕ್ಕೆ ಕಾರಣವೇನೆಂಬುದನ್ನು ಕಾಂಗ್ರೆಸ್ಸೇತರ ಸರ್ಕಾರಗಳು ಮಾತ್ರವಲ್ಲ, ಕಾಂಗ್ರೆಸ್ ಸರ್ಕಾರಗಳು ಸಹ ನಿಖರವಾದಂಥ ಕಾರಣಗಳನ್ನು ಕೊಟ್ಟಿವೆ. ಅದನ್ನು ಯಾರೂ ಅಲ್ಲಗಳೆಯುವುದಕ್ಕೆ ಆಗುವುದಿಲ್ಲ. ಸಕ್ಕರೆ ಹಂಚಿಕೆ ಮತ್ತು ಮಾರಾಟದ ಬಗ್ಗೆ ಇವೊತ್ತು ಕೇಂದ್ರ ಸರ್ಕಾರದ್ದು ದ್ವಿಮುಖ ನೀತಿ ಇದೆ. ಯಾವುದೇ ಸಕ್ಕರೆ ಕಾರ್ಖಾನೆ ತಾನು ಉತ್ಪಾದನೆ ಮಾಡಿದ್ದರಲ್ಲಿ ಶೇಕಡಾ ೬೫ರಷ್ಟನ್ನು ಲೇವಿ ರೂಪದಲ್ಲಿ ಕೊಡಬೇಕು ಮತ್ತು ಶೇಕಡಾ ೩೫ರಷ್ಟನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಬಹುದು. ಕಳೆದ ಎರಡು ಮೂರು ವರ್ಷಗಳಿಂದ ಸಕ್ಕರೆ ಬೆಲೆ ಕುಸಿದು ಬಿದ್ದಿದೆ. ಲೆವಿ ಬೆಲೆ ಕಡಿಮೆಯಾಗಿದೆ. ೧೯೮೧-೮೨ರಲ್ಲಿ ಸಕ್ಕರೆ ಬೆಲೆ ಕೆ.ಜಿ.ಗೆ ೧೫ ರೂಪಾಯಿಗಳವರೆಗೆ ಹೋಗಿತ್ತು. ಅನಂತರ ಸಕ್ಕರೆ ಬೆಲೆ ಕಡಿಮೆಯಾಯಿತು. ಶೇಕಡಾ ೬೫ರಷ್ಟು ಸಕ್ಕರೆಯನ್ನು ಲೆವಿ ಬೆಲೆಯಲ್ಲಿ ಕೊಟ್ಟ ಮೇಲೂ ಸಹ ಇನ್ನು ಶೇಕಡಾ ೩೫ರಷ್ಟು ಸಕ್ಕರೆಯನ್ನು ಕಾರ್ಖಾನೆಗಳವರು ತಮಗಿಷ್ಟ ಬಂದಂತೆ ಮಾರಾಟ ಮಾಡಲು ಅಧಿಕಾರವಿಲ್ಲ. ಅದಕ್ಕೂ ಸಹ ಅವರು ದೆಹಲಿ ಕಡೆಗೆ ನೋಡಬೇಕಾಗಿದೆ. ಅವರು ಹೇಳಿದಾಗ ಮಾತ್ರ ಇವರು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕು ಮತ್ತು ಅವರು ಹೇಳಿದಷ್ಟು ಮಾತ್ರ ಬಿಡುಗಡೆ ಮಾಡಬೇಕು. ಶೇಕಡಾ ೬೫ರಷ್ಟು ಲೇವಿ ಸಕ್ಕರೆ ಕೊಟ್ಟ ಮೇಲೆ ತಮಗಾಗುವ ನಷ್ಟವನ್ನು ಭರ್ತಿ ಮಾಡಿಕೊಳ್ಳಲು ಇನ್ನುಳಿದ ಶೇಕಡಾ ೩೫ರಷ್ಟು ಸಕ್ಕರೆಯನ್ನು ಮಾರುಕಟ್ಟೆಯಲ್ಲಿ ಬೆಲೆ ಇದ್ದಾಗ ಮಾರಾಟ ಮಾಡುವುದಕ್ಕೂ ಸಹ ಅವರಿಗೆ ಅಧಿಕಾರವಿಲ್ಲ. ಈ ಒಂದು ನೀತಿಯಿಂದ ಅವರಿಗೆ ನಷ್ಟವಾದರೆ, ಅದನ್ನು ಯಾರು ಭರ್ತಿ ಮಾಡಿಕೊಡಬೇಕು? ಸುಮಾರು ೨೩ ಕಾರ್ಖಾನೆಗಳು ಸಹಕಾರಿ ಕ್ಷೇತ್ರದಲ್ಲಿ ನಡೆಯುತ್ತಿವೆ. ಸರ್ಕಾರಿ ವಲಯದಲ್ಲಿರುವ ಸುಮಾರು ೨೦ ಸಕ್ಕರೆ ಕಾರ್ಖಾನೆಗಳು ಸರಿಯಾಗಿ ಕೆಲಸ ಮಾಡುತ್ತಿವೆ. ಸಂಕೇಶ್ವರ ಮತ್ತು ಉಗಾರ್ ಸಕ್ಕರೆ ಕಾರ್ಖಾನೆಗಳು ೩-೪ ಕೋಟಿಯಷ್ಟು ಹಣವನ್ನು ಲಾಭ ಮಾಡಿವೆ. ಕೇಂದ್ರ ಸರ್ಕಾರದ ಲೆವಿ ನೀತಿಯಿಂದ ರಾಜ್ಯಕ್ಕೆ ಬಹಳ ತೊಂದರೆಯಾಗುತ್ತಿದೆ, ಸಕ್ಕರೆ ಕಾರ್ಖಾನೆಗಳನ್ನು ನಡೆಸುವುದಕ್ಕೆ ಬ್ಯಾಂಕುಗಳಿಂದ ಹಣವನ್ನು ಪಡೆದಿರುತ್ತೇವೆ. ಸಕ್ಕರೆಯನ್ನು ಸ್ಟೋರ್ ಮಾಡುವುದಕ್ಕೆ ಸ್ಥಳ ಬೇಕಾಗಿರುತ್ತದೆ. ಆ ಸ್ಥಳವನ್ನು ನಾವು ಬಾಡಿಗೆಗೆ ಪಡೆದಿರುತ್ತೇವೆ. ಹೀಗೆ ಪಡೆದ ಸಾಲಕ್ಕೆ ಬಡ್ಡಿಯನ್ನೂ ಹಾಗೂ ಸ್ಥಳಕ್ಕೆ ಬಾಡಿಗೆಯನ್ನೂ ಕೊಡಬೇಕಾಗಿರುತ್ತದೆ. ಕೇಂದ್ರ ಸರ್ಕಾರದವರು ಲೆವಿಯನ್ನು ನಮ್ಮ ಮೇಲೆ ಹಾಕುತ್ತಾರೆ, ಆದರೆ ಬಡ್ಡಿಯನ್ನಾಗಲೀ, ಬಾಡಿಗೆಯನ್ನಾಗಲೀ ಅವರು ಕೊಡುವುದಿಲ್ಲ. ಕೇಂದ್ರ

ಸರ್ಕಾರಕ್ಕೆ ಲೆವಿ ಲೆಕ್ಕದಲ್ಲಿ ಸಕ್ಕರೆಯನ್ನು ಕೊಡಬೇಕು. ಹೀಗೆ ಆದರೆ ಯಾವ ಕಂಪನಿ ಉಳಿಯುತ್ತದೆ? ಉತ್ತರ ರಾಜ್ಯಗಳು ಮೊದಲಿನಿಂದಲೂ ಷುಗರ್‌ಕೇನ್ ಲೆವಿ ಪ್ರೈಸ್‌ನ್ನು ಹೆಚ್ಚು ಮಾಡಿ ಎಂದು ಕೇಳು ತ್ತಿದ್ದಾರೆ. ಅವರು ಪ್ರಧಾನ ಮಂತ್ರಿಯಾಗಿದ್ದಾಗ ಹೀಗಿತ್ತು ಇವರು ಪ್ರಧಾನ ಮಂತ್ರಿಯಾದಾಗ ಹೀಗಾಯಿತೆಂದು ವಿವಾದ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಉತ್ತರ ಭಾರತದಲ್ಲಿ ಕ್ರಾಪಿಂಗ್ ಪ್ಯಾಟ್ರನ್ ಪ್ರಕಾರ ಕಬ್ಬನ್ನು ಬೆಳೆಯಬಹುದು. The average yield per acre is **not** even 20 tonnes, and recovery is not even 8.5% Our average yield per acre is 35 tonnes and recovery is 10%. ಆ ಕಡೆ ಷುಗರ್ ಫ್ಯಾಕ್ಟರಿಗಳು ಜಾಸ್ತಿ ಇವೆ. ಆವರೇಜ್ ಈಲ್ಡ್ ೩೫ ಟನ್ ಆ ಪ್ರದೇಶಗಳಲ್ಲಿ ಇದೆ. ಉತ್ತರ ಪ್ರದೇಶ ಮತ್ತು ಉತ್ತರ ಭಾರತದಲ್ಲಿರ ತಕ್ಕಂತಹ ಉತ್ಪಾದನೆಯ ಮೂಲ ಇರತಕ್ಕಂತಹ ಅನುತ್ಪಾದಕ ಸಕ್ಕರೆ ಕಾರ್ಖಾನೆಗಳನ್ನು ಮುಚ್ಚಿಸುವುದು ಒಳ್ಳೆಯದು. ದಕ್ಷಿಣದಲ್ಲಿ ಎಂದರೆ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕರ್ನಾಟಕ ಈ ಭಾಗಗಳಲ್ಲಿ ಫರ್ಟೈಲ್ ಜಾಸ್ತಿ ಇದೆ. ಇಂತಹ ಕಡೆ ಕಬ್ಬು ಬೆಳೆಯುವುದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಆರ್ಥಿಕವಾಗಿಯೂ ನೆರವು ಕೊಡಬೇಕು. ಹಾಗೆ ಮಾಡಿದರೆ ಮಾತ್ರ ಸಕ್ಕರೆ ಕಾರ್ಖಾನೆಗಳು ಸರ್‌ವೈವ್ ಆಗುತ್ತದೆ. ಇಂಡಸ್ಟ್ರೀಗಳು ಸರಿಯಾಗಿ ನಡೆಯದೆ ಇದ್ದರೆ ರೈತನಿಗೆ ಹಣವನ್ನು ಕೊಡುವುದ ಕ್ಕಾಗುವುದಿಲ್ಲ. ಸಕ್ಕರೆ ಕಂಪನಿಗಳ ಕಡೆ ಹೆಚ್ಚು ಗಮನ ಕೊಡದೇ ಇರುವುದರಿಂದ ಇವೊತ್ತು ರೈತ ಹಾಳಾಗಿದ್ದಾನೆ ಮತ್ತು ಷುಗರ್ ಇಂಡಸ್ಟ್ರೀಗಳೂ ಹಾಳಾಗಿವೆ. ಲೆವಿ ಷುಗರ್‌ನ್ನು ೫೦ ಪರ್‌ಸೆಂಟ್ ಮಾಡಿ ಫ್ರೀ ಮಾರ್ಕೆಟ್‌ಗೆ ೫೦ ಪರ್‌ಸೆಂಟ್ ಬಿಡಲು ನಾವು ಕೇಳಿದ್ದೇವೆ. ಇದಕ್ಕೆ ಕೇಂದ್ರದವರು ಒಪ್ಪಿದರೆ ಅನುಕೂಲವಾಗುತ್ತದೆ. ಇನ್ನು ಗೌರಿಬಿದನೂರು ಸಕ್ಕರೆ ಕಾರ್ಖಾನೆಯ ಮ್ಯಾನೇಜ್‌ಮೆಂಟ್ ನೋಡುವ ಐ.ಎ.ಎಸ್. ಆಫೀಸರುಗಳು ಅಥವಾ ಆಫೀಸರ್‌ಗಳು ದುರ್ವ್ಯವಹಾರ ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ಐ.ಎ.ಎಸ್. ಆಫೀಸರ್, ಯಾರೋ ಒಬ್ಬ ಸಕ್ಕರೆ ತಿಂದ. ಅಲ್ಲಿ ಚೇರ್ಮನ್ ತಿಂದ ಎಂದರೆ, ಇದರಿಂದ ಕಾರ್ಖಾನೆಗಳು ಹಾಳಾಗುವುದಿಲ್ಲ. ಮೂಲಭೂತವಾಗಿ ಆದರ ಆರ್ಥಿಕ ವ್ಯವಸ್ಥೆ ಏನಿದೆ ಆದರಿಂದ ಹಾಳಾಗುತ್ತಿವೆ ಕೇಂದ್ರ ಸರ್ಕಾರದ ನೀತಿಯಿಂದ ಹಾಳಾಗುತ್ತಿವೆ. ಜೊತೆಗೆ ಮಿಸ್ ಮ್ಯಾನೇಜ್‌ಮೆಂಟಿನಿಂದ ಹಾಳಾಗುತ್ತಿವೆ. ಇನ್ನು ಸ್ಟೀಲ್ ಇಂಡಸ್ಟ್ರೀಯಾದ ವಿ.ಎಸ್.ಐ.ಎಲ್. ಬಗ್ಗೆ ಮಾನ್ಯ ವೀರಪ್ಪಮೊಯ್ಲಿಯವರು ಹೇಳಿದರು. ಯಾವ ಸ್ಟೀಲ್ ಇಂಡಸ್ಟ್ರೀಸ್ ಲಾಭದಲ್ಲಿವೆ ಹೇಳಿ?

ಶ್ರೀ ಎಸ್. ಬಂಗಾರಪ್ಪ.—ಪ್ರೈವೇಟ್ ಸ್ಟೀಲ್ ಇಂಡಸ್ಟ್ರೀಗಳು ಲಾಭದಲ್ಲಿ ನಡೆಯುತ್ತಿವೆ. ಬೇಕಾದರೆ ಅವುಗಳ ಹೆಸರಿನ ಒಂದು ಲಿಸ್ಟನ್ನೇ ಕೊಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಲುಕ್ಸಾನು ಮಾಡಿಕೊಳ್ಳಬೇಕೆಂದು ಯಾರು ಇಷ್ಟಪಡುವುದಿಲ್ಲ. ಜಪಾನಿನಲ್ಲಿ ಕಬ್ಬಿಣದ ಅದುರು ಇಲ್ಲ. ಒಂದು ಡ್ರಾಪ್ ಎಣ್ಣೆ ಇಲ್ಲ, ಆದರೂ ಅವರು ಸ್ಟೀಲ್‌ನ್ನು ಮಾಡುತ್ತಿದ್ದಾರೆ.

SRI S. BANGARAPPA.—In Japan, the total production so far as Steel is concerned is 3% but they will import it.

ಶ್ರೀ ಜೆ. ಹೆಚ್. ಪಟೇಲ್.—ಇವರ ದೇಶದಲ್ಲಿ ಅದುರು ಇಲ್ಲಾ ಎಣ್ಣೆ ಇಲ್ಲ, ಕಲ್ಲಿದ್ದಲು ಇಲ್ಲ. ಆದರೂ ಕೂಡ ಇವೊತ್ತು ಸುಮಾರು ಮೂರುವರೆ ಕೋಟಿ, ನಾಲ್ಕು ಕೋಟಿ ಟನ್ ಅಷ್ಟು ಸ್ಟೀಲ್‌ನ್ನು ಪ್ರೊಡ್ಯೂಸ್ ಮಾಡುತ್ತಿದ್ದಾರೆ. ನಾವು ಒಂದು ಕೋಟಿ ಟನ್ ಉತ್ಪಾದನೆ ಮಾಡುವುದಕ್ಕೂ ತಲುಪಿಲ್ಲ. ನಾವು ಇನ್ನೂ ೬೦.೭೦ ಲಕ್ಷ ಟನ್ ಸ್ಟೀಲ್ ಮಾತ್ರ ಉತ್ಪಾದನೆ ಮಾಡುತ್ತಿದ್ದೇವೆ. ನಾವು ಉತ್ಪಾದನೆ ಮಾಡುವ ಸ್ಟೀಲಿನ ಬೆಲೆ ಒಂದು ಟನ್ನಿಗೆ ಏಳೂವರೆ ಸಾವಿರ ರೂಪಾಯಿಗಳಾಗುತ್ತವೆ. ಅವರು ತಮ್ಮ ಸ್ಟೀಲನ್ನು ಇಲ್ಲಿಗೆ ತಂದು ಒಂದು ಟನ್ನಿಗೆ ಎರಡು ಸಾವಿರದಂತೆ ಮಾರಾಟ ಮಾಡುತ್ತಿದ್ದಾರೆ. ಕೊರಿಯನ್ ಸ್ಟೀಲ್ ಸಹ ನಮ್ಮ ಇಂಡಿಯಾ ದೇಶಕ್ಕೆ ಬರುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಜಪಾನ್‌ನವರು ಉತ್ಪಾದಿಸಿದ ಸ್ಟೀಲನ್ನು ನಮ್ಮ ಭಾರತ ದೇಶಕ್ಕೆ ತಂದು ೨ ಸಾವಿರ ರೂಪಾಯಿಗಳಿಗೆ ಒಂದು ಟನ್‌ನ್ನು ಮಾರುವಾಗ ನಮ್ಮ ದೇಶದ ಸ್ಟೀಲ್ ಬೆಲೆ ಏಳೂವರೆ ಸಾವಿರ ರೂಪಾಯಿಗಳು ಆಗುವುದಕ್ಕೆ ಕಾರಣ ಏನು?

ಶ್ರೀ ಜೆ. ಹೆಚ್. ಪಟೇಲ್.—ಜಪಾನ್‌ನವರು ಏಕೆ ಅಷ್ಟು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆಂದರೆ, ಅದಕ್ಕೆಲ್ಲಾ ಟೆಕ್ನಾಲಾಜಿ ಕಾರಣಗಳಿವೆ, ಹಾಗೂ ಬೇರೆ ಬೇರೆ ಕಾರಣಗಳೂ ಇವೆ. ಆದ್ದರಿಂದ ಈಗ ಮಾನ್ಯ ಅಧ್ಯಕ್ಷರೇ, ವಿ.ಐ.ಎಸ್.ಎಲ್, ಕಂಪನಿಯು ಲುಕ್ಸಾನಿನಲ್ಲಿ ನಡೆಯುತ್ತಿದೆ ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಸ್ಥಾಪನೆಯಾದ ಈ ಕಾರ್ಖಾನೆಯನ್ನು ಬೇರೆಯವರಿಗೆ ಕೊಡುವುದು ಎಂದರೆ, ಕರ್ನಾಟಕದ ಗೌರವವನ್ನು ಮಾರಾಟ ಮಾಡಿದಂತಾಗುತ್ತದೆಂದು ಮಾನ್ಯ ವೀರಪ್ಪಮೊಯ್ಲಿಯವರು ಹೇಳಿದರು. ನಾನು ಆ ಕಂಪನಿಯನ್ನು ಮಾರಾಟ ಮಾಡುತ್ತೇನೆಂದು ಹೇಳಿಲ್ಲ. ಸೆಂಟ್ರಲ್ ಸ್ಟೀಲ್ ಅಥಾರಿಟಿ ಲಿಮಿಟೆಡ್‌ರವರಿಗೆ, ತಾವು ಇದನ್ನು ತೆಗೆದುಕೊಂಡು ಸ್ವಲ್ಪ ಜೀವ ಕೊಡುವುದಕ್ಕೆ ಸಾಧ್ಯವಿದ್ದರೆ ಇದನ್ನು ವಹಿಸಿಕೊಳ್ಳಿ ಎಂದು ಕೇಳಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ವಹಿಸಿಕೊಳ್ಳಿ ಎಂದರೆ, ಯಾವ ಅರ್ಥದಲ್ಲಿ ವಹಿಸಿಕೊಳ್ಳುವುದು?

ಶ್ರೀ ಜೆ. ಹೆಚ್, ಪಟೇಲ್.—ಸ್ಟೀಲ್ ಅಥಾರಿಟಿ ಲಿಮಿಟೆಡ್‌ರವರ ಕಂಪನಿಯಲ್ಲಿ ದಿನಕ್ಕೆ ಒಂದು ಕೋಟಿ ರೂಪಾಯಿಗಳಷ್ಟು ಲುಕ್ಸಾನು ಆಗುತ್ತಿದೆ ಇದನ್ನು ತಾವು ವಹಿಸಿಕೊಂಡರೆ ಇದರಲ್ಲೂ ದಿನಕ್ಕೆ ೨ ಲಕ್ಷ ರೂಪಾಯಿಗಳು ಲುಕ್ಸಾನು ಆಗುತ್ತದೆ. ಒಂದು ಕೋಟಿ ರೂಪಾಯಿ ಲುಕ್ಸಾನು ಆಗುವ ಕಡೆ ಇನ್ನೆರಡು ಲಕ್ಷ ರೂಪಾಯಿ ಲುಕ್ಸಾನಾದರೆ ಯಾವ ಲೆಕ್ಕ, ಆದುದರಿಂದ ಇದನ್ನೂ ಸಹ ತೆಗೆದುಕೊಳ್ಳಿ ಎಂದು ಕೇಳಿದ್ದೇವೆ. ಮಾನ್ಯ ವೀರೇಂದ್ರಪಾಟೀಲರು ಹೇಳಿದರು,—ನಾನು ಟಾಟಾರವರಿಗೆ ಹೇಳಿದ್ದೇನೆ ಅವರು ಬಂದು ಈ ಕಂಪನಿಯನ್ನು ನೋಡುತ್ತಾರೆ ಆಮೇಲೆ ಅವರಿಗೆ ಕೊಡುವ ವಿಚಾರ ನೋಡೋಣ ಎಂದಿದ್ದಾರೆ ಟಾಟಾರವರಿಗೆ ಈ ಕಂಪನಿಯ ಮ್ಯಾನೇಜ್‌ಮೆಂಟ್ ಕೊಡುವುದಾದರೆ ಅವರು ಬಂದು ಎಕ್ಸಾಮಿನ್ ಮಾಡುತ್ತಾರೆ. ಆದರೆ ನಾವು ಇನ್ನೂ ಟಾಟಾರವರನ್ನು ಕೇಳಿಲ್ಲ, ಹಾಗೂ ಅವರು ಇನ್ನೂ ಬಂದಿಲ್ಲ. ಅವರ ಸಲಹೆ ಸೂಕ್ತವೋ ಅಸುಕ್ತವೋ ಎಂಬುದನ್ನು ವಿಚಾರ ಮಾಡುತ್ತೇವೆ. ಇದರ ಆಡಳಿತದಲ್ಲಿ ಇನ್ನೂ ಏನಾದರೂ ಹೊಸ ಸಂಧಾರಣೆಗಳನ್ನು ಮಾಡಬೇಕೋ ಎನ್ನತಕ್ಕ ವಿಚಾರವನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾನು ಜನರಲ್ ಡಿಸ್ಕಷನ್‌ನಲ್ಲಿ ವಿ.ಐ. ಎಸ್.ಎಲ್. ಬಗ್ಗೆ ಡೀಟೈಲ್ ಆಗಿ ಪ್ರಸ್ತಾಪ ಮಾಡಿದ್ದೇನೆ. ಈ ಕಂಪನಿಯಲ್ಲಿ ನಮ್ಮ ರಾಜ ಸರ್ಕಾರದ್ದು ೬೦ ಪರ್‌ಸೆಂಟ್ ಷೇರು ಇದೆ. ಕೇಂದ್ರದ್ದು ೪೦ ಪರ್‌ಸೆಂಟ್ ಷೇರು ಇದೆ. ಇಂತಹ ಕಂಪನಿಯನ್ನು ಸ್ಟೀಲ್ ಅಥಾರಿಟಿ ಲಿಮಿಟೆಡ್‌ರವರಿಗೆ ಕೊಟ್ಟರೆ ವಿಶ್ವೇಶ್ವರಯ್ಯನವರು ಸ್ಥಾಪಿಸಿದಂತಹ ಈ ಕಂಪನಿಗೆ ಸಂಪೂರ್ಣವಾಗಿ ಅವರಿಗೇ ಹೋಗಿಬಿಡುತ್ತದೆ.

ಇಲ್ಲಿ ಪ್ರಶ್ನೆ ಏನೆಂದರೆ, ಮಾನ್ಯ ವೀರೇಂದ್ರ ಪಾಟೀಲರ ಹತ್ತಿರ ಮಾತನಾಡಿದಾಗ ನನಗೆ ತಿಳಿದು ಬಂದಿರುವ ಪ್ರಕಾರ ವೀರೇಂದ್ರ ಪಾಟೀಲರ ಹತ್ತಿರ ಟಾಟಾರವರು ಬಂದು ಕಾಣಲಿಲ್ಲ. ಮಾನ್ಯ ವೀರೇಂದ್ರ ಪಾಟೀಲರವರೇ ಟಾಟಾರವರನ್ನು ಕಾಂಟ್ಯಾಕ್ಟ್ ಮಾಡಿದ್ದಾರೆ. ಉದ್ದೇಶ ಏನು ಎಂದರೆ, ಟಾಟಾರವರಿಗೆ ಮಾರಾಟ ಮಾಡಬೇಕೆಂದೇನೂ ಅಲ್ಲ. ರಾಜ್ಯಸರಕಾರಕ್ಕೆ ಅವರು ಬರೆದ ಪತ್ರದಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. ಅದರ ಪ್ರತಿಯೂ ನನ್ನ ಹತ್ತಿರ ಇದೆ. ಏನು ಬರೆದಿದ್ದಾರೆ ಎಂದರೆ, ಮ್ಯಾನೇಜ್‌ಮೆಂಟ್, ಟೆಕ್ನಿಕಲ್ ನೋ–ಹೌ ಪವರ್‌ಕಟ್‌ನ ಹಿನ್ನೆಲೆಯಲ್ಲಿ, ಹಾಗೆಯೇ ಕೆಲಸಗಾರರು. ಮತ್ತೊಂದು ಇತ್ಯಾದಿ. These are the main reasons. Inspite of all these drawbacks, the decision was taken.

ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೀರಿ. ಅದರಲ್ಲಿ ನಿಮ್ಮ ೬೦ ಪರ್ಸೆಂಟ್ ಷೇರ್ಸನ್ನು ವಹಿಸಿ ಕೊಡುತ್ತೇವೆಂದು ಹೇಳಿದ್ದೀರಿ. ಮ್ಯಾನೇಜ್‌ಮೆಂಟ್‌ಗೆ ಮಾತ್ರ ಇದನ್ನು ವಹಿಸಿಕೊಳ್ಳಿ ಎಂದು ಹೇಳಿದ್ದಕ್ಕೆ. ಷೇರ್ಸ್ ಟ್ರಾನ್ಸ್‌ಫರ್ ವಿಚಾರವನ್ನು ಮಾನ್ಯ ವೀರೇಂದ್ರ ಪಾಟೀಲರವರು ತೆಗೆದುಕೊಂಡಾಗ, ಕರ್ನಾಟಕದ ೬೦ ಪರ್ಸೆಂಟ್ ಷೇರ್ಸ್ ಏನಿದೆ ವಿ.ಎಸ್.ಐ ಎಲ್‌ನಲ್ಲಿ, ಅದನ್ನು ಉಳಿಸ ಬೇಕೆಂಬ ಮತ್ತು ಇದರ ಸಂಪೂರ್ಣ ಮಾಲೀಕತ್ವ ಉಳಿಸತಕ್ಕಂತಹ ವಿಚಾರಧಾರೆಯನ್ನು ಮಾನ್ಯ ವೀರೇಂದ್ರ ಪಾಟೀಲರವರು ಹೇಳಿದುದ್ದು. ನಿಮ್ಮ ಹಾಗೆ ಪ್ರತಿಪಾದನೆ ಮಾಡಿದರು. ಅದರ ಅರ್ಥ ನಿಮ್ಮ ಹಾಗೆ ಮಾರಾಟ ಮಾಡತಕ್ಕಂತಹ ವಿಚಾರ ಅಲ್ಲ. ಅದನ್ನು ಅವರು ಮಾಡಲಿಲ್ಲ.

ಶ್ರೀ ಜೆ. ಎಚ್. ಪಟೇಲ್.—ನಾನು ಹೇಳಿದುದ್ದು ಅದರ ಮಾರಾಟದ ವಿಷಯ ಅಲ್ಲ. ಇಬ್ಬರ ಪಾಲೂ ಇದೆ. ಕೇಂದ್ರದ್ದು ೪೦ ಪರ್ಸೆಂಟ್ ಆದರೆ ನಮ್ಮದು ೬೦ ಪರ್ಸೆಂಟ್ ಇದೆ. ಅವರದ್ದು ಮ್ಯಾನೇ

ಜ್‌ಮೆಂಟ್ ಆಗಬೇಕಾದರೆ, ಅವರ ಷೇರ್ಸ್ ೫೧ ಪರ್ಸೆಂಟ್ ಇದ್ದು, ನಮ್ಮದ್ದು ೪೯ ಪರ್ಸೆಂಟ್ ಇದ್ದರೆ ಹಾಗೆ ಆಗುತ್ತದೆ. ಆ ವಿಚಾರ ಬೇರೆ, ನಾವು ಟಾಟಾರವರಿಗೆ ಖರೀದಿಗೆ ಕೊಡಬೇಕೆಂದು ಮಾನ್ಯ ವೀರೇಂದ್ರ ಪಾಟೀಲರವರು ಹೇಳಲಿಲ್ಲ. ಅವರು ಹೇಳಿದ್ದುದು, ಮ್ಯಾನೇಜ್‌ಮೆಂಟ್‌ನ್ನು ಏನು ಮಾಡಿದರೆ ಸುಧಾರಣೆ ಆಗುತ್ತದೆ, ಏನು ಮಾಡಿದರೆ ಕಾರ್ಖಾನೆ ಬದುಕುತ್ತದೆ ಎನ್ನುವುದಕ್ಕೋಸ್ಕರ ಅವರು ಅಡ್ವೈಸ್ ಮಾಡಿದ್ದಾರೆ, ಸಲಹೆ ಕೊಟ್ಟಿದ್ದಾರೆ. ಡಾಕ್ಟರ್ ಬಂದು ರೋಗಿಯನ್ನು ನೋಡಿ ಸರಿಯಾಗಿ ಅಡ್ವೈಸ್ ಮಾಡಲಿ ಗುಣಮುಖವಾಗಲಿ – ಎಂದ ಹಾಗೆ. ಆದುದರಿಂದ ಇವೊತ್ತು ನಾವು ಇಲ್ಲಿ ನಮ್ಮ ಇಲೆಕ್ಟ್ರಿಸಿಟಿಯ ಸುಧಾರಣೆಯ ವಿಷಯವನ್ನೂ ಮಾಡಬೇಕಾಗುತ್ತದೆ. ಈ ವಿಷಯದಲ್ಲಿ ಮಾನ್ಯ ಅಧ್ಯಕ್ಷರೇ, ಈ ವಿದ್ಯುಚ್ಛಕ್ತಿಯ ವಿಚಾರದಲ್ಲಿ ನಾನು ಹಿಂದಿನವರನ್ನು ಆಪಾದನೆ ಮಾಡುತ್ತಾ ಇಲ್ಲ. ೧೦ ವರ್ಷಗಳ ಕೆಳಗೆ ನಮ್ಮ ಔದ್ಯೋಗಿಕ ಬೆಳವಣಿಗೆ, ಮತ್ತು ವಿದ್ಯುಚ್ಛಕ್ತಿಯ ಉತ್ಪಾದನೆ, ಇವೆರಡನ್ನೂ ಸರಿಯಾಗಿ, ಯೋಜನಾ ಬದ್ಧವಾಗಿ ನಮಗೆ ಇಂತಹ ಹೊತ್ತಿಗೆ ಎಷ್ಟು ಬೇಡಿಕೆ ಬರುತ್ತದೆ ಎಷ್ಟಕ್ಕೆ ವಿದ್ಯುಚ್ಛಕ್ತಿ ಉತ್ಪಾದನೆ ಯಾಗಬೇಕು ಎನ್ನುವ ಬಗ್ಗೆ ಯೋಜನೆ ಮಾಡಿದ್ದುದರಿಂದ ನಾವು ಇವೊತ್ತು ಈ ಕಷ್ಟದಲ್ಲಿದ್ದೇವೆ. ಒಂದು ಕಾಲದಲ್ಲಿ ನಮಗೆ ಬಹಳ ಇಲೆಕ್ಟ್ರಿಸಿಟಿ ಸರ್‌ಪ್ಲಸ್ ಇದೆ ಎಂದು ತಿಳಿದು ಯಾರು ಯಾರನ್ನು ಕರೆದು, ಬಂಗಾಳದವರನ್ನೊ, ಗುಜರಾತಿನವರನ್ನೊ ಕರೆದು ಕೊಟ್ಟರು. ಆದರೆ ಈಗ ನಮ್ಮವರಿಗೇನೇ ಇರಿಗೇಷನ್ ಪಂಪ್‌ಸೆಟ್ಸ್‌ಗಳಿಗೆ ಮತ್ತು ಮನೆಗಳಿಗೆ ಕೊಡುವ ವಿದ್ಯುಚ್ಛಕ್ತಿಗೆ ನಮ್ಮಲ್ಲಿ ಕೊರತೆ ಇದೆ. ಹೀಗೆಯೇ ಅನೇಕ ಕೊರತೆಯಲ್ಲಿ ಇಂದು ನಾವು ಇದ್ದೇವೆ. ಆದುದರಿಂದ ಬೇಸಿಕಲಿ ನಮ್ಮ ಪವರ್ ಪೊಸಿಷನ್ ಇಂಪ್ರೂವ್ ಆಗದೇ ಹೋದರೆ We do not have a very prosperous industrial scene in future. ನಾವು ಕಷ್ಟ ಪಡಬೇಕಾಗುತ್ತದೆ. ಅದಕ್ಕಾಗಿಯೇ ನಾವು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಪದೇ ಪದೇ ಹೇಳುತ್ತಿರುವುದು. ಮಾನ್ಯ ವೀರಪ್ಪ ಮೊಯಿಲಿಯವರು Performance ನ್ನು ಸೆಂಟ್ರಲ್ ಸೆಕ್ಟಾರಿಗೂ. ಸ್ಟೇಟ್ ಸೆಕ್ಟಾರಿಗೂ ಹೋಲಿಸಿ, ನಮ್ಮದು ಬಹಳ ಪೂರ್ ಎಂದು ನಿನ್ನೆ ಹೇಳಿದರು. ನಾನು ಕೇಳಿದೆ, ಏಕೆ ಎಂದು. ಅವರ ಇನ್ವೆಸ್ಟ್‌ಮೆಂಟ್‌ಗಳು ಒಂದು ಸಾವಿರ ಕೋಟಿ, ಐದು ಸಾವಿರ ಕೋಟಿ. ಈ ತರಹದಲ್ಲಿ ಇದೆ. ನಮಗೂ ಕೇಂದ್ರ ಸರ್ಕಾರಕ್ಕೂ ಹೋಲಿಸಿದರೆ ಹೇಗೆ ? ಆ ರೀತಿಯಾಗಿ ಹೋಲಿಸಲೇ ಬಾರದು. ಆದರೂ, ಕೇಂದ ಸರಕಾರದವರು ಪವರ್ ಪ್ರಾಜೆಕ್ಟ್‌ಗಳ ಬಗ್ಗೆ ೮ ನೂರು ಕೋಟಿ ರೂಪಾಯಿಗಳನ್ನು ಮಹಾರಾಷ್ಟ್ರದಲ್ಲಿ ಇನ್ವೆಸ್ಟ್ ಮಾಡಿದ್ದಾರೆ. ೬ ನೂರು ಕೋಟಿ ರೂಪಾಯಿಗಳನ್ನು ತಮಿಳು ನಾಡಿನ ನೈವೇಲಿ ಮತ್ತು ಕಲ್ಪಾಕಂ ನಲ್ಲಿ ಇನ್ವೆಸ್ಟ್‌ಮೆಂಟ್ ಮಾಡಿದ್ದಾರೆ. ರಾಮಗುಂಡಂನಲ್ಲಿ ೪ ನೂರು ಕೋಟಿ ರೂಪಾಯಿಗಳನ್ನು ಇನ್ವೆಸ್ಟ್‌ಮೆಂಟ್ ಮಾಡಿದ್ದಾರೆ. ಆದರೆ ನಮ್ಮ ರಾಜ್ಯಕ್ಕೆ ಒಂದೇ ಒಂದು ರೂಪಾಯಿಯನ್ನು ಕೂಡಾ ಇನ್ವೆಸ್ಟ್ ಮಾಡಿಲ್ಲ. ಇವೊತ್ತು ನಮಗೆ ಪವರ್ ಪೊಸಿಶನ್ ಹೀಗೆ ಇರಲಿಕ್ಕೆ ಸೆಂಟ್ರಲ್ ಇನ್ವೆಸ್ಟ್‌ಮೆಂಟ್ ಇಲ್ಲದಿರುವುದೇ ಕಾರಣವಾಗಿದೆ. ಇದನ್ನೆಲ್ಲಾ ನಾವು ಇಲ್ಲಿ ಹೇಳಿಕೊಳ್ಳುತ್ತಾ ಕುಳಿತರೆ ಏನು ಪ್ರಯೋಜನ ಬಂತು ? ಈಗ ನಾವು ಕೈಗಾರಿಕಾ ನೀತಿಯನ್ನು ರೂಪಿಸಿದ್ದೇವೆ. ನಮಗಿರತಕ್ಕಂತಹ ವಿದ್ಯುಚ್ಛಕ್ತಿ ಉತ್ಪಾದನೆಯ ಆಧಾರದ ಮೇಲೆ ಹೆಚ್ಚು ವಿದ್ಯುತ್‌ನ್ನು ಬೇಡತಕ್ಕಂತಹ ಕೈಗಾರಿಕೆಗಳಿಗೆ ನಾವು ಹೋಗುವುದಿಲ್ಲ. ಗ್ರಾಮೀಣ ಕೈಗಾರಿಕೆಗಳಿಗೆ ನಮ್ಮ ಆದ್ಯತೆ ಇದೆ. ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ನಮ್ಮ ಆದ್ಯತೆ ಇದೆ. ಟೆಕ್ಸ್‌ಟೈಲ್, ಸಿಮೆಂಟ್ ಮುಂತಾದವುಗಳಿಗೆ ನಾವು ಎಲ್ಲಾ ರೀತಿಯಲ್ಲಿಯೂ ಪ್ರೋತ್ಸಾಹವನ್ನು ಕೊಡುತ್ತಾ ಬಂದಿದ್ದೇವೆ. ೩೦ ಕಾರ್ಖಾನೆಗಳ ಪೈಕಿ, ೧೪ ಕಾರ್ಖಾನೆಗಳು ಲುಕ್ಸಾನಲ್ಲಿರತಕ್ಕಂಥವು. ಲಾಭದಲ್ಲಿರುವ ಕಾರ್ಖಾನೆಗಳು,—ಲ್ಯಾಂಪ್ ವರ್ಕ್ಸ್, ಸಿಲ್ಕ್, ಕೆ.ಎಸ್.ಐ.ಡಿ.ಸಿ., ಹತ್ತಿ ಗೋಲ್ಡ್‌ಮೈನ್, ಮೈಸೂರು ಇಲೆಕ್ಟ್ರಿಕಲ್ ಇಂಡಸ್ಟ್ರೀಸ್, ಎಮ್. ಐ. ಎಸ್. ಎಲ್. ಎನ್. ಜಿ. ಇ. ಎಫ್. ಮೈಸೂರು ಮಿನರಲ್ಸ್, ಕರ್ನಾಟಕ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಶನ್. ಮಾರ್ಕೆಟಿಂಗ್ ಕನ್ಸಲ್ಟಿಂಗ್ ಏಜನ್ಸಿ, ಇವುಗಳು ಲಾಭ ಮಾಡುತ್ತಾ ಇವೆ. ಏಕೆ ಎಂದರೆ ಇವುಗಳಿಗೆ ಕೇಂದ್ರದ ಯಾವುದೇ ಒಂದು ನೀತಿಯು ಎಫೆಕ್ಟ್ ಆಗುವುದಿಲ್ಲ. ಆದರೆ, ಮೈಶುಗರ್, ಮೈಸೂರು ಎಸಿಟೇಟ್, ಕಮಿಕ, ವಿ.ಐ.ಎಸ್.ಎಲ್., ಇವುಗಳು ಸ್ಟೀಲ್ ಅಥವಾ ಶುಗರ್‌ಗೆ ಸಂಬಂಧಪಟ್ಟವುಗಳು, ಇನ್ನು ಸಣ್ಣ ಕೈಗಾರಿಕೆ ಕಿಂಕೋ ಮಂಥವುಗಳು, ಇವೆಲ್ಲ ಬೇರೆ ಕಾರಣಕ್ಕೋಸ್ಕರ ಅಂದರೆ ಇಲೆಕ್ಟ್ರಿಸಿಟಿ ಕಟ್‌ನಿಂದ ನಷ್ಟಕ್ಕೊಳಗಾಗಿವೆ. ಈ ರೀತಿಯಲ್ಲಿ ನಷ್ಟಕ್ಕೊಳಗಾಗಲು ಎರಡು ಕಾರಣಗಳನ್ನು ಸೂಚಿಸ ಬಹುದು. ಒಂದನೇಯದು ಇಲೆಕ್ಟ್ರಿಸಿಟಿ ಕಟ್, ಎರಡನೇಯದು ಕೇಂದ್ರದ ನೀತಿಯಿಂದ ಅಫೆಕ್ಟ್ ಆದವುಗಳು. ಮುಖ್ಯವಾಗಿ ಇದರಲ್ಲಿ ೧೪ ಕಾರ್ಖಾನೆಗಳು ಇದ್ದಾವೆ. ಆದುದರಿಂದ

ಇವೊತ್ತು ನಾವು ನಿರಾಶದಾಯಕರಾಗಿ ಇವುಗಳನ್ನೆಲ್ಲಾ ಕೈಬಿಡುತ್ತೇವೆ ಎಂದು ಅಲ್ಲ. ನನ್ನ ಕಲ್ಪನೆಯಲ್ಲಿ ಈ ಇಂಡಸ್ಟ್ರೀ ಅಂದರೆ, ಅಥವಾ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ, ಒಂದನೇಯದಾಗಿ ಜನರಿಗೆ ಕೆಲಸವನ್ನು ಒದಗಿಸಿ ಕೊಡಬೇಕು. ಎರಡನೇಯದಾಗಿ ರೈತರು ಬೆಳೆದ ತಮ್ಮ ಮಾಲಿಗೆ ಸಾಕಷ್ಟು ಬೆಲೆ ಬರಬೇಕು, ಅವರಿಂದ ಅವರಿಗೆ ಲಾಭ ಆಗಬೇಕು. ಮೂರನೇಯದಾಗಿ ಬಂದ ಲಾಭದಿಂದ ಸಮಾಜದ ದುರ್ಬಲ ವರ್ಗದವರಿಗೆ ತಲುಪತಕ್ಕಂಥ ವ್ಯವಸ್ಥೆಯಾಗಬೇಕು. ಈ ಮೂರು ಉದ್ದೇಶಗಳನ್ನು ನಾನು ಇಟ್ಟುಕೊಂಡಿದ್ದೇನೆ. ಇದು ಸೋಷಿಯಲಿಸಮ್‌ನ ಸ್ಮಾಲ್ ಡೆಫಿನೇಶನ್ ಆಗಿದೆ. ಅದನ್ನು ಬಿಟ್ಟುಬಿಟ್ಟು, ಹಠಕ್ಕೆ ಒಂದು ತರಹದ ಪ್ರೆಸ್ಟೀಜ್‌ಗೋಸ್ಕರ ನಾವು ಇಂತಹವುಗಳನ್ನು ನಡೆಸಿದರೆ ಬಡವರಿಗೆ ಏನು ಪ್ರಯೋಜನವಾದೀತು ? ಬಡವರು ಕೊಡುವ ತೆರಿಗೆಯ ಹಣವನ್ನು ನಾವು ಈ ರೀತಿಯಲ್ಲಿ ಮಾಡಲಿಕ್ಕಾಗುತ್ತದೆಯೇ ? ಇವೊತ್ತು ಒಬ್ಬ ಬಡವ ಒಂದು ಕಟ್ಟು ಬೀಡಿಗೆ ಎಷ್ಟು ತೆರಿಗೆ ಕೊಡುತ್ತಾನೆ ? ಒಂದು ಕಟ್ಟು ಬೀಡಿಗೆ ೩೨ ಪೈಸೆಗಳಷ್ಟು ತೆರಿಗೆಯನ್ನು ಕೊಡುತ್ತಾನೆ. ಹೆಚ್ಚುಕಡಿಮೆ ಒಂದು ಕಟ್ಟು ಬೀಡಿಗೆ ಇವೊತ್ತಿನ ದಿವಸ ಒಂದು ರೂಪಾಯಿ ಆಗಿದೆ. ಅಂತಹವರ ೩೨ ಪೈಸೆಯನ್ನು ತೆಗೆದುಕೊಂಡು ಬಂದು ಅಶೋಕ ಹೋಟೆಲ್ ನಡೆಸುವುದಕ್ಕೆ, ಕ್ಲಬ್‌ಗಳನ್ನು ಮಾಡಿಕೊಂಡು ತಿರುಗಾಡುವುದಕ್ಕೆ ಪಬ್ಲಿಕ್ ಸೆಕ್ಟರ್‌ನಲ್ಲಿ ಅಂಡರ್‌ಟೇಕಿಂಗ್ ಮಾಡಿದ್ದಾರೆ ಎಂದ ಹಾಗೆ ಆಗುತ್ತದೆ. ಹಾಗೆ ಮಾಡುವುದಕ್ಕೆ ನಾನು ಸಿದ್ಧನಿಲ್ಲ. ನನಗೆ ಅದರಲ್ಲಿ ಇಂಟ್ರೆಸ್ಟ್ ಕೂಡಾ ಇಲ್ಲ. ಬೇಕಾದರೆ ಯಾರು ತೆಗೆದುಕೊಂಡಿದ್ದಾರೋ ಅವರು ನಡೆಸಿಕೊಳ್ಳಲಿ. ಆ ದೃಷ್ಟಿಯಿಂದ ಈ ಸಾಮಾಜಿಕ ಅಸಮತೋಲನ ಏನಿದೆ ಅದನ್ನು ಕಡಿಮೆ ಮಾಡಬೇಕಾದರೆ ಆರ್ಥಿಕ ವಲಯದಲ್ಲಿ ಈ ತರಹ ಒಂದು ಶಿಸ್ತು ಮಾಡುವುದು ಅವಶ್ಯಕತೆ ಇದೆ. ಆ ದೃಷ್ಟಿಯಿಂದ ನಾನು ಆ ವಿಚಾರವನ್ನು ಹೇಳಿದ್ದುದು. ಈಗ ಕೋ-ಆಪರೇಟೀವ್ ಸೆಕ್ಟರ್‌ನಲ್ಲಿ ೨-೩ ಕೈಗಾರಿಕೆಗಳು ಇವೆ, ಅವುಗಳು ಇವೊತ್ತು ರೈತರಿಗೆ ಬಾಡಿಗೆ ಕೊಟ್ಟಿಲ್ಲ, ಕೂಲಿಯವರಿಗೆ ಸಂಬಳ ಕೊಟ್ಟಿಲ್ಲ. ಪ್ರಾವಿಡೆಂಟ್‌ಫಂಡ್ ಕೊಟ್ಟಿಲ್ಲ. They have not fulfilled statutory obligations. ಕೋ ಆಪರೇಟೀವ್ ಸೆಕ್ಟರ್‌ನಲ್ಲಿ ೪-೬ ಜನ ಡೈರೆಕ್ಟರ್ಸ್ ಇರುತ್ತಾರೆ. ಅವರು ಅದರ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಅದನ್ನು ಅವರು ಹಾಳು ಮಾಡಿಬಿಟ್ಟುಕೊಟ್ಟು ಹೋಗಿದ್ದಾರೆ. ಆಗ ನಾವು ಏನು ಮಾಡಬೇಕು ? ಮತ್ತೆ ಸರಕಾರದ ಹಣ ತಂದು ಜೀವ ಕೊಟ್ಟು ಅವುಗಳನ್ನು ರಸ್ತೆಗೆ ತರುವುದರೊಳಗೆ ಏನಾಗುತ್ತದೆ ? ಇದು ಬಹಳ ಕಷ್ಟದ ವಿಚಾರ. ಆದುದರಿಂದ ಒಂದು ತರಹ ರೋಸಿಹೋಗಿ ನಾನು ಆ ಮಾತನ್ನು ಹೇಳಿದ್ದುದು. ಅದು ಯಾವ ವಲಯದಲ್ಲಿಯೇ ಆಗಲಿ. ಸಹಕಾರಿ ವಲಯದ್ದಾಗಲೀ, ಸರಕಾರಿ ವಲಯದ್ದಾಗಲೀ ಸಾಹುಕಾರಿ ವಲಯದ್ದಾಗಲಿ. ಈ ಸಾಹುಕಾರರ ಕೆಲವು ಕಂಪನಿಗಳೇನಿದ್ದವು ಅವುಗಳನ್ನು ಸಿಕ್ ಇಂಡಸ್ಟ್ರೀ ಎಂದು ಡಿಕ್ಲೇರ್ ಮಾಡಿ, ಸುಮಾರು ೧೨೦ ಮಿಲ್ಸ್‌ಗಳನ್ನು ಕೇಂದ್ರ ಸರ್ಕಾರವೇ ಖರೀದಿ ಮಾಡಿ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ. Why should we create Public Undertakings to help private sector sick mills ? Why should we create such public undertaking ? ಈಗ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್ ಇದೆ, ಆ ತರಹದ ಮಾದರಿ ನನಗೆ ಬೇಕಿಲ್ಲ. ಇವೊತ್ತು ಯಾವುದಾದರೂ ಕೋ ಆಪರೇಟಿವ್ ಸೆಕ್ಟರಿನ ಸಕ್ಕರೆ ಕಾರ್ಖಾನೆ ಇದ್ದರೆ ಅದನ್ನು ತೆಗೆದುಕೊಳ್ಳುವವರು ಯಾರಾದರು ಇದ್ದರೆ ಕೊಡುತ್ತೇನೆ. ಸದ್ಯ ಅಲ್ಲಿ ವರ್ಕರ್ಸ್‌ಗೆ ಕೆಲಸ ಸಿಕ್ಕು, ನಮ್ಮ ರೈತರಿಗೆ ಕಬ್ಬು ಅರೆಯೋದರಿಂದ ದುಡ್ಡಾಯ್ತು, ಇದು ನಮ್ಮ ಉದ್ದೇಶ. ಇದರಲ್ಲಿ ಯಾವ ಡಾಗ್ಮಾಟಿಸಮ್ ಆಗಲಿ, ಡಾಕ್ಟ್ರಿನ್ಸ್ ಆಗಲಿ ಬರುವುದಿಲ್ಲ. ಇದು ಒಂದು ಜನರಲ್ ವ್ಯೂ ಅಷ್ಟೆ.

ಶ್ರೀ ಎಸ್. ಬಂಗಾರಪ್ಪ.—ಇದೇ ಸಬ್ಜೆಕ್ಟ್‌ಗೆ ಸಂಬಂಧಪಟ್ಟ ಹಾಗೆ ನೀವು ಚೈನಾದ ಒಂದು ವಿಷಯವನ್ನು ಕೋಟ್ ಮಾಡಿ ಹೇಳಿದಿರಿ. ಯಾರೋ ಪ್ರೊಫೆಸರ್ ಕುನೋ ಹುನೋ ಎಂದು ಹೇಳಿದಿರಿ. ಒಂದು ನಿಮಿಷ ದಯವಿಟ್ಟು ತಾವು ಕುಳಿತುಕೊಂಡರೆ ನಾನು ಹೇಳುತ್ತೇನೆ, ಸಭಾಧ್ಯಕ್ಷರೇ, ಮಾನ್ಯ ಸಚಿವರು ೧೯೮೧ರಲ್ಲಿ ಚೈನಾಕ್ಕೆ ಹೋಗಿದ್ದನ್ನು ಹೇಳಿಕೊಂಡರು. ಅಲ್ಲಿ ಅವರ ಸ್ನೇಹಿತ ಪ್ರೊಫೆಸರ್ ರೊಬ್ಬರು ಸಿಕ್ಕಿದರಂತೆ ಅವರೊಡನೆ ಇವರು ಮಾತನಾಡುತ್ತಾ ಕೋಕಾಕೋಲಾ ಮಲ್ಟಿನ್ಯಾಷನಲ್ ಆದ್ದರಿಂದ ಅದನ್ನು ನಾವು ನಮ್ಮ ದೇಶದಿಂದ ಹಿಂದಕ್ಕೆ ಕಳಿಸುತ್ತಿದ್ದೇವೆ, ನೀವು ಇಲ್ಲಿ ಕೋಕಾಕೋಲಾವನ್ನು ಏತಕ್ಕೆ ಇಂಟರ್‌ಡ್ಯೂಸ್ ಮಾಡುತ್ತಿದ್ದೀರಿ ಎಂದು ಅವರನ್ನು ಕೇಳಿದ್ದಕ್ಕೆ ಅವರು ಹೇಳಿದರಂತೆ ನಾವು ಜನರಿಗೆಲ್ಲ ನೀರನ್ನು ಕುಡಿಯುವುದಕ್ಕೆ ಕೊಟ್ಟಿದ್ದೇವೆ. ಕೋಕಾಕೋಲ ಬಂದರೆ

ಅವನ್ನೂ ಅರಗಿಸಿಕೊಳ್ಳುತ್ತೇವೆ ಎಂಬ ಮಾತನ್ನು ಹೇಳಿದರು ಎಂದಿರಿ. ನಿಜವಾಗಿಯೂ ಅದು ಬಹಳ ಮೆಚ್ಚತಕ್ಕಂಥ ಮಾತು. ಇಲ್ಲಿ ನೀವು ಈಗ ಸಿಕ್ ಇಂಡಸ್ಟ್ರಿಸ್ ಯಾವ್ಯಾವುದು ಪಬ್ಲಿಕ್ ಸೆಕ್ಟಾರ್‌ನಲ್ಲಿದೆಯೋ ಅದನ್ನು ಪ್ರೈವೇಟ್ ಸೆಕ್ಟರ್‌ಗೆ ವಹಿಸಿಕೊಟ್ಟರೆ ಏನೂ ಚಿಂತೆ ತರುವುದಿಲ್ಲ ಎಂದು ಹೇಳಿದಿರಿ. ಇವತ್ತು ಚೈನಾದಲ್ಲಿ ಕೋಕಾಕೋಲ ತಯಾರು ಮಾಡಿದರೂ ಕೂಡ ಅದನ್ನೂ ಅರಗಿಸಿಕೊಳ್ಳುವಂಥ ಶಕ್ತಿ ಇರುವ ಸಮಾಜವಾದ, ಅವನ ಸಮಾಜ ಚಿಂತನೆ ದೊಡ್ಡದು ಎಂದು ಇಟ್ಟುಕೊಳ್ಳೋಣ. ನಮ್ಮಂಥ ದೇಶದಲ್ಲಿ ಅದು ಬೇರೆ ಇರಬಹುದು ಅದಕ್ಕೆ ಏನೇ ಕಾರಣ ಇರಬಹುದು ಆ ಪ್ರಶ್ನೆ ಬೇರೆ. ಅದರ ಬಗ್ಗೆ ಚರ್ಚೆ ಬೇಕಾದರೆ ಮಾಡೋಣ. ನೀವು ಈಗ ಸಾರ್ವಜನಿಕ ವಲಯದಲ್ಲಿರುವ ಒಂದು ಸಿಕ್ ಇಂಡಸ್ಟ್ರಿಯನ್ನು ಖಾಸಗಿ ವಲಯದಲ್ಲಿರುವ ವ್ಯಕ್ತಿಗೆ ವಹಿಸಿಕೊಟ್ಟರೆ, ಟಾಟನೋ. ಬಿರ್ಲಾನೋ, ದಾಲ್ಮಿಯಾ, ಮುಂದ್ರಾ ಹೀಗೆ ಬೇಕಾದಷ್ಟು ಜನ ಇದ್ದಾರೆ. ಚೈನಾದವರು ಕೋಕಾಕೋಲಾ ತಯಾರು ಮಾಡತಕ್ಕಂಥವರನ್ನು ಕೂಡ ಅರಗಿಸಿಕೊಳ್ಳುತ್ತಾರೆ ನೀವು ಪ್ರೈವೇಟ್ ಸೆಕ್ಟಾರ್‌ನಲ್ಲಿರುವ ಶಕ್ತಿವಂತರು, ಬಂಡವಾಳ ಶಾಹಿಗಳ ಶಕ್ತಿಯನ್ನು ಅರಗಿಸಿಕೊಳ್ಳುವುದಕ್ಕಾಗುತ್ತದೆಯೋ ? ಅಲ್ಲದೆ ನಿಮ್ಮ ವಾದ ಮೊದಲನೇ ವಾದಕ್ಕೆ ವಿರೋಧವಾಗುವುದಿಲ್ಲವೇ ?

ಶ್ರೀ ಜೆ. ಹೆಚ್. ಪಟೇಲ್.—ಆಗುವುದಿಲ್ಲ, ಆಗುವುದಿಲ್ಲ. ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ಕನ್‌ಫ್ಯೂಷನ್ ಮಾಡಿಕೊಂಡರು. ನಾವು ಹೇಳಿದ್ದು ಮಲ್ಟಿ ನ್ಯಾಷನಲ್ಸನ್ನು ಇನ್‌ವೈಟ್ ಮಾಡುವುದು ಬೇರೆ, ಒಂದು ರಾಷ್ಟ್ರಕ್ಕೆ ಮಲ್ಟಿ ನ್ಯಾಷನಲ್‌ನಿಂದ ಕ್ಯಾಪಿಟಲ್ ಇನ್‌ವೈಟ್ ಮಾಡುವುದು ಬೇರೆ. ರಾಷ್ಟ್ರದಲ್ಲಿರತಕ್ಕಂಥ ಕ್ಯಾಪಿಟಲನ್ನು ಯುಟಿಲೈಸ್ ಮಾಡುವುದು ಬೇರೆ. ರಾಷ್ಟ್ರದ ಒಳಗಡೆ ಇರತಕ್ಕಂಥ Capital utilisation may be in the private secter or in the public sector. ಈ ದೃಷ್ಟಿಯಿಂದ ಮಾನ್ಯ ನಾಯಕರಿಗೆ ಗೊತ್ತಿರಬೇಕು. ಈಗ ಮಲ್ಟಿ ನ್ಯಾಷನಲ್ಸ್‌ಗೆ ಫ್ರೀ ಎಂಟ್ರಿ ನಮ್ಮ ದೇಶದಲ್ಲಿದೆ ಅಲ್ಲದೆ ಮನೋಪಲಿ ಪ್ರಾಕ್ಟೀಸಸ್. ಎಂಆರ್‌ಟಿಪಿ ಎಂದು ಇದೆ ಮನೋಪಲಿ ರಂಗದಲ್ಲಿ ಬಹಳ ಶಕ್ತಿ ಬಡಾವಣೆಯಾಗುತ್ತಿದೆ. ಆ ದಿಕ್ಕಿನಲ್ಲಿ ಯೋಚನೆ ಮಾಡಿ. ನಮ್ಮ ವಿಐಎಸ್‌ಎಲ್ ಬಗ್ಗೆ ಏಕೆ ಆಲೋಚನೆ ಮಾಡುತ್ತಿದ್ದೇವೆ? ಸ್ವಲ್ಪ ಮಾನ್ಯ ರಾಜೀವ್ ಗಾಂಧಿಯವರಿಗೆ ಹೇಳಿ, ನಮ್ಮ ದೇಶ ಇವತ್ತಿರುವ ಸ್ಥಿತಿಗೆ, ಅವರ ಉದ್ದೇಶವನ್ನು ನಾನು ಬೋನಾಫೈಡ್ ಪ್ರಶ್ನೆಯನ್ನಾಗಿ ಮಾಡುತ್ತಿಲ್ಲ. ಇದು ಅವರು ತಿಳಿದೋ ತಿಳಿಯದೆಯೋ ಹಾಕಿ ಕೊಂಡಿರುವ ಆರ್ಥಿಕ ನೀತಿ ಬಹು ರಾಷ್ಟ್ರೀಯ ಸಂಸ್ಥೆಗಳಿಂದ ಹಣ ತಂದು ಇಲ್ಲಿ ವೆಲ್ತ್ ಪ್ರೊಡ್ಯೂಸ್ ಆಗಲಿ ಎನ್ನುತ್ತಿದ್ದಾರೆ. ಈಸ್ಟ್ ಇಂಡಿಯಾ ಕಂಪನಿಯವರು ಈ ರೀತಿ ಮಾಡಿದ್ದನ್ನೇ ನಾನು ಹೇಳಿದ್ದು ಆದರೆ ಕೆಲಸ ಒಳ್ಳೆಯದಿರಬಹುದು. ಇಂಡಸ್ಟ್ರಿಯಲ್ಲಾ ಮಾಡರ್‌ನೈಸ್ ಆಗಿರಬಹುದು. ಅವರು ಅವರು ಅದೇ ವಿಷಯ ಹೇಳುತ್ತಿದ್ದಾರೆ. ನಾವು ಯಾವ ದೃಷ್ಟಿಯಿಂದ ಆದರೂ ಬಂಡವಾಳವನ್ನು ತಂದು ಸಂಪದುತ್ಪಾದನೆ ಮಾಡಿದರೆ ಸಾಕು ಎಂದು ಹೇಳುತ್ತಿದ್ದಾರೆ. ರಾಷ್ಟ್ರದಲ್ಲಿ ಯಾರಿಂದ ಆದರೂ ಪರವಾಗಿಲ್ಲ ಸಂಪತ್ತುತ್ಪಾದನೆ ಆಗುವುದು ಮುಖ್ಯ ಎಂದು ಹೇಳುತ್ತಿದ್ದಾರೆ. ಆದಕ್ಕೆ ನಾನು ನೀವು ಬರುವುದಕ್ಕಿಂತ ಮುಂಚೆ ಒಂದು ಸ್ಟ್ಯಾಟಿಸ್ಟಿಕ್ಸ್ ಹೇಳಿದ್ದೆ. ನಮ್ಮ ಅಗ್ರಿಕಲ್ಚರಲ್ ಪ್ರೊಡಕ್ಷನ್ ಈ ವರ್ಷ ೭೦,೦೦೦ ಕೋಟಿ. ಇಂಡಸ್ಟ್ರಿಯಲ್ ಪ್ರೊಡಕ್ಷನ್ ೧,೦೬,೫೦೦ ಕೋಟಿ. It has risen from 13,000 crores in 1970 to 1,06,500 crores. The increase is almost 15·4 percent every year. ನಮ್ಮ ದೇಶದಲ್ಲಿ ಹೇಗೆ ಬಡತನ ಇದೆ ಎನ್ನುವುದಕ್ಕೆ ಹೇಳುತ್ತೇನೆ. ನಮ್ಮ ಸಂಪತ್ತು ವೃದ್ಧಿ ಆಯಿತೆಂದ ಮಾತ್ರಕ್ಕೆ ಎಲ್ಲರಿಗೂ ಅದು ಸಿಕ್ಕಿತು ಎಂದು ಅಲ್ಲ. ನಮ್ಮ ಹೊಸನಗರದಲ್ಲಿ ಉಡುಪರು ಇದ್ದಾರಲ್ಲ. ಗೊತ್ತಿಲ್ಲ. ವೆಂಕಟರಮಣ ಉಡುಪರು. ನಿಮ್ಮ ಜಮೀನು ಒಟ್ಟು ಎಷ್ಟಿದೆ ಎಂದರೆ ನಮ್ಮದು ಕೀರನಹಳ್ಳಿಯವರದು ಸೇರಿ ೧೨೨೦ ಎಕರೆ ಇದೆ ಎನ್ನುತ್ತಾರೆ. ಅಂದರೆ ಇವರದು ಒಂದೇ ಎಕರೆ, ಇನ್ನು ೧೯೯೯ ಎಕರೆ ಅವರದ್ದು. ಹಾಗೆ ಯಾರದೋ ಸೇರಿಸಿಕೊಂಡು ನಾವು ಬಂಡವಾಳ ಹಾಕುವುದಕ್ಕೆ ಆಗುವುದಿಲ್ಲ ಸ್ವಾಮಿ. ನಮ್ಮಲ್ಲಿರತಕ್ಕಂಥ ಬಂಡವಾಳ ವಿನಿದೆ ಆಗರ ವಿನ್ಯಾಸ ಏನಿದೆ ಅದರ ಬಗ್ಗೆ ನಾವು ಆಲೋಚನೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಈಗ ಸರ್ಕಾರಿ ಮತ್ತು ಖಾಸಗಿಯನ್ನೂ ಸೆ.೯ಸಿ. ನಮ್ಮ ದೇಶ ಉದ್ಧಾರವಾಗುತ್ತದೆ ಎಂದು ಹೇಳುವ ವಾದ ಇದೆಯಲ್ಲ ಅದು ಒಳ್ಳೆಯ ಸಮಾಜವಾದ ಆಗಲಾರದು ಎಂದು ನನ್ನ ಭಾವನೆ. ಮಾನ್ಯ ಉಡುಪರು ಹೇಳಿದ ಹಾಗೆ ಆಗಬೇಕಾಗುತ್ತದೆ. ನಮ್ಮದು ಅವರದ್ದೂ

ಸೇರಿ ೧೨೮೦ ಎಕರೆ ಎಂದು ಹೇಳಿದಂತೆ ಆಗಬೇಕಾಗುತ್ತದೆ. ಖಾಸಗಿ ವಲಯದಲ್ಲಿರತಕ್ಕಂಥ ಬಂಡವಾಳ ಶಾಹಿಗಳನ್ನು ಸೇರಿಸಿ ಸಮಾಜವಾದ ಸೃಷ್ಟಿ ಮಾಡುವುದು ಬಹಳ ಕಷ್ಟವೆಂದು ನನ್ನ ಭಾವನೆ.

ಶ್ರೀ ಜೆ. ಹೆಚ್. ಪಟೇಲ್.—ನಾನು ಹೇಳುವುದು ಉತ್ಪಾದನಾ ದೃಷ್ಟಿಯಿಂದ ಇವತ್ತು ಕೇಂದ್ರ ಸರ್ಕಾರದ ವಿಚಾರ ಏನಿದೆ, ನಮ್ಮ ವಿಚಾರ ಏನಿದೆ ಇದರಲ್ಲಿನ ಸ್ವಲ್ಪ ಸೂಕ್ಷ್ಮವಾದ ವ್ಯತ್ಯಾಸವನ್ನು ನಾನು ಹೇಳುತ್ತೇನೆ. ಪ್ರೈವೇಟ್ ಸೆಕ್ಟರ್‌ನವರಿಗೆ ಯಾರೇ ಇರಲಿ ಎಂದು ನಾನು ಹೇಳುವುದಿಲ್ಲ. ಒಂದು ಕಾರ್ಖಾನೆ ಯಾವ ಕಾರಣಕ್ಕೋಸ್ಕರ ರೋಗಗ್ರಸ್ತವಾಗಿದೆ, ಅದನ್ನು ಸರಿಪಡಿಸುವುದಕ್ಕೆ ನಮ್ಮ ಸರ್ಕಾರದ ಟೆಕ್ನಾಲಜಿಯು, ಇನ್‌ವೆಸ್ಟ್‌ಮೆಂಟಿನಿಂದಲೂ ಸಾಧ್ಯವಾಗುವುದಾದರೆ ಒಂದು ಸಣ್ಣ ಕಂಪನಿಯನ್ನೂ ಬೇರೆಯವರಿಗೆ ಕೊಡುವುದಿಲ್ಲ. ಅದು ಸ್ಪಷ್ಟ. ನಮಗೂ ಅಭಿಮಾನ ಇದೆ. ಅದರ ಬಗ್ಗೆ ಸಾಕಷ್ಟು ಗೌರವ ಇದೆ. ನಿನ್ನೆ ಯಾರೋ ಸದಸ್ಯರು ಒಂದು ಪ್ರಶ್ನೆ ಕೇಳಿ ಇಲ್ಲಿ ನಂಕಾನಿನಲ್ಲಿ ನಡೆಯುತ್ತಿದ್ದರೆ ಅದನ್ನು ತಗೊಂಡವರಿಗೆ ಹೇಗೆ ಲಾಭವಾಗುತ್ತದೆ, ಅವರು ಏಕೆ ತೆಗೆದುಕೊಳ್ಳುತ್ತಾರೆ ಎಂದು. ಇಲ್ಲಿ ಕೆಲವು ಕಾರಣಗಳಿವೆ. ಯಾರಲ್ಲಿ ಒಳ್ಳೆಯ ಬಂಡವಾಳ ಇದ್ದು ಸದ್ಯಕ್ಕೆ ಎರಡು ಮೂರು ವರ್ಷ ಲುಕ್ಸಾನನ್ನು ಭರಿಸತಕ್ಕ ಶಕ್ತಿ ಇರುವುದೋ ಅವನು ಕೊಳ್ಳುತ್ತಾನೆ. ಉದಾಹರಣೆಗೆ ಕಿಂಕೋ ಫ್ಯಾಕ್ಟರಿ. ಇದರಲ್ಲಿ ಒಳ್ಳೆಯ ಕೆಲಸಗಾರರಿದ್ದಾರೆ. ತಂತ್ರಜ್ಞರಿದ್ದಾರೆ, ಆದರೆ ರಾ ಮೆಟೀರಿಯಲ್ಸ್ ಇಲ್ಲ, ವರ್ಕಿಂಗ್ ಕ್ಯಾಪಿಟಲ್ ಇಲ್ಲ. ಆದರೆ ಅದನ್ನು ಹೇಗೋ ಸರಿ ಮಾಡುತ್ತಾರೆ. ಎಲೆಕ್ಟ್ರಿಸಿಟಿ ಕೊರತೆಯಿಂದ. ಬಂಡವಾಳದ ಕೊರತೆಯಿಂದ ಸಫರ್ ಆಗುತ್ತಾ ಇರತಕ್ಕಂಥ ಕಾರ್ಖಾನೆಗಳ ಬಗ್ಗೆ ನಾವು ಬಹಳ ಗಂಭೀರವಾಗಿ ಆಲೋಚನೆ ಮಾಡುತ್ತಿದ್ದೇವೆ. Basicably I am also very much interested in seeing that out public sector industries are put back on the rails, or their health is reinstated. ಕೆಲವನ್ನು ತೀರಾ ಇಟ್ಟುಕೊಳ್ಳುವುದಕ್ಕೇ ಸಾಧ್ಯವಿಲ್ಲ ಎನ್ನುವಂಥವನ್ನು ಬಿಸಾಡುತ್ತೇವೆ. ಅವು ಯಾವುವು, ಯಾವ ಕಾರಣಕ್ಕೋಸ್ಕರ ಎಂದು ಬಿಸಾಕಿದಾಗ ಹೇಳುತ್ತೇನೆ.

ಆ ಮೇಲೆ ಮೊಯ್ಲಿಯವರು ಪ್ರಾರಂಭದಲ್ಲಿ ಶ್ರೀ ವಿಶ್ವೇಶ್ವರಯ್ಯನವರನ್ನು ನೆನೆಸಿಕೊಂಡರು. ನಾನೂ ಅವರನ್ನೇ ನೆನೆಸಿಕೊಳ್ಳುತ್ತೇನೆ. ನಿಮ್ಮ ಯೋಜನೆಗಳೆಲ್ಲ ಹಳ್ಳಿಗಾಡಿನತ್ತ ಬರುವುದೇ ಇಲ್ಲ ಎಂದರು. ನಿಮ್ಮ ಎಕ್ಸ್‌ಪೆಂಡಿಚರ್ It is more in the State sect r and very little in the Private sector. ತಾವು ಹೇಳಿದ್ದೀರಲ್ಲ, ಸ್ಟೇಟ್ ಸೆಕ್ಟರ್‌ನಲ್ಲಿ ಜಾಸ್ತಿ ಖರ್ಚು ಮಾಡಿದ್ದೀರಿ. ಡಿಸ್ಟ್ರಿಕ್ಟ್ ಸೆಕ್ಟರ್‌ನಲ್ಲಿ ಕಡಿಮೆ ಎಂದೂ ಅವರು ಹೇಳಿದರು. ಅದರೊಳಗೆ ಇನ್ನೂ ಒಂದು ಅಂಶ ಇದೆ. ನಾವು ಸ್ಟೇಟ್ ಸೆಕ್ಟರ್‌ಗೆ ಲೆಕ್ಕ ಹಾಕತಕ್ಕಂಥ ಕೆಎಸ್‌ಐಐಡಿಸಿ, ಕೆಎಸ್‌ಎಫ್‌ಸಿ ಇವುಗಳ ಮೂಲಕ ಫೈನಾನ್ಸ್ ಮಾಡಿರುವ ಇಂಡಸ್ಟ್ರಿಗಳು ಡಿಸ್ಟ್ರಿಕ್ಟ್ ಸೆಕ್ಟರ್‌ಗೆ ಬರುತ್ತವೆ. ಬೀದರ್ ಜಿಲ್ಲೆಯಲ್ಲಿ ಈಗ 3 units of medium industries which started after declaration backward, have gone into production. ೧೯೮೨ ೮೩ರಲ್ಲಿ ಏನೂ ಹಣ ಖರ್ಚು ಮಾಡಿರಲಿಲ್ಲ. ೧೯೮೩–೮೪ರಲ್ಲಿ ೭,೨೮,೦೦೦ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೮೪–೮೫ರಲ್ಲಿ ೩,೩೩,೦೦,೦೦೦ ರೂ. ಖರ್ಚು ಮಾಡಿದ್ದೇವೆ. ೧೯೮೫–೮೬ರಲ್ಲಿ ಇಷ್ಟೊತ್ತಿಗಾಗಲೇ ೮೦ ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ, ಆ ಮೇಲೆ ಪ್ರತಿ ತಾಲ್ಲೂಕಿನಲ್ಲಿ ನೀವು ಇಂಡಸ್ಟ್ರಿಯಲ್‌ಗೋಸ್ಕರ ಜಮೀನು ಕೊಂಡುಕೊಂಡಿಲ್ಲವೆಂದು ಹೇಳಿದಿರಿ. ಅದರ ಬಗ್ಗೆ ನಾವು ಈಗಾಗಲೇ ೧೨೦ ತಾಲೂಕುಗಳಲ್ಲಿ ಜಮೀನನ್ನು ಕೊಂಡಿದ್ದೇವೆ. ಇನ್ನು ಉಳಿದ ೪೯ ತಾಲ್ಲೂಕುಗಳು ಪ್ರೋಗ್ರೆಸ್‌ನಲ್ಲಿದೆ. ಅಕ್ವೈರ್ ಮಾಡುತ್ತಿದ್ದೇವೆ.

ಟೆಕ್ನೋ ಎಕಾನಮಿಕ್ ಸರ್ವೆ ಕೆಲಸ ಈಗ ಮಾಡಿಸಿದ್ದೇವೆ, ಟೆಕ್ಸಾಕ್‌ನ ಬಗ್ಗೆ ಗುಲ್ಬರ್ಗಾ ಬಿಜಾಪುರ ಬೀದರ್ ಈ ಮೂರು ಜಿಲ್ಲೆಗಳಲ್ಲಿ ಸರ್ವೆ ಕೆಲಸ ಮಾಡಿಸಿದ್ದೇವೆ. ಎಸ್.ಜಿ.ಎಫ್.ನ ಬಗ್ಗೆ ಹೇಳಿದ್ದಾರೆ ಆದರ ಬಗ್ಗೆ ನಾನು ನಿಮ್ಮೊಡನೆ ಒಪ್ಪುತ್ತೇನೆ. ಎಸ್.ಜಿ.ಇ.ಎಫ್.ನ ಪ್ರಗತಿ ಕುಂಠಿತವಾಗುತ್ತಾ ಇದೆ. ಹೆಚ್ಚು ಲಾಭವನ್ನು ಪಡೆಯುತ್ತಿದ್ದಂತಹ ಕಾರ್ಖಾನೆ, ಇವೊತ್ತು ಲಾಭ ಪಡೆಯುತ್ತಿಲ್ಲವೆಂದರೆ ಸರ್ಕಾರಕ್ಕೆ ಅದರ ಬಗ್ಗೆ ಕಳವಳ ಇದೆ. ಇದಕ್ಕಾಗಿ ಈಗ ಜಪಾನ್ ಕೊಲಾಬರೇಷನ್‌ರವರ ಸಹಯೋಗದಿಂದ ಸುಧಾರಣೆ ಮಾಡುವವರಿದ್ದೇವೆ. ಹೊಸ ಮೆಜರ್ಸ್ ಬಗ್ಗೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಬಸವಲಿಂಗಪ್ಪ.—ಲಾಸ್ ಆಗುವುದಕ್ಕೆ ಏನು ಕಾರಣ ಇದೆ ಅದನ್ನು ಹೇಳಿ.

ಶ್ರೀ ಜೆ. ಎಚ್. ಪಾಟೀಲ್.—ಕೆಲವು ಕಾರಣಗಳಿವೆ. ಅಲ್ಲಿನ ಉತ್ಪಾದನಾ ಯಂತ್ರಗಳು ಸುಧಾರಣೆ ಆಗದೆ ಹಾಗೆಯೇ ಇವೆ. ಆಮೇಲೆ ಇವು ಬೇರೆಯವರ ಜೊತೆಯಲ್ಲಿ ಕಾಂಪಿಟೇಷನ್ ಮಾಡಬೇಕು. ಎನ್.ಜಿ.ಇ.ಎಫ್. ದೊಡ್ಡ ದೊಡ್ಡ ಕಂಪನಿಗಳವರ ಜೊತೆಯಲ್ಲಿ ಕಾಂಪಿಟೇಷನ್ ಮಾಡುತ್ತಿದೆ. ಇದರಿಂದ ಮಾರ್ಕೆಟ್‌ನಲ್ಲಿ ಬೆಲೆ ಏರುಪೇರಾಗುತ್ತದೆ. ಮಾನ್ಯ ಸದಸ್ಯರುಗಳು ಹೇಳಿದಹಾಗೆ ಕೆಲವರು ಅವ್ಯವಹಾರ ಮಾಡಿರಬಹುದು. ಅವಶ್ಯಕತೆಗಿಂತ ಹೆಚ್ಚಾಗಿ ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯವರು ರಿಮಾರ್ಕ್ಸ್ ಮಾಡಿದ್ದಾರೆ.

ಶ್ರೀ ಬಸವಲಿಂಗಪ್ಪ.—ಎನ್.ಜಿ.ಇ.ಎಫ್. ಎರಡು ವರ್ಷಗಳ ಹಿಂದೆ ಲಾಭದಾಯಕವಾಗಿತ್ತು ಎನ್ನುವುದನ್ನು ತಾವು ಒಪ್ಪುತ್ತೀರಿ. ದೇಶದಲ್ಲಿ ಏನಾಗುತ್ತಿದೆ ಎಂಬುದು ನಮಗೆ ಬೇಕಾಗಿಲ್ಲ. ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯವರು ಏನು ಶಿಫಾರಸ್ಸು ಮಾಡಿದ್ದಾರೆಂಬುದು ಅದೂ ಕೂಡ ತಮ್ಮ ಮುಂದಿದೆ. ನಾನು ಹೇಳುವುದು ಇಷ್ಟೆ—ನೀವು ದೇಶಕ್ಕೆ ಹೋಲಿಕೆ ಮಾಡುವುದಕ್ಕೆ ಹೋಗಬೇಡಿ. ತಾವು ಮಂತ್ರಿಗಳಾಗಿದ್ದೀರಿ, ತಾವು ಈಗ ಅಧಿಪತಿಗಳಾಗಿದ್ದೀರಿ ಆ ಮಾತನ್ನು ತಾವು ಕೂಡ ಒಪ್ಪುತ್ತೀರಿ. ತಾವು ನುರಿತವರಿದಿದ್ದೀರಿ ಇದನ್ನು ಸರಿಪಡಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ ? ಯಾರ್ಯಾರು ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ ? ನೀವು ಎನ್.ಜಿ.ಇ.ಎಫ್.ನಲ್ಲಿ ಎಷ್ಟು ಜನಗಳಿಗೆ ಕೆಲಸ ಕೊಟ್ಟಿದ್ದೀರಿ ? ನಿಮ್ಮ ಮೇಲೆ ಆ ರೀತಿಯ ಪರಿಣಾಮ ಬೀರಿದ್ದಾರೆಯೆ ? ಅಲ್ಲಿ ಎಷ್ಟು ಜನ ಕೆಲಸಗಾರರು ಇರಬೇಕಾಗಿತ್ತು ? ಈಗ ಏನು ಮಾಡುತ್ತಿದ್ದೀರಿ ಅದನ್ನು ಹೇಳಿ ?

ಶ್ರೀ ಜೆ. ಎಚ್. ಪಟೇಲ್.—ನಾನು ಆಗಿದ್ದನ್ನು ಹೇಳುತ್ತಿಲ್ಲ. ಕಳೆದ ಎರಡು ಮೂರು ವರ್ಷಗಳ ಹಿಂದಿನ ಮಾತು ಹೇಳುತ್ತಿದ್ದೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹೊಸದಾಗಿ ಎಲ್ಲೂ ಅಪಾಯಿಂಟ್ ಮಾಡಕೂಡದೆಂದು ನಾವು ಪಾಲಿಸಿ ಮಾಡಿದ್ದೇವೆ. ಟೆಕ್ನಿಕಲ್ ಬಿದ್ದರೂ ಅವಶ್ಯಕತೆ ಇದ್ದರೆ ಮಾತ್ರ ಅಪಾಯಿಂಟ್ ಮಾಡುತ್ತಿದ್ದೇವೆ. ಈಗ ಯಾವುದೇ ರೀತಿಯ ಅಪಾಯಿಂಟ್‌ಮೆಂಟ್ ಆಗುತ್ತಿಲ್ಲ. ರಾಜಕೀಯ ಒತ್ತಡ ಈಗ ತಂದರೆ ಏನೂ ಪ್ರಯೋಜನವಿಲ್ಲ. ನಾವು ಶಿಸ್ತಿನಿಂದ ಇದ್ದೇವೆ. ಮಾನ್ಯ ಬಸವಲಿಂಗಪ್ಪನವರು ದೇಶದ ಕತೆ ಹೇಳಬೇಡಿ ಎಂದು ಹೇಳಿದ್ದಾರೆ. ನಾವು ತಯಾರು ಮಾಡತಕ್ಕ ಮಾಲನ್ನು ರಾಜಸ್ಥಾನದಲ್ಲಿ ಮಾರಾಟ ಮಾಡಬೇಕು, ಪೈಪೋಟಿ ಇದೆ. ವಿ.ಎಸ್.ಐ.ಎಲ್. ಬಗ್ಗೆ ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ವಿ.ಎಸ್.ಐ.ಎಲ್.ನ ರಿಪೋರ್ಟ್ ಬಂದಿದೆಯೇ ?

ಶ್ರೀ ಜೆ. ಎಚ್. ಪಟೇಲ್.—ವಿ.ಎಸ್.ಐ.ಎಲ್.ನವರು ರಿಪೋರ್ಟ್ ತಯಾರು ಮಾಡುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಕಂಟ್ರಾಕ್ಟ್ ಕೊಡುವುದನ್ನು ನಿಲ್ಲಿಸಿ.

ಶ್ರೀ ಜೆ. ಹೆಚ್. ಪಟೇಲ್.—ವಿದ್ಯುಚ್ಛಕ್ತಿ ಪ್ರೋಸೆಸ್‌ನಲ್ಲಿ ಇದೆ. ನ್ಯೂ ಟೆಕ್ನಾಲಜಿ ಅದಕ್ಕೆ ಒಬ್ಬರು ಇಂಜಿನಿಯರ್ ನೇಮಕ ಮಾಡಿದ್ದೇವೆ ದಸ್ತೂರ್ ಅಂಡ್ ಕಂಪನಿಯವರು ಹೊಸ ತಾಂತ್ರಿಕತೆಯನ್ನು ಮಾಡುತ್ತಿದ್ದಾರೆ. ಕಾಸ್ಟ್ ಆಫ್ ಪ್ರೊಡಕ್ಷನ್, ಎಲೆಕ್ಟ್ರಿಸಿಟಿ ಯುಟಿಲಿಟಿ ಏನಿದೆ ಅದನ್ನು ರೆಡ್ಯೂಸ್ ಮಾಡಲು ಪ್ರೋಸೆಸ್ ಆಗುತ್ತದೆ. ಮೈಶುಗರ್ ಕಂಪನಿ ಬಗ್ಗೆ ಹೇಳಿದ್ದಾರೆ. ಈಗಾಗಲೇ ೧ ಲಕ್ಷದ ೪೫ ಸಾವಿರ ಟನ್ ಕಬ್ಬನ್ನು ಅರೆದಿದ್ದಾರೆ. ಇದುವರೆಗೆ ಇನ್ನೂ ಹೆಚ್ಚಿಗೆ ಕಬ್ಬನ್ನು ಅರೆದಿರಬಹುದು. ಆರು ಲಕ್ಷ ಟನ್ ಕಬ್ಬನ್ನು ಅರೆಯುವ ಗುರಿಯನ್ನು ಹೊಂದಿದ್ದಾರೆ. ಈಗಾಗಲೇ ೧ ಲಕ್ಷದ ೪೫ ಸಾವಿರ ಟನ್ ಕಬ್ಬನ್ನು ಅರೆಯಲಾಗಿದೆ. ಶುಗರ್ ಇಂಡಸ್ಟ್ರೀಸ್ ಬಗ್ಗೆ ಜನರಲ್ ಆಗಿ ಹೇಳಿದ್ದೇನೆ.

ಶ್ರೀ ಕೆ. ಎಸ್. ನಾಗರತ್ನಮ್ಮ.—ಮಹದೇಶ್ವರ ಸಹಕಾರ ಸಕ್ಕರೆ ಕಂಪನಿಯನ್ನು ಏನು ಮಾಡುತ್ತೀರಿ ? ಅದನ್ನು ಸಾಯಿಸುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಇಂಡಸ್ಟ್ರಿಯನ್ನು ಸಾಯಿಸಿದರೆ ನಮಗೇನು ಬರುತ್ತದೆ ? ನಮ್ಮ ಇಂಡಸ್ಟ್ರಿಯನ್ನು ನಾವೇ ನಡೆಸುತ್ತಿದ್ದೇವೆ. ಯಾರಾದರೂ ಸಹಾಯ ಮಾಡುವುದಾದರೆ ಅದನ್ನು ತೆಗೆದುಕೊಂಡು ನಡೆಸಬಹುದು. ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನವರು ಏಕಾಏಕಿ

ಅಧಿಕಾರಿಗಳನ್ನು ಬದಲಾವಣೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಕೈಗಾರಿಕಾಭಿವೃದ್ಧಿಯಲ್ಲಿ ಮಾಹಿತಿ ಇಲ್ಲದೇ ಇರತಕ್ಕ ಅಧಿಕಾರಿಗಳನ್ನು ಹಾಕುವುದು ಒಂದು ಕಾರಣವೆಂದು ಅವರು ಹೇಳಿದ್ದಾರೆ. ಆ ಮಾತನ್ನು ನಾನು ಒಪ್ಪುತ್ತೇನೆ. ಕೈಗಾರಿಕಾಭಿವೃದ್ಧಿಗಳ ಬಗ್ಗೆ ಸ್ಪೆಷಲ್ ಕೇಡರ್ ಕ್ರಿಯೇಟ್ ಮಾಡಬೇಕೆಂದು ಮಾನ್ಯ ಮೊಹಿದ್ದೀನ್‌ರವರು ಹೇಳಿದರು, ಕೈಗಾರಿಕೆಗಳನ್ನು ಸರಿಯಾಗಿ ನಡೆಸಬೇಕೆಂದು ಸಹ ಹೇಳಿದ್ದಾರೆ. ಅವನ್ನು ನಾವು ಈಗ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—೧೯೮೧-೮೨ರವರೆಗೆ ರಿಪೋರ್ಟ್ ಕೊಟ್ಟಿದ್ದಾರೆ. ಅಲ್ಲಿಂದೀಚೆಗಿನ ರಿಪೋರ್ಟ್‌ನ್ನು ಕೊಟ್ಟಿಲ್ಲ.

ಶ್ರೀ ಜೆ.ಎಚ್. ಪಟೇಲ್.—ರಿಪೋರ್ಟ್‌ನ್ನು ಕೊಡಲು ತಡವಾಗುವುದಕ್ಕೆ ಒಂದು ಕಾರಣವಿದೆ ಅದು ಮೂರು ತರಹ ಆಡಿಟ್ ಆಗಬೇಕು. ಇಂಟರ್‌ನಲ್ ಆಡಿಟ್ ಆಗಿ, ಆಮೇಲೆ ಬೋರ್ಡ್ ಅಪ್ರೂವಲ್ ಮಾಡಬೇಕು. ಆಮೇಲೆ ಅಕೌಂಟೆಂಟ್ ಜನರಲ್‌ರವರು ಸ್ಟ್ಯಾಚುಟರಿ ಆಡಿಟರ್‌ರನ್ನು ಅಪಾಯಿಂಟ್ ಮಾಡಬೇಕು. ಸ್ಟ್ಯಾಚುಟರಿ ಆಡಿಟ್ ಮಾಡಿದ ಮೇಲೆ ಅದು ಪುನಃ ಅಕೌಂಟೆಂಟ್ ಜನರಲ್‌ಗೆ ಹೋಗಬೇಕು ಆಮೇಲೆ ಪಬ್ಲಿಕ್ ಅಂಡರ್‌ಟೇಕಿಂಗ್ ಬರಬೇಕು. ೧೯೮೩-೮೪ರವರೆಗೆ ಬಹುತೇಕ ಕಂಪನಿಗಳ ರಿಪೋರ್ಟ್ ಆಗಿವೆ,

ಸಿಮೆಂಟ್ ಇಂಡಸ್ಟ್ರೀಸ್ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಗೌರ್ನಮೆಂಟ್ ಆಫ್ ಇಂಡಿಯಾ ಹೆಚ್ಚು ಆಸಕ್ತಿಯನ್ನು ವಹಿಸಿ ಕೆಲಸ ಮಾಡುತ್ತಿದೆ ಅದನ್ನು ನಾನು ಒಪ್ಪುತ್ತೇನೆ. ಇದೇ ಸಂದರ್ಭದಲ್ಲಿ ಮಾನ್ಯ ವೀರಪ್ಪಮೊಯಿಲಿಯವರಿಗೆ ಒಂದು ಮಾತು ಹೇಳಬೇಕಾಗಿದೆ. ಮಾನ್ಯ ಜಾರ್ಜ್‌ಫರ್ನಾಂಡಿಸ್ ರವರು ಕೇಂದ್ರದಲ್ಲಿ ಇಂಡಸ್ಟ್ರಿ ಮಿನಿಸ್ಟರ್ ಆಗಿದ್ದಾಗ, ಈ ಒಂದು ಇಂಡಸ್ಟ್ರೀಸ್ ಪಾಲಿಸಿಯನ್ನು ಮಾಡಿದ್ದರು. ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಸಿಮೆಂಟ್ ಫ್ಯಾಕ್ಟರಿಗಳು ಬರ ಬೇಕು ಏಕೆಂದರೆ ಸಿಮೆಂಟ್‌ಗೆ ಬೇಕಾದಂತಹ ಕಚ್ಚಾ ಪದಾರ್ಥ ಸುಣ್ಣದ ಕಲ್ಲು ಹೇರಳವಾಗಿ ಇಲ್ಲಿ ಸಿಗುತ್ತದೆ ಆದುದರಿಂದ ಮಿನಿ ಸಿಮೆಂಟ್ ಫ್ಯಾಕ್ಟರಿಗಳಾದರೂ ಸಹ ಬರಬೇಕೆಂದು ಅವರು ಪ್ರೋಗ್ರಾಮ್ ಹಾಕಿದ್ದರು. ಆ ಒಂದು ಕಾರ್ಯಕ್ರಮ ಈಗಲೂ ನಡೆದುಕೊಂಡು ಬರುತ್ತಿದೆ. ನಮ್ಮ ರಾಜ್ಯದಲ್ಲಿ ಸಿಗುವಷ್ಟು ಸುಣ್ಣದ ಕಲ್ಲು ಬೇರೆ ಕಡೆ ಎಲ್ಲೂ ಸಿಗುವುದಿಲ್ಲ. ನಮ್ಮ ಸರ್ಕಾರ ಕೂಡ ಹಾಕಿ ಕೊಂಡಿರತಕ್ಕ ಕಾರ್ಯಕ್ರಮದ ಪ್ರಕಾರ ನಡೆದುಕೊಂಡು ಬರುತ್ತಿದೆ. ಇಂಡಸ್ಟ್ರಿ ಮ್ಯಾಪ್‌ನಲಿ ನಮ್ಮ ಪ್ಲೇಸ್ ಕೆಳಗೆ ಬಂದಿದೆ ಎಂದು ಹೇಳಿದ್ದಾರೆ. ಯಾವ ದೃಷ್ಟಿಯಲ್ಲಿ ಕೆಳಗೆ ಬಂದಿದೆಯೋ ನನಗೆ ಗೊತ್ತಿಲ್ಲ. ಇನ್‌ವೆಸ್ಟ್‌ಮೆಂಟ್ ದೃಷ್ಟಿಯಿಂದಲೋ, ರಿಟರ್ನ್ಸ್ ದೃಷ್ಟಿಯಿಂದಲೋ, ಪ್ರೊಡಕ್ಷನ್ ದೃಷ್ಟಿಯಿಂದಲೋ, ಗ್ರೋತ್ ದೃಷ್ಟಿಯಿಂದಲೋ ಅದನ್ನು ಸ್ಪೆಸಿಫಿಕ್ ಆಗಿ ಕೇಳಿದರೆ ನಾನು ಉತ್ತರ ಹೇಳುತ್ತೇನೆ. ಇದು ಏನಾಗಿದೆ ಎಂದು ನೋಡಿದಾಗ. ಕೇಂದ್ರಸರ್ಕಾರ ಉತ್ತರಪ್ರದೇಶಕ್ಕೆ ೨೦ ಸಾವಿರ ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್‌ಮೆಂಟ್ ಮಾಡಿದರೆ ನಮ್ಮಲ್ಲಿ ಇನ್‌ವೆಸ್ಟ್ ಮಾಡುವುದಿಲ್ಲ. ಈ ಪ್ರಶ್ನೆಗೆ ತಾವೇ ಉತ್ತರ ಹೇಳಿ, ನಮ್ಮ ರಾಜ್ಯದ ಗೌರವವನು ಮಾರಿಲ್ಲ. ಯಾವುದೇ ಅಗೌರವ ತರುವಂತಹ ಇಂಡಸ್ಟ್ರಿಗಳು ಇದ್ದರೆ ಅಂಥವುಗಳನ್ನು ಪರಿಶೀಲನೆ ಮಾಡಿದ್ದೇವೆ. ಮಾನ್ಯ ಮೊಹಿದ್ದೀನ್‌ರವರು ವಾರ್ಷಿಕ ವರದಿ ರಾಂಗ್ ಆಗಿದೆ ಎಂದು ಹೇಳಿದ್ದಾರೆ. ಎಲ್ಲಿ ರಾಂಗ್ ಆಗಿದೆಯೆಂದು ಹೇಳಿದರೆ ಅದನ್ನು ನಾವು ತಿದ್ದಿಕೊಳ್ಳುತ್ತೇವೆ. ಮಾನ್ಯಸದಸ್ಯರು ಕಂಪನಿಗಳು ಆಡಿಟ್ ಮಾಡಿಸಿಲ್ಲವೆಂದು ಹೇಳಿದ್ದಾರೆ. ಆಡಿಟ್ ಆಗಬೇಕಾದರೆ ಮೂರು ಸ್ಟೇಜ್ ಇದೆ. ಅದೆಲ್ಲಾ ಮುಗಿದು ಅನಂತರ ಅಕೌಂಟೆಂಟ್ ಜನರಲ್‌ಗೆ ಹೋಗಬೇಕು. ಮಾನ್ಯಸದಸ್ಯರ ವಿಚಾರವನ್ನು ನಾನು ಒಪ್ಪುತ್ತೇನೆ. ಅನಾವಶ್ಯಕವಾಗಿ ಡಿಲೇ ಆಗಬಾರದೆಂದು ಹೇಳಿದ್ದಾರೆ.

ಚಿತ್ರದುರ್ಗ ಕಾಪರ್ ಇಂಡಸ್ಟ್ರೀಸ್ ಏಕೆ ನಿಂತಿರುತ್ತದೆ ಎಂದು ಕೇಳಿದ್ದೀರಿ. ಇದನ್ನು ಹಟ್ಟಿ ಗೋಲ್ಡ್ ಮೈನ್ಸ್ ಜೊತೆಗೆ ಮರ್ಜ್ ಮಾಡಿದ್ದೇವೆ. ಅದಕ್ಕೆ ಕೆಲವು ತಾಂತ್ರಿಕ ಕಾರಣಗಳು ಇವೆ. ಅದನ್ನು ನಾವೇ ರನ್ ಮಾಡುತ್ತೇವೆ. ಚನ್ನಗಿರಿಯಲ್ಲಿ ಸ್ಪಿನ್ನಿಂಗ್ ಮಿಲ್ ಏಕೆ ಮಾಡುತ್ತಿಲ್ಲವೆಂದು ಕೇಳಿದ್ದೀರಿ. ಇದರ ಬಗ್ಗೆ ಒಂದು ಮಾತು, ನಮ್ಮ ರಾಜ್ಯ ಕಳೆದ ನಾಲ್ಕೈದು ವರ್ಷಗಳಲ್ಲಿ ಹತ್ತಿ ಬೆಳೆ ಬೆಳೆಯುವುದರಲ್ಲಿ ಮುಂದುವರಿದಿದೆ. ಈ ಹತ್ತಿ ಬೆಳೆ ಎಷ್ಟು ಹೆಚ್ಚಾಗಿದೆ ಎಂದರೆ, ತಮಿಳುನಾಡಿಗೆ ಹೋಲಿಸಿದರೆ, ನಮ್ಮಲ್ಲಿ ಬೆಳೆಯುತ್ತಿರುವ ಹತ್ತಿ ಬೆಳೆ ಮತ್ತು ಮಿಲ್ಲುಗಳ ಸಂಖ್ಯೆ ಇವತ್ತು ವಿಚಾರ ಮಾಡುವ ಸ್ಥಿತಿಯಲ್ಲಿ ಇದೆ. ತಮಿಳುನಾಡಿನಲ್ಲಿ area under cotton cultivation is

2.28 lakh hectares. In Karnataka it is 9.8 lakh hectares, Cotton production in Karnataka is 6.5 lakh bales, in Tamil Nadu it is about 2.9 lakh bales. Yield per hectare in Karnataka is 100 Kgs. whereas in Tamilnadu it is 220 Kgs per hectare. Total composite mills in Karnataka is 11, in Tamil Nadu it is 24 There are 21 Spinning Mills in Karnataka, whereas in Tamil Nadu there are 213 mils. ನಮ್ಮಲ್ಲಿ ಬೆಳೆಯುತಕ್ಕ ಆರೂವರೆ ಲಕ್ಷ ಬೇಲ್ ಹತ್ತಿಯಲ್ಲಿ ಮೂರನೇ ಒಂದು ಭಾಗವನ್ನೂ ಉಪಯೋಗ ಮಾಡುತ್ತಿಲ್ಲ. ನಮ್ಮಲ್ಲಿ ಬೆಳೆಯುತಕ್ಕ ಹತ್ತಿಯನ್ನು ಬೇರೆ ಕಡೆಗೂ ಹೋಗುತ್ತಿದೆ. ಸ್ಪಿನ್ನಿಂಗ್ ಮಿಲ್ಲುಗಳ ಕಡೆ ಹೆಚ್ಚು ಗಮನ ಕೊಡುತ್ತಿದ್ದೇವೆ. ಕೇಂದ್ರ ಸರ್ಕಾರದವರಿಗೆ ಹೋದಸಾರಿ ನಾವು ನಾಲ್ಕು ಸ್ಪಿನ್ನಿಂಗ್ ಮಿಲ್ಲುಗಳಿಗೆ ರೆಕ್‌ಮೆಂಡ್ ಮಾಡಿ ಕಳುಹಿಸಿದ್ದರೆ, ಎನ್.ಸಿ.ಡಿ.ಸಿ, ಯವರು ಎರಡು ಮಿಲ್ಲುಗಳಿಗೆ ಮಾತ್ರ ಅಪ್ರೂವಲ್ ಮಾಡಿದ್ದಾರೆ. ಈ ಬಗ್ಗೆ ನಾವು ಕೇಂದ್ರಸರ್ಕಾರಕ್ಕೆ, ನಮ್ಮ ಬೇಡಿಕೆಯನ್ನು ಕನ್‌ಸಿಡರ್ ಮಾಡಿ ಎಂದು ಮನವಿ ಮಾಡಿಕೊಳ್ಳುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ.—ಈ ಸ್ಪಿನ್ನಿಂಗ್ ಮಿಲ್ ವಿಷಯವಾಗಿ ನಾಲ್ಕು ಸ್ಪಿನ್ನಿಂಗ್ ಮಿಲ್ಲುಗಳಿಗೆ ರೆಕ್‌ಮಂಡ್ ಮಾಡಿದ್ದೇವೆಂದು ಹೇಳಿದರು, ಇವರು ೭ ಮಿಲ್ಲುಗಳಿಗೆ ರೆಕ್‌ಮೆಂಡ್ ಮಾಡಿದ್ದಾರೆ. ಇದರಲ್ಲಿ ೩ ಮಿಲ್ಲುಗಳಿಗೆ ಸ್ಯಾಂಕ್ಷನ್ ಕೊಟ್ಟಿದ್ದಾರೆ. ಇನ್ನು ನಾಲ್ಕು ಮಿಲ್ಲುಗಳಿಗೆ ಬರಬೇಕಾಗಿದೆ. ಈ ನಾಲ್ಕು ಮಿಲ್ಲುಗಳಲ್ಲಿ ಎರಡು ಮಿಲ್ಲುಗಳಿಗೆ ೫೦-೫೦ ಲಕ್ಷ ಸ್ಯಾಂಕ್ಷನ್ ಮಾಡಿದ್ದಾರೆ. ಉಳಿದ ಎರಡು ಮಿಲ್ಲುಗಳಿಗೆ ಮಾಡಿಲ್ಲ. ಇದರ ಉದ್ದೇಶ ಏನೋ ಗೊತ್ತಿಲ್ಲ. ಎನ್.ಸಿ.ಡಿ.ಸಿ. ಯವರು ಅಪ್ರೂವಲ್ ಕೊಡದೇ ಹೋದರೂ ಸಹ ಮಹಾರಾಷ್ಟ್ರದಲ್ಲಿ ಅಪೆಕ್ಸ್ ಬ್ಯಾಂಕ್‌ನ ಮೂಲಕ ಹಣ ಕೊಟ್ಟು ಪ್ರಾರಂಭ ಮಾಡುತ್ತಿದ್ದಾರೆ. ಆ ರೀತಿ ನಮ್ಮ ರಾಜ್ಯದಲ್ಲಿಯೂ ಏಕೆ ಮಾಡಬಾರದು? ಹರಿಜನ ಗಿರಿಜನರು ೨೦ ಪರ್ಸೆಂಟ್ ಇರತಕ್ಕ ಮಿಲ್ಲುಗಳಿಗೆ ಯಾವರೀತಿಯ ಮನ್ನಣೆಯನ್ನು ಕೊಡುತ್ತಿಲ್ಲ ಏಕೆ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ್ದಾರೆ, ಈಗಾಗಲೇ ೩ ಮಿಲ್‌ಗಳಿಗೆ ಸ್ಯಾಂಕ್ಷನ್ ಕೊಟ್ಟಿದ್ದಾರೆ, ಉಳಿದ ೪ರಲ್ಲಿ ಎರಡಕ್ಕೆ ಅಪ್ರೂವ್ ಮಾಡಿದ್ದಾರೆ, ಎರಡಕ್ಕೆ ರಾಜ್ಯ ಸರ್ಕಾರದವರು ಹಣ ಕೊಟ್ಟಿದ್ದಾರೆ ಉಳಿದ ಎರಡಕ್ಕೆ ಬಿಟ್ಟಿದ್ದಾರೆ ಎಂದು ಹೇಳಿರುತ್ತಾರೆ. ಇದರಲ್ಲಿ ನಮ್ಮ ಉದ್ದೇಶ ಈಗಲೂ ಇದೆ, ನಮ್ಮ ರಾಜ್ಯ ಹೆಚ್ಚು ಹತ್ತಿ ಬೆಳೆಯುತಕ್ಕ ಪ್ರದೇಶವಾಗಿದೆ. ರಾಜ್ಯಸರ್ಕಾರ ಎಲ್ಲಾ ಮಿಲ್ಲುಗಳಿಗೂ ಹಣ ತೊಡಗಿಸುವ ಸ್ಥಿತಿಯಲ್ಲಿ ಇಲ್ಲದೇ ಇರುವುದರಿಂದ, ನಾವು ಕೇಂದ್ರ ಸರ್ಕಾರದ ಸಹಾಯವನ್ನು ಕೇಳಿರುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಸದಸ್ಯರು ಹೇಳಿದ್ದು, ೨೦ ಪರ್ಸೆಂಟ್ ಎಸ್.ಸಿ.ಎಸ್.ಟಿ ಇರತಕ್ಕ ಮಿಲ್ಲುಗಳಿಗೆ ಆಧ್ಯತೆ ಕೊಟ್ಟು, ಮಂಜೂರ್ಮಾಡುವುದನ್ನು ಪ್ರಸ್ತಾಪ ಮಾಡಿದ್ದಾರೆ. ರಾಣಿಬೆನ್ನೂರಿನ ಮಿಲ್‌ನಲ್ಲಿ ೨೦ ಪರ್ಸೆಂಟ್ ಹರಿಜನ ಗಿರಿಜನರು ಇದ್ದಾರೆ. ಅದರ ದಾಖಲೆಗಳು ಕೂಡ ಇವೆ. ಅದನ್ನು ಬಿಟ್ಟು ಬೇರೆಯವರಿಗೆ ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೆವು. ಅವರು ಅಪ್ರೂವ್ ಮಾಡಿ ಕಳುಹಿಸಿರುವುದರಲ್ಲಿ. ರಾಣಿಬೆನ್ನೂರಿಗೆ ಅಪ್ರೂವ್ ಆಗಿಲ್ಲ. ಅದರ ವಿವರಗಳನ್ನು ತರಿಸಿ ಕೊಳ್ಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್.—ನಾಲ್ಕು ಮಿಲ್ಲುಗಳಿಗೆ ಅಪ್ರೂವ್ ಆಗಿಲ್ಲ. ಇವುಗಳ ಪೈಕಿ ಎರಡು ಮಿಲ್ಲುಗಳಿಗೆ ೫೦-೫೦ ಲಕ್ಷ ಸ್ಯಾಂಕ್ಷನ್ ಮಾಡಿದ್ದೀರಿ. ೨೦ ಪರ್ಸೆಂಟ್ ಹರಿಜನ ಗಿರಿಜನ ಇರತಕ್ಕ ಮಿಲ್ಲುಗಳಿಗೆ ಮಾಡಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಹೋದ ವರ್ಷ ಎರಡು ಮಿಲ್ಲುಗಳಿಗೆ ಕೊಟ್ಟಿದ್ದು. ಉಳಿದ ಎರಡು ಮಿಲ್ಲುಗಳಿಗೆ ಕೇಂದ್ರ ಸರ್ಕಾರದ ಅಪ್ರೂವಲ್ ಬಂದಮೇಲೆ ಕೊಡಬೇಕಾಗುತ್ತದೆ. ೨೦ ಪರ್ಸೆಂಟ್ ಎಸ್‌ಸಿ. ಎಸ್‌ಟಿ. ಇದ್ದುದನ್ನು ಬಿಟ್ಟು ಬೇರೆಯವರಿಗೆ ಏಕೆ ಕೊಟ್ಟಿದ್ದೀರಿ ಎಂದು ಕೇಳುತ್ತಿದ್ದೀರಿ. ನಾಲ್ಕು ಸಹಕಾರಿ ವಲಯದಲ್ಲಿರತಕ್ಕ ಕಾರ್ಖಾನೆಗಳಲ್ಲಿ ಎರಡಕ್ಕೆ ಮಾತ್ರ ಉತ್ತೇಜನ ಕೊಟ್ಟಿದ್ದೀರಿ ಏಕೆ ಎಂದೂ ಕೇಳಿದ್ದೀರಿ, ನಮ್ಮ ಉದ್ದೇಶ ಅದಲ್ಲ. ನಾಲ್ಕು ಕೋಟಿ ರೂಪಾಯಿಗಳ ಹಣ ಕೊಡಬೇಕು

ಎಂಬುದು. ಹಣದ ಕೊರತೆ ಇದೆ. ಇನ್ನು ಮಾನ್ಯ ಶ್ರೀನಿವಾಸ್‌ರವರು ಮಾತನಾಡುತ್ತಾ, ಕೈಗಾರಿಕಾ ನೀತಿ, ಇದು ಹೊಸದೇನಲ್ಲ, ಸ್ವಾತಂತ್ರ್ಯ ಪೂರ್ವದಲ್ಲಿಯೇ ಇತ್ತು, ಈಗಲೂ ಅದೇ ಇದೆಯೆಂದು ಹೇಳಿದರು ಅದು ಸರಿ. ಆದ್ಯತೆಗಳನ್ನು ಗುರುತಿಸುವಾಗ, ಕೆಲವು ಬೇರೆ ಆದ್ಯತೆಗಳನ್ನು ಗುರುತಿಸಿದ್ದೇವೆ ಈಗಿರತಕ್ಕ ಆರ್ಥಿಕ, ಸಾಮಾಜಿಕ ಪರಿಸ್ಥಿತಿ ಹಾಗೂ ರಾಜಕೀಯ ಚಿಂತನೆಯನ್ನು ಅಳವಡಿಸಿಕೊಂಡು ನಮ್ಮ ನೀತಿಯನ್ನು ನಿರೂಪಿಸಿದ್ದೇವೆ. ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್, ವಿಲೇಜ್ ಇಂಡಸ್ಟ್ರೀಸ್ ಲೆಸ್ ಪವರ್ oriented over ಲೇಬರ್ ಓರಿಯಂಟೆಡ್ ಇವೆಲ್ಲಾ ನಮ್ಮ ನೀತಿಗಳು. ನಾವು ಇವತ್ತು ಸರ್ಕಾರಿ ಕಾರ್ಖಾನೆಗಳನ್ನು ಹರಾಜು ಮಾಡಿ ಕುಳಿತುಕೊಳ್ಳಬೇಕೆಂಬುದು ನಮಗಿಲ್ಲ. ನಮ್ಮ ಆರ್ಥಿಕ ಆರೋಗ್ಯ ಸುಧಾರಿಸಿದರೆ ಎಲ್ಲವೂ ವ್ಯವಸ್ಥಿತವಾಗಿ ನಡೆಯುತ್ತವೆ. ಮಾನ್ಯ ಶ್ರೀನಿವಾಸ್‌ರವರು ಸರ್ಕಾರಿ ವಲಯದಲ್ಲಿರತಕ್ಕಂಥ ಬಿಳಿ ಆನೆಗಳನ್ನು ಸರಿ ಮಾಡಿ ಎಂದು ಹೇಳಿದ್ದಾರೆ. ಉಡುಪಿಯಲ್ಲಿ ನಡೆಯುತ್ತಿರುವ ಪರ್ಯಾಯ ಎಂದು ಹೇಳಿದರು. ಆದರೆ ಆ ರೀತಿ ಏನೂ ಆಗಿಲ್ಲ. ಆಮೇಲೆ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಬಗ್ಗೆ ಹೇಳಿದ್ದಾರೆ. ಅದಕ್ಕೆ ನಾನು ಹಿಂದೆಯೇ ಉತ್ತರ ಕೊಟ್ಟಿದ್ದೇನೆ, ಎಂ.ಎಸ್.ಐ.ಎಲ್ ಮತ್ತು ಕೆ.ಎಸ್.ಡಿ. ಈ ಎರಡು ಕಾರ್ಖಾನೆಗಳಲ್ಲಿರತಕ್ಕ ಕೆಲವು ಅಧಿಕಾರಿಗಳ ವೈಯಕ್ತಿಕ ಪ್ರತಿಷ್ಠೆಯ, ಕೆಲವು ವಿಷಯಗಳು ನಡೆದಿರಬಹುದು. ಇವೆರಡೂ ಸರ್ಕಾರಿ ಕಂಪೆನಿಗಳು ಯಾವ ಅಧಿಕಾರಿಯೇ ಆಗಲೀ ವಿನಾಕಾರಣ, ಈ ಕಾರ್ಖಾನೆಗಳ ಬಗ್ಗೆ ಸಂಶಯ ಬರುವಹಾಗೆ ವರ್ತನೆ ಮಾಡಿದ್ದರೆ, ಅವರ ಬಗ್ಗೆ ಕ್ರಮ ತೆಗೆದುಕೊಳ್ಳಲು ವಿವರಣೆಯನ್ನು ಕೇಳಿದ್ದೇನೆ. I will see that the officers in both the undertakings are set right I would like to see that they run well. The bleaching plant is not working.

ಈ ಬ್ಲೀಜಿಂಗ್ ಪ್ಲಾಂಟ್ ಏನು ಇಲೆ ಇದನ್ನು ಸದಾ ಕಾಲ ನಡೆಸುವುದಕ್ಕಾಗುವುದಿಲ್ಲ: ಇದರ ಬಗ್ಗೆ ತಮಗೆ ಸಂಶಯ ಬೇಕಾಗಿಲ್ಲ. Depending upon the necessity glucerine plant is also used when the rice-bran oil is used to remove the glucerine palmstric ಆಸಿಡ್ ಅನ್ನು ಒಂದು ಸಾರಿ ಎಸ್‌ಟಿಸಿ ಯವರು ಮಾರಿದ್ದಾರೆ. ಅನಂತರ ಬೋರ್ಡ್ ಆಫ್ ಡೈರಕ್ಟರ್ಸ್ ಮಾರುವುದನ್ನು ನಿಲ್ಲಿಸಿದರು. ಏತಕ್ಕೆಂದರೆ ಅದು ಓಲ್ಡ್ ಸ್ಟಾಕ್ ಅದು ಏನೂ ಪ್ರಯೋಜನಕ್ಕೆ ಬರುವುದಿಲ್ಲ ಎಂದು ಮಾರಿದರು. ಈಗಾಗಲೇ ಅದರಲ್ಲಿ ೧೨ ಸಾವಿರ ಟನ್ ಕೆಪಾಸಿಟಿ ಏನು ಇತ್ತು ಅದನ್ನು ಇನ್‌ಕ್ರೀಸ್ ಮಾಡಿದ್ದೇವೆ. ಕೊನೇಪಕ್ಷ ಸುಮಾರು ೪೫ ಕೋಟಿ ರೂಪಾಯಿ ನಷ್ಟ ಟರ್ನ್ ಒವರ್ ಮಾಡುವ ಸ್ಥಿತಿಯಲ್ಲಿದ್ದಾರೆ ಇನ್ನು ಇದರಲ್ಲಿ ಕಾನ್‌ಸ್ಪಿರಸಿ ಇದೆ ಎಂದು ಹೇಳಿದ್ದಾರೆ. ಯಾರೋ ಒಬ್ಬರು ಡೈರಕ್ಟರ್ ೪ ಲಕ್ಷ ರೂಪಾಯಿ ಟಿ. ಎ. ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಈಗ ಆ ಡಿಟೇಲ್ ಸಿಕ್ಕುತ್ತಾ ಇಲ್ಲ. ನಾನು ಅದರ ಬಗ್ಗೆ ತನಿಖೆ ಮಾಡಿಸುತ್ತಿದ್ದೇನೆ ಇನ್ನು ಗಾಡ್ರೇಜ್ ಕಂಪನಿಯವರು ಕಾನ್‌ಸ್ಪಿರಸಿ ಮಾಡುತ್ತಿದ್ದಾರೆ ಎಂದು ಹೇಳಿದರು. ಅವರು ಮಾಡುತ್ತಾ ಇಲ್ಲ. ಯಾರೂ ಮಾಡುತ್ತಾ ಇಲ್ಲ ಮಾಡುವುದಕ್ಕೆ ಬಿಡುವುದೂ ಇಲ್ಲ. ಇನ್ನು ಇಂಡಸ್ಟ್ರೀಸ್ ಸ್ಕ್ಯಾನಿಂಗ್ ಬಗ್ಗೆ ಯಾವ ತರಹ ಮೆಷೀನ್ ಕೊಟ್ಟಿರಿ ಎಂದು ಕೇಳಿದ್ದಾರೆ. ಅವರೇನಾದರೂ ಬೇರೆ ಯಾವರೀತಿಯಲ್ಲಾದರೂ ತರಿಸಿದ್ದರೆ I will see that all these industries are scanned. ಇನ್ನು ಆಫೀಸರ್ಸ್ ಟ್ರಾನ್ಸ್‌ಫರ್ ಬಗ್ಗೆ ಹೇಳಿದರು. ಎಲ್ಲಿ ಅವಶ್ಯವಾಗಿ ಮಾಡಬೇಕೋ ಅಲ್ಲಿ ಮಾಡಬೇಕಾಗುತ್ತದೆ. ಇದಕ್ಕೆ ನಾನು ಇಂಡಸ್ಟ್ರಿಯಲ್ಸ್ ಮ್ಯಾನೇಜ್‌ಮೆಂಟ್ ಕೇಡರ್ ನಲ್ಲಿ ಇದನ್ನು ಸೇರಿಸಬೇಕು ಎಂದು ಯೋಚನೆ ಮಾಡಿದ್ದೇನೆ. ಇನ್ನು ಲಿಕ್ಕರ್ ವಿಚಾರದಲ್ಲಿ ಒಂದು ಪ್ರಶ್ನೆ ಕೇಳಿದ್ದಾರೆ. ಅದು ಸಿ.ಒ.ಡಿ. ಎನ್‌ಕ್ವೈರಿ ಆಗುತ್ತಾ ಇದೆ. ಇನ್ನು ಸಾಲೂರು ಸಿದ್ದಪ್ಪನವರು ಪವರ್ ಕಟ್, ವಿಐಎಸ್‌ಎಲ್. ಎಂಪಿಎಂ ವಿಚಾರದಲ್ಲಿ ಹೇಳಿದರು. ನಿಜ. ಈ ಪವರ್‌ಕಟ್ ಪೊಸಿಷನ್ ಬಗ್ಗೆ ವಾದ ಮಾಡಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಇಂಪ್ರೂವ್ ಆದಾಗ ಮಾಡಬಹುದು. ಇನ್ನು ಕೈಗಾರಿಕೆ ವಿಚಾರವಾಗಿ ಭೂಪತಿಯವರು ಗೌರ್ನಮೆಂಟ್ ಆಫ್ ಇಂಡಿಯಾ ಇಂಪೋರ್ಟ್ ಪಾಲಿಸಿ ಬಗ್ಗೆ ಏನು ಹೇಳಿದ್ದಾರೆ ಅದಕ್ಕೆ ನಾವು ಒಪ್ಪಿದ್ದೇವೆ. ಸ್ಮಾಲ್ ಈಸ್ ಬ್ಯೂಟಿಫುಲ್ ಅಂದಹಾಗೆ ಈವೊತ್ತು ಚಿಕ್ಕದನ್ನು ಚೊಕ್ಕದನ್ನಾಗಿ ಮಾಡುವುದನ್ನು ಬಿಟ್ಟು ಮನಸ್ಸಿಗೆ ಬಂದ ಹಾಗೆ ಮಾಡಿದರೆ ವಿನಾಶದತ್ತ ಹೋಗಬೇಕಾಗುತ್ತದೆ. ಇನ್ನು ಮಲ್ಟಿನ್ಯಾಷನಲ್ ಬಗ್ಗೆ ಹೇಳಿದ್ದಾರೆ. ಪಿ.ಯು.ಸಿ ಕಮಿಟಿ ರಿಪೋರ್ಟ್‌ನ್ನು ಏತಕ್ಕೆ ಇಂಪ್ಲಿಮೆಂಟ್ ಮಾಡಲಿಲ್ಲ ಎಂದು ಹೇಳಿದ್ದಾರೆ. ಈಗ ಕಾಲ ಬಂದಿದೆ. It is being examined ಮಾನ್ಯ ಪುಟ್ಟಸ್ವಾಮಿಯವರು ೧೦೦೦ ಯೂನಿಟ್ಸ್

ಏತಕ್ಕೆ ಮಾಡಲಿಲ್ಲ ಎಂದು ಹೇಳಿದರು. ಈಗ ತಿಂಗಳಿಗೆ 200 - 230 ರವರೆಗೆ ಆಗಿದೆ. ಶ್ರೀಮತಿ ಮುಕ್ತರುನ್ನೀಸಾ ಬೇಗಂ ಅವರು ಮಹಿಳೆಯರ ಟ್ರೈನಿಂಗ್ ಬಗ್ಗೆ ಹೇಳಿದ್ದಾರೆ, ಈಗ ಅಪ್ರೆಂಟಿಸೀಸ್ ಆಗಿ ತೆಗೆದುಕೊಳ್ಳುವ ಹಾಗೆ ಮಾಡುತ್ತಿದ್ದೇವೆ.

ಶ್ರೀಮತಿ ಮುಕ್ತರುನ್ನೀಸಾ ಬೇಗಂ.—ಸ್ಯಾಂಡಲ್‌ವುಡ್ ಫ್ಯಾಕ್ಟರಿ ಬಗ್ಗೆ ಹೇಳಲಿಲ್ಲ. ಇದು ಯಾವಾಗ ಕಾರ್ಯರೂಪಕ್ಕೆ ಬರುತ್ತದೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಶ್ರೀಮತಿ ಬೇಗಂ ರವರು ಕೇಳಿರುವ ಪ್ರಶ್ನೆಗೆ ಈ ಹೆಣ್ಣು ಮಕ್ಕಳಿಗೆ ಟ್ರೈನಿಂಗ್ ಮಾಡುವ ಬಗ್ಗೆ ಯಾವಾಗ ತರಬೇತಿ ಕೊಡುತ್ತೀರಿ ಎನ್ನುವುದು ಹೇಳಿ 6 ತಿಂಗಳು ಎಂದು ಹೇಳಬೇಡಿರಿ, ಯಾವಾಗ ಶುರು ಮಾಡುತ್ತೀರಾ ಎಂಬುದನ್ನು ಹೇಳಿ.

ಅಧ್ಯಕ್ಷರು.—ರಿಪ್ಲೈ ಮುಗಿದ ಮೇಲೆ ಕ್ಲಾರಿಫಿಕೇಷನ್ ಕೇಳಿ. ಹೀಗಾದರೆ ಅವರ ಉತ್ತರ ಬೇಗನೆ ಮುಗಿಯುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ನಾನು ನಿಮ್ಮ ಕಡೆ ನೋಡಲಿಲ್ಲ. ಮಾನ್ಯ ಸದಸ್ಯರು ನನ್ನ ಉತ್ತರ ಮುಗಿದ ನಂತರ ಕ್ಲಾರಿಫಿಕೇಷನ್ ಕೇಳಿದರೆ ಉತ್ತರಕೊಡುತ್ತೇನೆ. ಶ್ರೀಮಾನ್ ಬಿ ಎಸ್. ಯಡಿಯೂರಪ್ಪನವರು ಕೇಳಿದ ಪ್ರಶ್ನೆಗೆ ಈಗಾಗಲೇ ನನ್ನ ಸಹೋದ್ಯೋಗಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀಮತಿ ಮುಕ್ತರುನ್ನೀಸಾ ಬೇಗಂ.—ಸ್ಯಾಂಡಲ್‌ವುಡ್ ಫ್ಯಾಕ್ಟರಿ ಬಗ್ಗೆ ಹೇಳಲಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಜಿ. ನಾರಾಯಣಕುಮಾರ್‌ರವರು ಎತ್ತಿರುವ ಪ್ರಶ್ನೆ ಬಹಳ ಗಂಭೀರವಾದುದು. ಕರ್ನಾಟಕದಲ್ಲಿ ಕನ್ನಡಿಗರಿಗೆ ಸ್ಥಾನಕೊಡಬೇಕೆನ್ನುವುದನ್ನು ನಾನು ಒಪ್ಪುತ್ತೇನೆ. ನಾನು ಆ ಬಗ್ಗೆ ಹೆಚ್ಚು ವಿವರಗಳಿಗೆ ಹೋಗುವುದಿಲ್ಲ. ಮಾನ್ಯ ಸದಸ್ಯರು ಪ್ರಕಟಪಡಿಸಿರ ತಕ್ಕಂಥಾ ಭಾವನೆಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಈಗಾಗಲೇ ನಾನು ಇದರ ಬಗ್ಗೆ ಶ್ರೀಮತಿ ಸರೋಜಿನಿ ಮಹಿಷಿ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಏನು ಮಾಡಿದ್ದೇವೆ ಅವರು ತಮ್ಮ ರಿಪೋರ್ಟ್‌ನಲ್ಲಿ ಏನು ಹೇಳಿದ್ದಾರೆ ಯಾವ ಯಾವ ಉದ್ಯಮದಲ್ಲಿ ಕನ್ನಡಿಗರಿಗೆ ಯಾವ್ಯಾವ ಉದ್ಯೋಗ ವನ್ನು ಕೊಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ ಅದು ನಮ್ಮ ಗಮನಕ್ಕೆ ಬಂದಿವೆ. ಈವೊತ್ತು ಕರ್ನಾಟಕದಲ್ಲಿರತಕ್ಕ ಉದ್ಯಮಗಳು ಏನು ಇವೆ. ಅದು ಖಾಸಗೀ ವಲಯದಲ್ಲೇ ಇರಲಿ, ಸರ್ಕಾರಿ ವಲಯದಲ್ಲೇ ಇರಲಿ. ಸಹಕಾರೀ ರಂಗದಲ್ಲೇ ಇರಲಿ ಕನ್ನಡಿಗರಿಗೆ ಹೆಚ್ಚಿನ ಆದ್ಯತೆ ಕೊಡುವುದ ಕ್ಕೋಸ್ಕರ ಈ ಒಂದು ಆಲೋಚನೆಯನ್ನು ಮಾಡಿದ್ದೇವೆ. ಆಯಾಯ ಡಿವಿಷನ್‌ಗೇ ಸೇರಿದ ಹಾಗೆ. Divisional Commissioner should review the employment in different industries in his division. ಎಲ್ಲಿ ಯಾವ ಉದ್ಯಮ ಸ್ಥಾಪನೆಯಾಗುತ್ತದೋ ಅಲ್ಲಿ ಹೆಚ್ಚು ಕನ್ನಡಿಗರಿಗೆ ಉದ್ಯೋಗ ಸಿಕ್ಕುವ ಹಾಗೆ ಡಿವಿಷನಲ್ ಕಮೀಷನರಿಗೆ ಈ ಬಗ್ಗೆ ಒಂದು ಅಧಿಕಾರ ಕೊಟ್ಟು ಅವರ ರೆಕಮೆಂಡೇಷನ್ ಪ್ರಕಾರ ಹೆಚ್ಚಿನ ಕೆಲಸ ಮಾಡಬೇಕೆಂದು ಮಾಡಿದ್ದೇವೆ. ಇನ್ನು ಶ್ರೀ ಟಿ. ವಿ. ತಿಂಗಳಗವರು ಕಿಯೋಕ್ಕೋ ಕಂಪನಿಯನ್ನು ಕೆಎಸ್‌ಆರ್‌ಟಿಸಿಗೆ ಮರ್ಜ್ ಮಾಡಬೇಕೆಂದು ಹೇಳಿದ್ದಾರೆ. ಇದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿದ್ದೇನೆ. ಇನ್ನು ಸೋಪ್ಸ್ ಅಂಡ್ ಡಿಟರ್ಜೆಂಟ್ ಬಗ್ಗೆ ಕೇಳಿದ್ದಾರೆ. ಅಲ್ಲಿಗೆ ಒಬ್ಬರನ್ನು ಹೊಸದಾಗಿ ಛೇರ್ಮನ್ ಮಾಡಿದ್ದೇವೆ. ಶ್ರೀ ಎಸ್. ಎಂ. ಪಟೇಲರು ಅಲ್ಲಿ ಛೇರ್ಮನ್ ಆಗಿದ್ದಾರೆ. ಅವರು ಬಹಳ ಯೋಗ್ಯರು, ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ. ಇದನ್ನೆಲ್ಲಾ ಅವರು ವಿಚಾರ ಮಾಡುತ್ತಾರೆ. ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐನ್‌ಪ್ಲಾಂಟ್‌ನ ಪವರ್ ಕಟ್ ಬಗ್ಗೆ ಹೇಳಿದ್ದಾರೆ. ಆದರೆ ಇದು ಅನಿವಾರ್ಯ. ಪವರ್ ಪೊಸಿಷನ್ ಇಂಪ್ರೂವ್ ಆಗುವ ವರೆಗೆ ನಾನು ಅವರಿಗೆ ಭರವಸೆ ಕೊಡುವುದಿಲ್ಲ. ಇನ್ನು ಎಂಸಿಐಎಫ್ ನವರು ಅಲ್ಯೂಮಿನಿಯಂ ಅನ್ನು ಬೇರೆಡೆಯಿಂದ ಇಂಪೋರ್ಟ್ ಮಾಡುತ್ತಿದ್ದಾರೆ ಎಂದು ಹೇಳಿದರು. ಇಲ್ಲಿ ಅಲ್ಯೂಮಿನಿಯಂ ಪ್ಲಾಂಟ್ ಹಾಕುವುದಕ್ಕೆ ಹೊರಗಡೆಯಿಂದ ಇಂಪೋರ್ಟ್ ಮಾಡಿಕೊಂಡರೇನೇ ಸ್ವಲ್ಪ ಕಡಿಮೆ ಕಾಸ್ಟ್‌ನಲ್ಲಿ ವರ್ಕ್ ಔಟ್ ಮಾಡುವುದಕ್ಕೆ ಸಾಧ್ಯ. ಅದರಿಂದ ಇಂಪೋರ್ಟ್ ಮಾಡಿಕೊಳ್ಳುತ್ತಿದ್ದಾರೆ. ಸಾಮಾನ್ಯವಾಗಿ ಸಾಧ್ಯವಾದಷ್ಟು ಮಟ್ಟಿಗೆ ಎಲ್ಲದಕ್ಕೂ ಉತ್ತರ ಕೊಟ್ಟಿದ್ದೇನೆ. ಯಾವುದಕ್ಕಾದರೂ ಉತ್ತರ ಕೊಡದೇ ಹೋಗಿದ್ದರೆ ಮಾನ್ಯ ಸದಸ್ಯರ ಭಾವನೆಯನ್ನು ಅರ್ಥ ಮಾಡಿಕೊಂಡು ಸಮಯ ಬಂದಾಗ ಆ ವಿಷಯ ಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆಂದು ಹೇಳಿ, ಮಾನ್ಯ ಸದಸ್ಯರುಗಳು ಈ ಬೇಡಿಕೆಗಳಿಗೆ ಅನುಮತಿ ಯನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಎರಡು ವಿಷಯಗಳನ್ನು ಕೇಳುತ್ತೇನೆ. ಈ ಪವರ್ ಕಟ್ ಹೆಚ್ಚಾಗಿರುವುದರಿಂದ ಅನೇಕ ಕಡೆಗಳಲ್ಲಿ ಉತ್ಪಾದನಾ ಸಾಮರ್ಥ್ಯ ಕುಂಠಿತವಾಗಿದೆ. ಈ ಪವರ್ ಪ್ರಾಜೆಕ್ಟ್ಸ್‌ಗೆ ಕೇಂದ್ರ ಸರ್ಕಾರದವರು ಏನು ಹಣವನ್ನು ತೊಡಗಿಸಿದ್ದಾರೆ ಯಾವ್ಯಾವ ರಾಜ್ಯಕ್ಕೆ ಎಷ್ಟೆಷ್ಟು ಕೊಟ್ಟಿದ್ದಾರೆ, ಆ ಹಣವನ್ನು ಸರಿಯಾದ ರೀತಿಯಲ್ಲಿ ರಾಜ್ಯ ಸರ್ಕಾರದವರು ತೊಡಗಿಸಿ ಕೆಲಸ ಮಾಡಿದರೆ ಇಷ್ಟೊಂದು ವಿದ್ಯುತ್ ಕೊರತೆ ಬರುತ್ತಿರಲಿಲ್ಲ. ನಾನು ಬಡ್ಜೆಟ್ ಮೇಲೆ ಭಾಷಣ ಮಾಡಿದಾಗಲೂ ಹೇಳಿದ್ದೇನೆ. ಪವರ್ ಜನರೇಷನ್‌ಗೋಸ್ಕರ ಚಕ್ರಾಪ್ರಾಜೆಕ್ಟ್‌ಗೆ ಒಟ್ಟು ಹಣ ೬೦ ಕೋಟಿ ರೂಪಾಯಿಗಳು ಆಗಿತ್ತು. ಅದಕ್ಕೆ ಕೇಂದ್ರ ಸರ್ಕಾರದವರು ಸಹಾಯ ಮಾಡಿದರೂ ಕೂಡ ಆ ಕೆಲಸವನ್ನು ಮುಗಿಸಿಲ್ಲ, ಮತ್ತು ಕುದುರೆಮುಖ ಐರನ್ ಓರ್ ಕೆಲಸವನ್ನೂ ಸಹಿತ ಇಷ್ಟು ಹೊತ್ತಿಗೆ ಮುಗಿಸಬೇಕಾಗಿತ್ತು, ಎಂದು ಅವರು ಹೇಳಿದ್ದರೂ ಕೂಡ ಯಾವ ಒಂದು ಕಾರ್ಯಕ್ರಮವನ್ನೂ ಸಹ ಮುಗಿಸುವುದಕ್ಕೆ ಆಗಲಿಲ್ಲ. ಈ ೬೦ ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಏನು ಇದೆ ಆ ಕೆಲಸವನ್ನೂ ಇನ್ನೂ ಮುಗಿಸಿಲ್ಲ. ಪವರ್ ಜನರೇಷನ್ ಬಗ್ಗೆ ಬಹಳ ಹೇಳಿದ್ದೀರಿ. ಆದರೂ ಯಾವ ಕೆಲಸವೂ ಆಗಲಿಲ್ಲ. ತಮಗೆ ಹೇಳಬೇಕಾದರೆ ಬೆಳಗಾಂ ಜಿಲ್ಲೆಯಲ್ಲಿ ಪವರ್ ಇನ್‌ಸ್ಟಾಲೇಷನ್ ಬಗ್ಗೆ ಒತ್ತಾಯ ಇದೆ. ಹಾಗೆಯೆ ಕಾರವಾರ ತಾಲ್ಲೂಕಿನ ಅಂಕೋಲ, ಕುಮಟಾ ಮತ್ತು ಬೆಟ್ಕಲ್ ತಾಲ್ಲೂಕುಗಳಲ್ಲೂ ಕೂಡ ಬಹಳ ಬೇಡಿಕೆ ಇದೆ. ಈ ಬಗ್ಗೆ ಸರ್ಕಾರದಿಂದ ಮಂಜೂರಾಗಿದೆ ತಮಗೆ ಹೇಳಬೇಕಾದರೆ ಈ ಪವರ್ ಜನರೇಷನ್ ವಿಚಾರದಲ್ಲಿ ಹಲವಾರು ವಿವರಗಳನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸಿಲ್ಲ. ಈ ಬಗ್ಗೆ ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿ ಏನು ಇದೆ ಅವರೂ ಸಹ ತಮಗೆ ಕಾಗದ ಬರೆದಿದ್ದಾರೆ, ಅಲ್ಲಿಗೆ ತಾವು ಎಲ್ಲಾ ವಿವರಗಳನ್ನೂ ಕಳುಹಿಸಿದ್ದೀರಾ ? ಉದಾಹರಣೆಗೆ, ಯಾವುದಾದರೂ ಒಂದು ಏರಿಯಾದಲ್ಲಿ ಪ್ರಾಜೆಕ್ಟ್ ಮಾಡಬೇಕಾದರೆ ಅಲ್ಲಿರುವ ಅರಣ್ಯ ಮುಳುಗಡೆಯಾಗುತ್ತದೆ. ಇದರ ಬಗ್ಗೆ ಅವರು ಕೇಳಿದ್ದಾರೆ. ಅದಕ್ಕೆ ತಮ್ಮಿಂದ ವರದಿ ಹೋಗಿಲ್ಲ. ಅವರು ಏನು ವಿವರಗಳನ್ನು ಕೇಳಿದ್ದಾರೆ ಅದನ್ನು ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯವರಿಗೆ ಕಳುಹಿಸುವ ವ್ಯವಸ್ಥೆ ಮಾಡಿದರೆ ನಿಮಗೆ ಅದನ್ನು ಕ್ಲಿಯರ್ ಮಾಡುವುದಕ್ಕೆ ದಾರಿಯಾಗುತ್ತದೆ. ಇಲ್ಲದೇ ಹೋದರೆ ದಾರಿಯಾಗುವುದಿಲ್ಲ ಅನ್ನುವ ಮಾತನ್ನು ಹೇಳುತ್ತೇನೆ. ಮತ್ತೊಂದು ವಿಚಾರ ಏನೆಂದರೆ ಈಗ ಫ್ಯಾಕ್ಟರಿ ಏನು ಇದೆ ಇದು ಲೇಬರ್ ಡಿಪಾರ್ಟ್‌ಮೆಂಟ್ ಮತ್ತು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಎರಡಕ್ಕೂ ಸೇರಿರುತ್ತದೆ. ಈ ಫ್ಯಾಕ್ಟರಿ ಸಂಬಂಧಪಟ್ಟ ಹಾಗೆ ಕಾರ್ಮಿಕರೂ ಇರುತ್ತಾರೆ, ಮ್ಯಾನೇಜ್‌ಮೆಂಟಿನವರೂ ಇರುತ್ತಾರೆ, ಮತ್ತು ಓನರ್ಸ್ ಸಹ ಇರುತ್ತಾರೆ. ಅವರು ಮನಸ್ಸು ಬಂದ ಹಾಗೆ ಮಾಡುವುದಕ್ಕಾಗುವುದಿಲ್ಲ. ಓನರ್ಸ್ ಲೇಬರ್ ಡಿಪಾರ್ಟ್‌ಮೆಂಟ್‌ನವರೊಂದಿಗೂ ಕನ್‌ಸಲ್ಟ್ ತೆಗೆದುಕೊಳ್ಳಬೇಕು, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರೊಂದಿಗೂ ಸಹ ಕನ್‌ಸಲ್ಟ್ ಮಾಡಬೇಕು. ಅವರು ಏನು ಹೇಳುತ್ತಾರೆ ಅದರಂತೆ ಅವರು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕು ಯಾವ ವಿಚಾರದಲ್ಲೇ ಆಗಲಿ ಲೇಬರ್ ವಿಂಗ್ ಮತ್ತು ಇಂಡಸ್ಟ್ರಿಯಲ್ ವಿಂಗ್ ಇಬ್ಬರನ್ನೂ ಕನ್‌ಸಲ್ಟ್ ಮಾಡಿಕೊಂಡು ಹೋಗುವಂಥ ವಿಚಾರ. ಇವರ ಮೇಲೆ ಅವರ ಕಂಟ್ರೋಲ್ ಇಲ್ಲದೇ ಹೋದರೆ ಸಾವಿರಾರು ಜನರಿಗೆ, ಲಕ್ಷಾಂತರ ಜನರಿಗೆ ಪೆಟ್ಟು ಬೀಳುತ್ತದೆ. ಇದರ ಬಗ್ಗೆ ನಿಮ್ಮ ಕಾನೂನು ಬದಲಾವಣೆಯಾಗಬೇಕು. ಇದರ ಬಗ್ಗೆ ತಾವು ಗಮನ ಇಟ್ಟರೆ ಒಳ್ಳೆಯದು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರ ಸಲಹೆ ಒಳ್ಳೆಯದು. ಇನ್ನು ಮಾನ್ಯ ವೀರಪ್ಪ ಮೊಯ್ಲಿ ಅವರು ಅನೇಕ ಮೂಲಭೂತವಾದ ಪ್ರಶ್ನೆಗಳ ಬಗ್ಗೆ ವಿವರಗಳನ್ನು ಕೇಳಿದ್ದಾರೆ. ಸಿದ್ಧಾಂತ ಏನು ಇದೆಯೋ ಅದನ್ನು ವೈಟ್ ವಾಷ್ ಹಾಗೆ ಒಂದು ತರಹ ತಂದಿದ್ದಾರೆ. ಇದಕ್ಕೆ ಯಾವ ಕ್ಲಾರಿಫಿಕೇಷನ್ ಕೊಡುವುದು ಎನ್ನುವುದು ಗೊತ್ತಾಗುತ್ತಾ ಇಲ್ಲ. ಸಿದ್ಧಾಂತದ ಒಂದು ವೈಟ್‌ವಾಷ್‌ನಲ್ಲಿ ಒಂದು ಸಂದೇಹವನ್ನು ಅವರು ವ್ಯಕ್ತಪಡಿಸಿದ್ದಾರೆ. ಕೈಗಾರಿಕೆ ಬಗ್ಗೆ ಹೇಳುವುದಾದರೆ ಹೊಸ ಕೈಗಾರಿಕೆಗಳ ರಿಜಿಸ್ಟ್ರೇಷನ್ ೭೫೦-೮೦೦ ಆಗಿದೆ ಎಂದು ಹೇಳುತ್ತಾರೆ. ಅವರು ಯಾವ ಲೆಕ್ಕಾಚಾರ ನೋಡಿದರೋ ಗೊತ್ತಿಲ್ಲ. ತಮಗೆ ಹೇಳಬೇಕಾದರೆ ಒಟ್ಟು ೧೧,೬೦೭ ರಿಜಿಸ್ಟ್ರೇಷನ್ ಆಗಿದೆ. ಅಲ್ಲಿಗೆ ತಿಂಗಳಿಗೆ ಎಷ್ಟಾಗಿರಬಹುದು ಅನ್ನುವುದನ್ನು ತಾವೇ ಲೆಕ್ಕಹಾಕಿ ನೋಡಿ. ಹೆಚ್ಚು ಕಡಿಮೆ ಒಂದು ಸಾವಿರ ಆಗುತ್ತದೆ. ಅಷ್ಟು ಲೈಸನ್ಸ್‌ನ್ನು ಕೊಟ್ಟಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ನೀವು ೧೧೬೦೭ ಆಗಿದೆ ಎಂದು ಹೇಳುತ್ತೀರಿ. ನಾವು ಇದ್ದಾಗಲೇ ೧೯೮೩-೮೪ರಲ್ಲೇ ೭೫೭೮ ಆಗಿದೆ. ಅದಕ್ಕಿಂತ ಹೆಚ್ಚು ಆಗಬೇಕಾಗಿತ್ತು, ಅಷ್ಟು ಹೆಚ್ಚಿಗೆ

ಆದಹಾಗೆ ಕಾಣಲಿಲ್ಲ, ಎರಡನೆಯದಾಗಿ ಬೀದರ್ ಜಿಲ್ಲೆ ಹಿಂದುಳಿದ ಜಿಲ್ಲೆ. ಆದರ ಬಗ್ಗೆ ತಾವು ವಿವರಗಳನ್ನು ಕೊಟ್ಟಿಲ್ಲ. ಅಲ್ಲಿ ಎಷ್ಟು ಜನರಿಗೆ ಪ್ರಾರಂಭದಿಂದ ಇಂಡಸ್ಟ್ರೀಸ್ ಪ್ರಾರಂಭ ಮಾಡುವುದಕ್ಕೆ ಲೈಸನ್ಸ್ ಕೊಟ್ಟಿದ್ದೀರಾ ಈಗ ಲೈಸನ್ಸ್ ಕೊಟ್ಟಿದ್ದೀರಲ್ಲಾ ಅದರಲ್ಲಿ ಎಷ್ಟು ಜನ ಟ್ರಾನ್ಸ್‌ಫರ್ ಕೇಳಿದ್ದಾರೆ. ಇದರಲ್ಲಿಬೇರೆ ಜನಕ್ಕೆ ಎಷ್ಟುಜನರಿಗೆ ಟ್ರಾನ್ಸ್‌ಫರ್ ಆಗಿದೆ,ಆದರ ವಿವರಗಳನ್ನು ಹೇಳುತ್ತೀರಾ? ಪ್ರಾರಂಭ ದಿಂದಲೂ ಬೀದರ ಜಿಲ್ಲೆಗೆ ಎಷ್ಟು ಲೈಸೆನ್ಸ್‌ಗಳನ್ನು ಕೊಟ್ಟಿದ್ದೀರಿ, ಅದರಲ್ಲಿ ಎಷ್ಟು ಜನ ಟ್ರಾನ್ಸ್‌ಫರ್ ಮೇಲೆ ಬೇರೆ ಜಿಲ್ಲೆಗಳಿಗಳಿಗೆ ಹೋಗಲು ಕೋರಿದ್ದಾರೆ ಎಂಬುದನ್ನು ತಿಳಿಸಬೇಕು. ಇನ್‌ಫ್ರಾಸ್ಟ್ರಕ್ಚರ್ ವ್ಯವಸ್ಥೆ ಏನಾದರೂ ಮಾಡಿದ್ದೀರಾ ವಿದ್ಯುತ್, ನೀರು ಕೊಡುವ ವ್ಯವಸ್ಥೆ ಮಾಡಿದ್ದೀರಾ ಎಂಬುದನು ತಿಳಿಸಬೇಕು. ನೋ ಇಂಡಸ್ಟ್ರಿ ಡಿಸ್ಟ್ರಿಕ್ಟ್‌ನಲ್ಲಿ ಇದು ಬಹಳ ಪ್ರಾಮುಖ್ಯವಾದುದು, ಇನ್ನು ಪಬ್ಲಿಕ್ ಸೆಕ್ಟರ್ ಬಗ್ಗೆ ಮಾನ್ಯ ಮಂತ್ರಿಗಳು ಈಗ ಸ್ಪಷ್ಟವಾಗಿ ಹೇಳಿದ್ದಾರೆ. ಪಬ್ಲಿಕ್ ಸೆಕ್ಟರ್‌ಗಳು now they are for sale ಎಂದು ಏನು ಕ್ವೆಶ್ಚನ್ ಮಾರ್ಕ್ ಇತ್ತು, ಈಗ ಅದನ್ನು ಕನ್‌ಫರ್ಮ್ ಮಾಡಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಇಷ್ಟು ಹೊತ್ತೂ ಹೇಳಿದ್ದು ವ್ಯರ್ಥವಾಯಿತು. ನಾನು ಕನ್ನಡದಲ್ಲೇ ಹೇಳಿದ್ದು. ಹಾಗೇನೂ ಹೇಳಲಿಲ್ಲವಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಯಾವುದು ನಷ್ಟದಲ್ಲಿದೆಯೋ ಅದನ್ನು ಸರ್ಕಾರ ಮುಂದೆ ರನ್ ಮಾಡುವುದಿಲ್ಲ ಎಂದು ನೀವು ಹೇಳಿರುವುದು ರೆಕಾರ್ಡ್ಸ್‌ನಲ್ಲಿ ಬಂದಿದೆ. ಪಬ್ಲಿಕ್ ಸೆಕ್ಟರ್ ಬಗ್ಗೆ ನಿಮ್ಮಿಂದ ಏನು ನಿರೀಕ್ಷಿಸಿದ್ದೆವೋ ಅದೇ ಉತ್ತರವನ್ನು ನೀವು ಕೊಟ್ಟು ನಮ್ಮನ್ನು ನಿರಾಶೆಗೊಳಿಸಿದಿರಿ. You want to serve not as an industrial bearer but as a Pall bearer.

ಶ್ರೀ ಜೆ. ಹೆಚ್. ಪಟೇಲ್,—ಹೆಣ ಹೊರುವುದು ಎಂದು ನಾನು ಹೇಳಲ್ಲಿಲ್ಲ. ಯಾವುದೋ ಕಾಲದಲ್ಲಿ ಹೆಣವಾಗಿದ್ದರೆ ಅದನ್ನು ಉಳಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಇನ್ನೂ ಸಾಯುವ ಹಾಗಿದ್ದರೆ ಅದನ್ನು ಉಳಿಸಲು ನೋಡುತ್ತೇನೆ. ಈಗಾಗಲೇ ಸತ್ತುಹೋಗಿದ್ದರೆ ಹೊರ ಹಾಕುತ್ತೇನೆ.

ಶ್ರೀ ಎಸ್. ಬಂಗಾರಪ್ಪ. ವಿಐಎಸ್ಎಲ್ ಸಾಯುವ ಪರಿಸ್ಥಿತಿಯಲ್ಲಿದೆಯೋ ?

SRI J. H. Patel.—VISL is not sick even. I don't consider it.

SRI S. BANGARAPPA.—Why are you selling it away to SAIL ? If you agree that it is not a sick industry, then why you are selling it away to SAIL is our question.

ಶ್ರೀ ಜೆ. ಹೆಚ್. ಪಟೇಲ್.—ನಾನು ಹಾಗೆಂದು ಹೇಳಲಿಲ್ಲ.

ಶ್ರೀ ಎಸ್. ಬಂಗಾರಪ್ಪ,—ಒಂದು ಬ್ಯಾಡ್ ಮ್ಯಾನೇಜ್‌ಮೆಂಟಿನಿಂದ ಹಾಳಾಗಿರತಕ್ಕದ್ದು. ಆದ್ದರಿಂದ ಇದನ್ನು ಮಾರಾಟ ಮಾಡಿಬಿಡುವುದು ಎಂದು ಹೇಳುವುದು ಸರಿಯಲ್ಲ.

SRI J. H. PATEL.—They are trying to put those things which I have not said. SAIL is a partner. He is also an owner. SAIL 40% of shares.

ಶ್ರೀ ಎಸ್. ಬಂಗಾರಪ್ಪ.—ಅವರದ್ದು ೪೦ ಪರ್ಸೆಂಟ್ ನಮ್ಮದು ೬೦ ಪರ್ಸೆಂಟ್ ಇದೆ You are going to sell away 60 o/o of your shares to SAIL. Is it not a sale ?

ಶ್ರೀ ಎಸ್. ಕೆ. ಕಾಂತಾ.—ಗುಲ್ಬರ್ಗದಲ್ಲಿ ಎಂಎಸ್‌ಕೆ ಮಿಲ್ಸ್ ಎನ್‌ಟಿಸಿ ಯವರಿಗೆ ಸೇಲ್ ಆದ ಹಾಗೆ ಆಗಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆ ವಿಷಯ ಬೇರೆ, ಇಲ್ಲಿಯ ವಿಷಯವೇ ಬೇರೆ. ನೀವು ಸೇಲ್‌ನವರಿಗೆ ಪತ್ರ ಬರೆದಿದ್ದೀರಿ. ಅದರ ಪ್ರತಿ ನನ್ನ ಹತ್ತಿರ ಇದೆ.

ಶ್ರೀ ಜೆ. ಹೆಚ್. ಪಟೇಲ್.—ನಾನು ಪುನಃ ಹೇಳುತ್ತಿದ್ದೇನೆ ಅವರದ್ದು ೪೦ ಭಾಗ, ನಮ್ಮದು ೬೦ ಭಾಗ. ಅವರಿಗೆ ಮ್ಯಾನೇಜ್‌ಮೆಂಟ್ ಹೋಗಬೇಕಾದರೆ ಅವರದ್ದು ೫೧, ನಮ್ಮದು ೪೯ ಆಗಬೇಕು. ಆದ್ದರಿಂದ ಎಲ್ಲ ಷೇರುಗಳನ್ನು ಮಾರಾಟ ಮಾಡುತ್ತೇವೆ ಎಂದು ಯಾರೂ ತಿಳಿದುಕೊಳ್ಳಕೂಡದು.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಪತ್ರವನ್ನು ಸದನದ ಮುಂದೆ ಇಡಿ. I have got a copy of your letter written to SAIL. ನೀವು ಕ್ಲೀನಾಗಿ ಬರೆದಿದ್ದೀರಿ. ಮಾರಾಟ ಮಾಡಬೇಕೆಂಬ ಉದ್ದೇಶದಿಂದಲೇ ಈ ರೀತಿ ಬರೆದಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್.—ಸೇಲ್ ಮತ್ತು ಕರ್ನಾಟಕ ಸರ್ಕಾರ ಎರಡೂ ಇದರ ಮಾಲೀಕರು. ವಿಐಎಸ್‌ಎಲ್ ನ ಮಾಲೀಕತ್ವದಲ್ಲಿ ೪೦ ಪರ್ಸೆಂಟ್ ಅವರ ಹತ್ತಿರ, ಉಳಿದ ೬೦ ಪರ್ಸೆಂಟ್ ನಮ್ಮ ಹತ್ತಿರ ಇದೆ. ಮಾರಾಟ ಹೇಗೆ ಬಂತು ? ನಾವು ನಡೆಸುವುದಿಲ್ಲ, ನೀವು ನಡೆಸಿ ಎಂದು ಹೇಳಿದ್ದು.

SRI S. BANGARAPPA.—Is it not a transfer of shares ?

SRI. K. B. SHANAPPA.—You are surrendering 51 o/o of shares to them.

SRI S. BANGARAPPA.—Are you not transferring 60 o/o of your shares ? Transfer of these 60 o/o of shares to SAIL is not a sale in your opinion ?

ಶ್ರೀ ಜೆ. ಹೆಚ್. ಪಟೇಲ್.—ನಮ್ಮ ಷೇರ್ ಕ್ಯಾಪಿಟಲ್ ಇದೆ. ನಾವು ಅವರಿಗೆ ಮಾರಾಟ ಮಾಡದೇ ಇರಬಹುದು.

ಶ್ರೀ ಎಸ್. ಬಂಗಾರಪ್ಪ.—ನೀವು ಪತ್ರ ಬರೆದಿದ್ದೀರಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಅವರಿಗೆ ಎಷ್ಟು ಬೇಕು ಎಂದರೆ ೫೧ ಪರ್ಸೆಂಟ್ ಆದರೆ ಸಾಕು.

ಶ್ರೀ ಎಸ್. ಬಂಗಾರಪ್ಪ.—ರಾಜ್ಯದ್ದು ೬೦ ಪರ್ಸೆಂಟ್ ಇದೆ. ೧೧ ಪರ್ಸೆಂಟ್ ಅವರಿಗೆ ಬಿಟ್ಟರೆ ೫೧ ಆಗುತ್ತದೆ. ಇದು ೪೯ಕ್ಕೆ ಇಳಿಯುತ್ತದೆ. It is a different case altogether. The question is, while writing a letter to SAIL, ನೀವು ಏನು ಮಾಡಿದಿರಿ ಎಂದರೆ ೬೦ ಪರ್ಸೆಂಟ್ ಷೇರ್ಸ್...

ಶ್ರೀ ಜೆ. ಹೆಚ್. ಪಟೇಲ್.—ಈ ಬಗ್ಗೆ ಇನ್ನೂ ಮಾತುಕತೆಯಾಗಿಲ್ಲ. ಸುಮ್ಮನೆ ಮಾರುತ್ತಾರೆ ಎನ್ನುವುದು ವಿನಾ ಕಾರಣ ಭೂತವನ್ನು ಕಾಣುವ ಹಾಗೆ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನೀವು ಪತ್ರವನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಿ. ಇನ್ನೊಂದು ಸಾರಿ ಮಾತನಾಡೋಣ. ನನ್ನ ಹತ್ತಿರ ನಕಲುಗಳಿವೆ. ಈ ಸದನದಲ್ಲಿ ಓದಿ ಹೇಳಿದ್ದೇನೆ. ಈಗಲೂ ಕೂಡ, If you take back that letter, then it is altogether a different case. If you can make a statement on the Floor of the House right now saying that we are not going to sell away any kind of shares, or any amount of shares out of 60 o/o of the total shares held by the Governament in VISL, I have no objection But you have written a letter to SAIL saying that we are prepared to transfer our 60o/o of shares held by us in VISL to SAIL. This is nothing but an out and out sale. ನಿಮಗೆ ಅನುಮಾನ ಬೇಕಾಗಿಲ್ಲ. ಇನ್ನೊಂದು ಸಾರಿ ಬೇಕಾದರೆ ನೋಡಿ.

ಶ್ರೀ ಎಸ್. ಕೆ. ಕಾಂತ.—ಸರ್ಕಾರ ಅದಕ್ಕೆ ವಹಿಸಿಕೊಟ್ಟರೆ ಏನು ತಪ್ಪಿದೆ ಇದರಲ್ಲಿ ?

ಶ್ರೀ ಎಸ್. ಬಂಗಾರಪ್ಪ.—ಪತ್ರವನ್ನು ತಾವು ನೋಡಿಲ್ಲ. ತಮಗೆ ಗೊತ್ತಾಗುವುದಿಲ್ಲ. He did not reply. I have just given my mind basing my views on the letter written by you.

SRI J. H. PATEL.—The intention of asking SAIL to take over is to see that their share-holding is major, otherwise, how can they run ?

ಶ್ರೀ ಎಸ್. ಬಂಗಾರಪ್ಪ.—ಪುನಃ ಅವರು ಅದನ್ನೇ ಪ್ರತಿ ಪಾದನೆ ಮಾಡುತ್ತಾ ಇದ್ದಾರೆ. ನಾನು ಇದನ್ನು ಪ್ರತಿಪಾದನೆ ಮಾಡುತ್ತಾ ಇದ್ದೇನೆ. ನಮ್ಮ ರಾಜ್ಯ ಸರ್ಕಾರದ್ದು ೬೦ ಪರ್ಸೆಂಟ್ ಷೇರ್ ಕ್ಯಾಪಿಟಲ್ ವಿ. ಐ. ಎಸ್. ಎಲ್. ನಲ್ಲಿದೆ.

SRI J. H. PATEL.—share-holding has not been specified.

ಶ್ರೀ ಎಸ್. ಬಂಗಾರಪ್ಪ.—ನಮ್ಮ ರಾಜ್ಯ ಸರ್ಕಾರದ ೬೦ ಪರ್ಸೆಂಟ್ ಷೇರ್ ಅಲ್ಲಿದೆ. ನೀವು ಸೇಲ್‌ಗೋಸ್ಕರ ಗವರ್ನಮೆಂಟ್ ಆಫ್ ಇಂಡಿಯಾಗೆ ಪರ್ಮಿಷನ್‌ಗೆ ಬರೆದಿದ್ದೀರಿ. ಪವರ್ ಕಟ್ ಇದೆ ಒಂದು, ಎರಡನೆಯದು, ಸಂಬಳ ಜಾಸ್ತಿ ಮಾಡಿರುವುದು. These are the two grounds on which you have written a letter to the SAIL.

ಶ್ರೀ ಜೆ. ಹೆಚ್. ಪಟೇಲ್.—ನಾವು ಬರೆದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಬರೆದಿದ್ದೀರಿ. ನನ್ನ ಹತ್ತಿರ ನಕಲು ಇದೆ. They have written back saying that we are not prepared. ಎಂಪ್ಲಾಯೀಸ್‌ಗೆ ಸಂಬಳ ಜಾಸ್ತಿ ಮಾಡಿರುವುದು ಮತ್ತು ಪವರ್ ಕಟ್ ಇದೆ. ಅದಕ್ಕೋಸ್ಕರ...

ಅಧ್ಯಕ್ಷರು.—ಸ್ಟಾಫ್ ಸರ್ಪ್ಲಸ್ ಇದೆ.

ಶ್ರೀ ಎಸ್. ಬಂಗಾರಪ್ಪ.—ಸ್ಟಾಫ್ ಸರ್ಪ್ಲಸ್ ಅಲ್ಲ, ಸಂಬಳ ಜಾಸ್ತಿಯಾಗಿದೆ ಎಂದು. ಶ್ರೀಮಾನ್ ವೀರೇಂದ್ರಪಾಟೀಲ್ ರವರು ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಿದರು. ಟೆಂಡರ್ ಕರೆದು ಟೆಕ್ನಿಕಲ್ ನೋಹೌ ಮಾಡಿ ಮಂಜೂರು ಮಾಡಿಕೊಳ್ಳಿ ಎಂದು ಹೇಳಿದರು. ಷೇರ್ ಟ್ರಾನ್ಸ್‌ಫರ್ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಲ್ಲ. ತಾವು ೬೦ ಪರ್ಸೆಂಟ್ ಷೇರನ್ನು ಸಂಪೂರ್ಣವಾಗಿ ಟ್ರಾನ್ಸ್‌ಫರ್ ಮಾಡುವುದಕ್ಕೆ ಪತ್ರ ಬರೆದಿದ್ದೀರಿ. ಆ ಪತ್ರಗಳನ್ನು ಸಂಪೂರ್ಣವಾಗಿ ಸದನದ ಮುಂದೆ ಇಡಿ.

ಅಧ್ಯಕ್ಷರು.—ಇದರ ಬಗ್ಗೆ ಮತ್ತೊಂದು ದಿವಸ ಸ್ಟೇಟ್‌ಮೆಂಟ್ ಕೊಡಿ. ಈಗ ಮಾನ್ಯ ವೀರಪ್ಪ ಮೊಯಿಲಿಯವರು ಕೇಳಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕೈಗಾರಿಕೀಕರಣದಲ್ಲಿ ಕರ್ನಾಟಕ ಈಗ ಹಿಂದೆ ಹೋಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಆಮೇಲೆ ಪುನಃ ಹೇಳಿದರು. ಯು. ಪಿ ೨೦ ಸಾವಿರ ಕೋಟಿ ರೂಗಳನ್ನು ಖರ್ಚು ಮಾಡಿದೆ, ಇನ್‌ವೆಸ್ಟ್‌ಮೆಂಟ್ ಮಾಡಿದೆ. ನಾವು ಹಿಂದೆ ಹೋಗಿದ್ದೇವೆ ಎಂದು ಹೇಳಿದರು. ಅಂದರೆ ಅವರು ಹೆಚ್ಚು ಇನ್‌ವೆಸ್ಟ್ ಮಾಡಿದರು. ನಮ್ಮದು ಕಡಿಮೆಯಾಗಿದೆ ಎಂದು ಅರ್ಥ. ಇದರ ತಾತ್ಪರ್ಯ ಏನೆಂದರೆ, ನಮ್ಮಲ್ಲಿ ಕೈಗಾರಿಕೀಕರಣದಲ್ಲಿ ಹಿಂಜರಿತವಾಗಿದೆ, ಇದನ್ನು ಒಪ್ಪಿಕೊಳ್ಳಬೇಕು. ಇದನ್ನೂ ಕೂಡ ಭಾರತ ಸರ್ಕಾರದ ಮೇಲೆ ಹಾಕತಕ್ಕ ಗೊಂದಲ, ಸಿದ್ಧಾಂತದ ವಿಚಾರದಲ್ಲಿ ಗೊಂದಲ, ಅಂಕಿಸಂಖ್ಯೆಗಳ ವಿಚಾರದಲ್ಲಿ ಗೊಂದಲದ ವಾತಾವರಣವನ್ನು ತಾವು ಇಲ್ಲಿ ಪ್ರಾರಂಭ ಮಾಡಿದಿರಿ. ತಮಗೆ ಭಾಷೆಯ ದೋಷವೊ, ನಮ್ಮ ಭಾಷೆಯ ದೋಷವೊ ಕನ್ನಡ, ಇಂಗ್ಲೀಷ್, ಲ್ಯಾಟಿನ್, ಗ್ರೀಕ್, ಇಟಲಿ, ಫ್ರಾನ್ಸ್...

ಶ್ರೀ ಜೆ. ಹೆಚ್. ಪಟೇಲ್.—ನಿಮಗೆ ಬೆಳ್ತಂಗಡಿ ವಿಚಾರ ಬೇಕಾದರೆ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬೆಳ್ತಂಗಡಿಗೆ ಹೋದರೆ ಕೈಗಾರಿಕೆ ನಡೆಯುತ್ತದೆ. ನೀವು ಒಂದು ವಾರ ಬನ್ನಿ ಕೈಗಾರಿಕೆ ನಡೆಯುತ್ತದೆ. ಆದರೆ ಅವರ ಸಿದ್ಧಾಂತದ ಲಹರಿ ಏನಿದೆ ಅದು ಸೀಮಾತೀತವಾಗಿ ಎಲ್ಲಾ ಕಡೆ ಹರಿದು ನಮ್ಮ ಕರ್ನಾಟಕ ಅದರಲ್ಲಿ ಕೊಚ್ಚಿ ಕೊಂಡು ಹೋದಹಾಗೆ ಆಯಿತು.

ಶ್ರೀ ಎಸ್. ಬಂಗಾರಪ್ಪ.—ಹುಚ್ಚು ಹೊಳೆಯಾಗಿ ಕೊಚ್ಚಿಕೊಂಡು ಹೋಗಿದೆ ಎಂದು ಅರ್ಥವೇ ?

ಶ್ರೀ ಎಂ. ವೀರಪ್ಪ ಮೊಯಿಲಿ. —ಗೊಂದಲದ ವಾತಾವರಣವನ್ನು ತಪ್ಪಿಸತಕ್ಕ ಪ್ರಯತ್ನ ತಾವು ಮಾಡಲಿಲ್ಲ. ಯು. ಪಿ. ಯಲ್ಲಿ ಅಪೆಕ್ಸ್ ಇನ್‌ವೆಸ್ಟ್‌ಮೆಂಟ್ ಜಾಸ್ತಿ ಇದೆ ಎಂದು ಹೇಳಿದರು. ಆದರೆ ನಮ್ಮ ಕರ್ನಾಟಕ ಯಾವ ಸ್ಥಾನದಲ್ಲಿದೆ ಎನ್ನುವುದನ್ನು ಹೇಳಬೇಕು. ಪ್ರೊಡಕ್ಷನ್ ಮಟ್ಟಿಗೆ ಮೊದಲು ಏನು ಇತ್ತು, ಈಗ ಏನಾಗಿದೆ ಎನ್ನುವುದನ್ನು ಹೇಳಬೇಕು. ನಾನು ಇದರ ಬಗ್ಗೆ ವಿವರವಾಗಿ ಹೇಳಿದರೆ ಗಂಟೆಗಟ್ಟಲೆ ಆಗುತ್ತದೆ. ತಾವು ಸ್ಪಷ್ಟವಾದ ಸ್ವರೂಪವನ್ನು ಹೇಳಲಿಲ್ಲ. ಯು. ಪಿ. ಯಲ್ಲಿ ೨೦ ಸಾವಿರ ಕೋಟಿ ಖರ್ಚು ಮಾಡಿದ್ದಾರೆ ನಾವು ಏನು ಮಾಡಬೇಕು ಎಂದು ಹೇಳಿ ನಾಚಿಕೊಳ್ಳತಕ್ಕ ಪ್ರಶ್ನೆಯೇ ಹೊರತು ಮತ್ತೆ ಏನಿಲ್ಲ.

ಅಧ್ಯಕ್ಷರು. —ಇದರ ಬಗ್ಗೆ ಏನಾದರೂ ಹೇಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್. —ಅವರು ಹೇಳಿದ್ದು ನನಗೆ ಅರ್ಥವಾಗಿದೆ, ನಾನು ಹೇಳಿದ್ದು ಅವರಿಗೆ ಅರ್ಥವಾಗಿದೆ.

ಶ್ರೀ ಬಿ. ಬಸವಲಿಂಗಪ್ಪ. —ನಿನ್ನೆ ಸಂಜೆಯಿಂದ ರಾತ್ರಿಯವರೆಗೆ ಎಲ್ಲ ಸದಸ್ಯರ ಭಾಷಣಗಳನ್ನು ನಾನು ಕೇಳಿದ್ದೇನೆ. ಶ್ರೀಮಾನ್. ಜೆ. ಹೆಚ್. ಪಟೇಲರು ಮಂತ್ರಿಗಳಾಗಿದ್ದಾರೆ. ಜನಗಳು, ನಾವೆಲ್ಲರೂ ನಿರೀಕ್ಷೆ ಮಾಡುವುದು ಏನೆಂದರೆ, ಅವರು ಮಂತ್ರಿಯಾಗಿ ಕೆಲಸ ಮಾಡಬೇಕು ಎನ್ನುವುದು. ಅವರು ಉತ್ತರ ಕೊಡುವ ಶೈಲಿ ನೋಡಿದರೆ ಎಲ್ಲರಿಗೂ ಆಶೀರ್ವಾದ ಮಾಡಿದ್ದಾರೆ. ಎಲ್ಲರಿಗೂ ಒಳ್ಳೆಯದಾಗಲಿ, ಜನತೆಗೆ ಒಳ್ಳೆಯದಾಗಲಿ ಎಂದು ಹಾರೈಸಿದ್ದಾರೆ. ಈ ಕೆಲಸ ಮಾಡುವವರು ಸನ್ಯಾಸಿಗಳು, ಗುರುಗಳು, ಇವರನ್ನು ಮಂತ್ರಿಯನ್ನಾಗಿ ಮಾಡಿರುವ ಉದ್ದೇಶ ಏನೆಂದರೆ, ಇವರು ಚೆನ್ನಾಗಿ ಕೆಲಸ ಮಾಡಬೇಕು ಎಂದು. ಫೈನಾನ್ಷಿಯಲ್ ಅಕೌಂಟ್ಸ್ ಪ್ರಕಾರ, ಎ. ಜಿ. ವರದಿ ಪ್ರಕಾರ ೧೧೨ ಇಂಡಸ್ಟ್ರೀಸ್ ಇದೆ. ಈ ಇಂಡಸ್ಟ್ರೀಸ್‌ನಲ್ಲಿ ೧೪ ಲಾಭದಾಯಕವಾಗಿದೆ. ಇನ್ನೆಲ್ಲವೂ ಲುಕ್ಸಾನಿನಲ್ಲಿದೆ. ನೀವು ಇದರ ಬಗ್ಗೆ ಏನು ಯೋಚನೆ ಮಾಡಿ ಯಾರ್‍ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ, ಯಾವ ರೀತಿ ಸುಧಾರಿಸುತ್ತೀರಿ ಯಾವ ರೀತಿಯಾಗಿ ಲಾಭದಾಯಕವಾಗಿ ಮಾಡುತ್ತೀರಿ ಎನ್ನುವುದರ ಬಗ್ಗೆ ಹೇಳುವುದನ್ನು ಬಿಟ್ಟು ಎಲ್ಲರಿಗೂ ಒಳ್ಳೆಯದಾಗಲಿ, ಜನತೆಗೆ ಒಳ್ಳೆಯದಾಗಲಿ ಎಂದು ಸನ್ಯಾಸಿಗಳ ತರಹ ಹೇಳಿದರೆ ಹೇಗೆ ? ಲಕ್ಷಾಂತರ ರೂಪಾಯಿ ನಷ್ಟವಾಗಿದೆ ಅಂದರೆ, ಸಂತೋಷ, ಒಳ್ಳೆಯದಾಗಲಿ ಅಂದರೆ ಅದಕ್ಕೂ ಇದಕ್ಕೂ ಏನು ಸಂಬಂಧ ? ಒಬ್ಬರು ಸಂತಾನ ಅಭಿವೃದ್ಧಿಯಾಗಲಿ ಎಂದು ಹೇಳಿದರಂತೆ. ಮಲ್ಲೇಶ್ವರದಲ್ಲಿ ಒಂದು ಸಾರಿ ವಿಧವೆಯರ ಸಮ್ಮೇಳನ ಮಾಡಿದರು. ಆಗ ಡಾಕ್ಟರ್ ನಾಗಪ್ಪ ಆಳ್ವ ಅವರು ಮಂತ್ರಿಗಳಾಗಿದ್ದರು, ಅವರು ಪ್ರಿಸೈಡ್ ಮಾಡಿದ್ದರು. ವಿಧವೆಯರೆಲ್ಲಾ ಹೋಗಿ ತಮ್ಮ ತಮ್ಮ ಕಷ್ಟವನ್ನು ಹೇಳಿಕೊಂಡರು. ಆ ಮೇಲೆ ಅವರ ಭಾಷಣದಲ್ಲಿ ನಿಮ್ಮ ಸಂತಾನವು ದಿನೇ ದಿನೇ ಅಭಿವೃದ್ಧಿಯಾಗಲಿ ಎಂದು ಹೇಳಿದರು. ಹೀಗೆ ಹೇಳಿದ್ದು ನನಗೆ ಜ್ಞಾಪಕ ಇದೆ. ಇವತ್ತು ಏನಾಗಿದೆ ಎಂದರೆ ಕಂಪನೀಸ್ ಆ್ಯಕ್ಟ್ ಪ್ರಕಾರ ಇವು ಜನರಲ್‌ಬಾಡಿ ಮೀಟಿಂಗ್ ಮಾಡಿಲ್ಲ.

ಇವತ್ತಿನ ದಿವಸ ಕಂಪನಿ ಆ್ಯಕ್ಟ್ ೧೯೫೬, ೨೧೦, ೬೧೯ನೇ ಸೆಕ್ಷನ್ ಪ್ರಕಾರ ಆ್ಯನ್ಯುಯಲ್ ಜನರಲ್ ಬಾಡಿ ಮೀಟಿಂಗ್ ಮಾಡಿಲ್ಲವೆಂದರೆ ಜೈಲಿಗೆ ಹೋಗಬೇಕಾಗುತ್ತದೆ. ೧೯೮೨-೮೩ ರಿಂದ ಮೀಟಿಂಗ್ ಮಾಡಿಲ್ಲ. ನಮಗೆ ಕಷ್ಟ ಇದೆ, ರಿಪೋರ್ಟನ್ನು ಅಲ್ಲಿಗೆ ಕಳಿಸಬೇಕೆಂದು ಇಲ್ಲಿಗೆ ಕಳುಹಿಸಬೇಕೆಂದು ಉತ್ತರ ಹೇಳುತ್ತಾರೆ. ಕಂಪನಿ ನಡೆಸತಕ್ಕಂತಹವರು ಆ್ಯನ್ಯುಯಲ್ ಜನರಲ್ ಬಾಡಿ ಮೀಟಿಂಗ್ ಮಾಡಲೇಬೇಕು. ಮಾಡದೇ ಹೋದರೆ ಕಂಪನಿ ಆ್ಯಕ್ಟ್ ಪ್ರಕಾರ ಅವರನ್ನು ಜೈಲಿಗೆ ಹಾಕಬೇಕು. ಕಂಪನಿ ಆ್ಯಕ್ಟ್ ಪ್ರಕಾರ ಎಷ್ಟು ಜನರನ್ನು ಜೈಲಿಗೆ ಕಳಿಸಿದ್ದೀರಿ. ? ಎಷ್ಟು ಕಡೆ ಕಂಪನಿ ಆ್ಯಕ್ಟ್ ಅನ್ನು ಜಾರಿಗೆ ತಂದಿದ್ದೀರಿ. ಕಂಪನಿ ಆಡಳಿತವನ್ನು ಯಾರು ವಹಿಸಿಕೊಂಡಿದ್ದೀರಿ ಇದನ್ನೆಲ್ಲಾ ಯಾರು ನೋಡುತ್ತೀರಿ ? ಇದು ಒಂದು ವಿಚಾರ. ಎರಡನೇ ವಿಚಾರ, ಇಲ್ಲಿ ಸ್ಪಿನ್ನಿಂಗ್ ಮಿಲ್ ಕಡಿಮೆಯಿದೆ, ತಮಿಳು ನಾಡಿನಲ್ಲಿ ಸ್ಪಿನ್ನಿಂಗ್ ಮಿಲ್ ಜಾಸ್ತಿಯಿದೆಯೆಂದು ಹೇಳಿದ್ದೀರಿ. ನಾವು ತಮ್ಮನ್ನು ಮಂತ್ರಿಗಳನ್ನಾಗಿ ಮಾಡಿರುವುದು ಸ್ಪಿನ್ನಿಂಗ್ ಮಿಲ್‌ನಲ್ಲಿ ಇಳುವರಿ ಜಾಸ್ತಿ ಮಾಡಿ ಎಂದು. ಅಲ್ಲಿಗೆ ಇಲ್ಲಿಗೆ ಕಂಪೇರ್ ಮಾಡಿದರೆ ಇಲ್ಲಿ ಇಳುವರಿ ಕಡಿಮೆಯಿದೆ, ಅಲ್ಲಿ ಜಾಸ್ತಿಯಿದೆಯೆಂದು ಹೇಳುವುದಕ್ಕಲ್ಲ. ಆಶೀರ್ವಾದ ಮಾಡುವುದಕ್ಕಲ್ಲ. ನಮ್ಮ ರಾಜ್ಯದಲ್ಲಿ ಕನ್ನಡಿಗರಿಗೆ ಕೆಲಸ ಸಿಗಬೇಕು. ಇದನ್ನು ಶ್ರೀ ನಾರಾಯಣ ಕುಮಾರ್‌ರವರು ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮ ನಿಲುವೂ ಅಷ್ಟೇ ಕರ್ನಾಟಕ ರಾಜ್ಯದಲ್ಲಿ ಹುಟ್ಟಿರ ತಕ್ಕಂತಹವರಿಗೆ ಮೊದಲು ಎಲ್ಲಾ ನೌಕರಿಗಳಲ್ಲೂ ಆದ್ಯತೆ ಇರಬೇಕು. ಅದನ್ನು ಅವರು ಸ್ಪಷ್ಟವಾಗಿ

ಹೇಳಿದ್ದಾರೆ. ಇದಕ್ಕೆ ನಮ್ಮ ನಿಲುವೂ ಉಂಟು. ಅವರ ನಿಲುವೂ ಉಂಟು. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಅವರು ರಿಪೋರ್ಟ್ ಬರೆಯುತ್ತಾರೆ ಅದನ್ನು ಕೊಡುತ್ತೀರಿ. ನೀವು ಯಾವ ಕಾರ್ಖಾನೆಗಳಿಗೆ ಹೊಸದಾಗಿ ಲೈಸನ್ಸ್ ಕೊಡುತ್ತೀರಿ, ಆಗ ಅವರಿಗೆ ೯೦ ಭಾಗ, ೭೦ ಭಾಗದಷ್ಟು ಕೆಲಸವನ್ನು ಕನ್ನಡದವರಿಗೇ ಕೊಡಬೇಕೆಂಬ ಕಂಡೀಷನ್‌ನನ್ನು ಹಾಕಬೇಕು. ಕ್ಲಾಸ್-೩, ಕ್ಲಾಸ್-೪ರಲ್ಲಿ ಇಷ್ಟು ಜನ ಕನ್ನಡಿಗರಿಗೆ ಕೆಲಸ ಕೊಡಬೇಕೆಂಬುದನ್ನು ಅವರಿಗೆ ಲೈಸನ್ಸ್ ಕೊಡುವುದಕ್ಕೆ ಮುಂಚಿತವಾಗಿಯೇ ಸ್ಪಷ್ಟವಾಗಿ ಹೇಳಬೇಕು. ನೋಡುತ್ತೇವೆ, ಮಾಡುತ್ತೇವೆಂದು ಹೇಳುವುದಕ್ಕಲ್ಲ. ತಾವು ದಯವಿಟ್ಟು ಮಂತ್ರಿಯಾಗಿ ಕೆಲಸ ಮಾಡಿ. ಆಗ ನಮ್ಮೆಲ್ಲರ ಬೆಂಬಲ ನಿಮಗೆ ಉಂಟು. ಕೋಟ್ಯಾಂತರ ರೂಪಾಯಿ ಲುಕ್ಸಾನ್ ಮಾಡುತ್ತಿದ್ದಾರೆ. ಇದನ್ನು ತಾವೂ ಕೂಡ ಒಪ್ಪಿದ್ದೀರಿ. ಇದನ್ನು ತಪ್ಪಿಸುವುದಕ್ಕೆ ಸಾಧ್ಯವಾದಷ್ಟು ಪ್ರಯತ್ನ ಮಾಡಿ. ನಮ್ಮಲ್ಲಿ ಕೆಲವು ಐ.ಎ.ಎಸ್. ಅಧಿಕಾರಿಗಳಿದ್ದಾರೆ. ಅವರು ನಮ್ಮ ದೇಶದ ಎಲ್ಲಾ ಕಡೆಗಳಿಂದಲೂ ಬಂದವರಿರುತ್ತಾರೆ. ಅವರಲ್ಲಿ ಕರ್ನಾಟಕದ ಬಗ್ಗೆ ಅಭಿಮಾನ ಇರಬೇಕು. ಇಲ್ಲದವರು ಇದ್ದರೆ ಅಂಥವರನ್ನು ಅವರ ರಾಜ್ಯಕ್ಕೆ ಕಳಿಸಬೇಕು ಫ್ಯಾಕ್ಟರಿ ಮ್ಯಾನೇಜ್‌ಮೆಂಟ್ ಮಾಡುವಾಗ, ಅದರಲ್ಲಿ ಯಾರು ಲುಕ್ಸಾನ್ ಮಾಡುತ್ತಾರೆ, ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಐ.ಎ.ಎಸ್. ಅಧಿಕಾರಿಗಳೆಲ್ಲಾ ಬುದ್ಧಿವಂತರೆಂದು ತಿಳಿದುಕೊಂಡಿದ್ದೇನೆ. ಅವರು ಕಾನೂನು ಓದಿದ್ದನ್ನು ನೋಡಿಲ್ಲ. ಓದುತ್ತಾರೆ ಆದರೆ, ಫೈಲ್ ಬಂದಾಗ ಏನೋ ನೋಡಿ ಬರೆದು ಬಿಡುತ್ತಾರೆ. ಅದನ್ನು ಸಂಪೂರ್ಣವಾಗಿ ತಿಳಿದುಕೊಂಡಂತಹ ಮತ್ತು ಅದರಲ್ಲಿ ಎಕ್ಸ್‌ಪರ್ಟ್ ಆಗಿರತಕ್ಕಂತಹ ಐ.ಎ.ಎಸ್. ಅಧಿಕಾರಿಗಳನ್ನು ನೋಡಿಲ್ಲ. ಅದನ್ನೆಲ್ಲಾ ನೀವೇ ಮಾಡಿ ಎಕ್ಸ್‌ಪರ್ಟ್ಸ್ ನೀವೇ ಎಂದು ಹೇಳಿ ಲುಕ್ಸಾನಾಗಿರ ತಕ್ಕಂತಹ ಸಿಕ್ ಇಂಡಸ್ಟ್ರೀಸ್‌ಗಳನ್ನು ನೀವೇ ಮಾಡಿ ಎಂದು ಕಳಿಸಿದರೆ ಅದು ಆಗುವುದಿಲ್ಲ. ಇದಕ್ಕೆಲ್ಲಾ ಎಕ್ಸ್‌ಪರ್ಟೈಸ್ ಬಾಡಿ ಎಂದು ಮಾಡಿ ಒಂದು ಇಂಡಸ್ಟ್ರಿಯಲ್ ಕೇಡರ್ ತಯಾರು ಮಾಡಿ. ಅದಕ್ಕೋಸ್ಕರ ಅವರನ್ನೇ ತನ್ನಿ. ಅವರು ಸಿಕ್ಕದೇ ಹೋದರೆ ಪ್ರೈವೇಟ್ ಇಂಡಸ್ಟ್ರೀಸ್‌ಗಳಲ್ಲಿ ಎಕ್ಸ್‌ಪರ್ಟ್ಸ್‌ಗಳಿದ್ದಾರೆ ಅವರಿಂದ ಅಡ್ವೈಸ್ ತೆಗೆದುಕೊಂಡು ಈಗ ಏನು ಇಂಡಸ್ಟ್ರೀಸ್‌ಗಳಿವೆ, ಅದನ್ನು ಹೆಚ್ಚು ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನ ಮಾಡಿ. ಅದನ್ನು ಬಿಟ್ಟು ಸನ್ಯಾಸಿಗಳು ಆಶೀರ್ವಾದ ಮಾಡಿದ ಹಾಗೆ ಮಾಡಬೇಡಿ.

ಶ್ರೀ ಜೆ.ಹೆಚ್. ಪಟೇಲ್.—ಈ ಅಧಿವೇಶನ ಮುಗಿದ ತಕ್ಷಣ ನಾನೇ ಸ್ವತಃ ಪ್ರತಿಯೊಂದು ಕಾರ್ಖಾನೆಗೂ ಹೋಗಿ ರೆವ್ಯೂ ಮಾಡಬೇಕೆಂದಿದ್ದೇನೆ ಅದು ಒಂದು ಹೆಜ್ಜೆ. ನೀವು ಹೇಳಿದ ಹಾಗೆ ಕಾನೂನು ಓದದೇ ಇರುವವರ, ಗೊತ್ತಿಲ್ಲದೇ ಇರುವವರ ಬಗ್ಗೆ ನಾನು ಸ್ವತಃ ತಿಳಿದುಕೊಳ್ಳಬೇಕಲ್ಲ. ನೀವು ಮಂತ್ರಿಗಳಾಗಿದ್ದಾಗ ಅಂತಹವರು ಇದ್ದಿರಬಹುದು. ಈಗ ಅಂತಹವರು ಇಲ್ಲದಿರಬಹುದು, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಇನ್ನು ಎರಡನೆಯದಾಗಿ ಲೈಸನ್ಸ್ ಕೊಡುವಾಗ ಕಂಡೀಷನ್ ಹಾಕಬೇಕೆಂದು ಹೇಳಿದ್ದೀರಿ, ಲೈಸನ್ಸ್ ಕೊಡುವುದು ನಾವಲ್ಲ. ಕೇಂದ್ರ ಸರ್ಕಾರದವರು ಲೈಸನ್ಸ್ ಕೊಡುವುದು. ನಾವೇನಾದರೂ ಡೆವಲಪ್‌ಮೆಂಟ್ ಲೋನ್ ಕೊಟ್ಟರೆ ಆಗ ಮಾತ್ರ ಕಂಡೀಷನ್ ಹಾಕಬಹುದು.

ಶ್ರೀ ಮಹಮದ್ ಮೊಯಿನುದ್ದೀನ್,—ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಮಾತನಾಡುತ್ತಾ, ಆನ್ಯುಯಲ್ ರಿಪೋರ್ಟಿನಲ್ಲಿ ಸ್ಟೇಟ್‌ಮೆಂಟ್ ಆಫ್ ಪ್ರಾಫಿಟ್ ಅಂಡ್ ಲಾಸ್‌ನಲ್ಲಿ ತಪ್ಪು ಇದೆಯೆಂದು ಹೇಳಿದ್ದೆ. ಆ ಬಗ್ಗೆ ಮಾನ್ಯ ಮಂತ್ರಿಯವರು ಏನೂ ಇಲ್ಲವೆಂದು ಉತ್ತರ ಕೊಟ್ಟರು ಈ ಪ್ರಾಫಿಟ್ ಅಂಡ್ ಲಾಸ್ ಅಕೌಂಟಿನಲ್ಲಿ ೧೪ ಕಂಟೆಂಟ್ಸ್‌ನಲ್ಲಿ ೧೦ ಕಂಟೆಂಟ್ಸ್‌ನಲ್ಲಿ ಫಿಗರ್ಸ್ ತಪ್ಪು ಕೊಟ್ಟಿದ್ದಾರೆ. ೧೪ರಲ್ಲಿ ೧೨ ರಾಂಗ್ ಆಗಿದೆ. ಒಂದು ಉದಾಹರಣೆ ಇದೆ, ಅದನ್ನು ಆಮೇಲೆ ಮಾನ್ಯ ಮಂತ್ರಿಗಳಿಗೆ ಬರೆದು ಕಳಿಸುತ್ತೇನೆ ಕೆ.ಎಸ್ ಐ.ಸಿಯ ೧೯೮೨-೮೩ರ ಆನ್ಯುಯಲ್ ರಿಪೋರ್ಟ್‌ನಲ್ಲಿ ೩೬.೪೨ ಎಂದು ಇದೆ. ಆಡಿಟ್ ರಿಪೋರ್ಟ್‌ನಲ್ಲಿ ೫೯.೫೬ ಎಂದಿದೆ ಇದರಲ್ಲಿ ಯಾವುದು ಸರಿ. ಯಾವುದು ತಪ್ಪು ? ಇದರ ಬಗ್ಗೆ ನೀವೇ ಯೋಚನೆ ಮಾಡಬೇಕು. ಇದೇ ರೀತಿ ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಇದೆ. ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್‌ನ ಪೈಡ್ ಅಪ್ ಕ್ಯಾಪಿಟಲ್‌ನಲ್ಲಿ ೭೦೬ ಎಂದು ಬರೆದಿದೆ. ಇರುವುದು ೭೩೦. ಇದನ್ನು ನಿಮಗೆ ಕಳಿಸಿಕೊಡುತ್ತೇನೆ. ತಾವು ನೋಡಬಹುದು. ಮೈಸೂರು ಪೇಪರ್ ಮಿಲ್ಸ್‌ನ್ನು ಸಹ ಲಾಸ್‌ನಲ್ಲಿ ತೋರಿಸಿದ್ದಾರೆ. ಪಿ.ಎ.ಸಿ.ಯ ವರದಿಯಲ್ಲಿ ಪ್ರಾಫಿಟ್‌ನಲ್ಲಿ ತೋರಿಸಿದ್ದಾರೆ. ೧೯೮೨-೮೩ರಲ್ಲಿ ಬ್ಲಾಂಕ್ ಬಿಟ್ಟಿದ್ದಾರೆ. ಏನೂ ತೋರಿಸಿಲ್ಲ. It is +55.06. It is in the report ಅದೇ ರೀತಿ ೧೯೮೩-೮೪ರ ರದ್ದು......

ಶ್ರೀ ಜೆ.ಹೆಚ್. ಪಟೇಲ್.—ಅದನ್ನು ಕಳಿಸಿಕೊಡಿ. ಬಹುಶಃ ಅದು ತಪ್ಪೆಂದು ಅವರ ಮನಸ್ಸಿನಲ್ಲಿ ಇದೆ. ಅದರಲ್ಲಿ ತಪ್ಪು ಇರಬಾರದು. ಅದನ್ನು ಎಕ್ಸ್‌ಪ್ಲೈನ್ ಮಾಡುತ್ತೇನೆ. ಕೊನೆಯದಾಗಿ ಶ್ರೀ ಕೆ.ಹೆಚ್. ಶ್ರೀನಿವಾಸ್‌ರವರಿಗೆ......

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ, ನಿನ್ನೆ ರಾತ್ರಿ ೯ ಗಂಟೆಯ ತನಕ ಭಾಷಣ ಮಾಡಿದರೂ, ಅದು ಯಾವುದರ ಮುಂದೆ ಕಿನ್ನರಿ ಬಾರಿಸಿದ ಹಾಗೆ ಆಗಿದೆ. ಅದನ್ನು ಹೇಳುವುದಿಲ್ಲ. ಅದು ಅನ್ ಪಾರ್ಲಿಮೆಂಟರಿ ಆಗುತ್ತದೆ. ಇವತ್ತು ಏನಾಗಿದೆಯೆಂದರೆ, ಸಮಾಜವಾದದ ಮೇಲೆ ಭಾಷಣ ಮಾತ್ರ ಕರೆಕ್ಟಾಗಿ ಮಾಡುತ್ತಾರೆ. ಅದರಲ್ಲೂ ಕೇಂದ್ರ ಸರ್ಕಾರದ ಮತ್ತು ಶ್ರೀ ರಾಜೀವ ಗಾಂಧಿಯವರ ಪ್ರಶ್ನೆ ಬಂದಾಗ ಫಸ್ಟ್‌ಕ್ಲಾಸ್ ಆಗಿ ಸಮಾಜವಾದ ಬರುತ್ತದೆ. ಆದೇ ನಿಮ್ಮ ಸರ್ಕಾರದ ಪ್ರಶ್ನೆ ಬಂದಾಗ ಹಳಿ ತಪ್ಪುತ್ತದೆ. ವರ್ಲ್ಡ್ ಟೂರ್ ಮಾಡಿಕೊಂಡು ಬಂದಿರಿ. ಫ್ರಾನ್ಸ್ ಎಲ್ಲಾ ಕಡೆ ಟೂರ್ ಮಾಡಿಕೊಂಡು ಬಂದಿರಿ. ವಿಚಾರಲಹರಿ ಎಲ್ಲಾ ಸರಿ ಇತ್ತು. ನಾವು ಹೇಳುತ್ತಿರುವುದು ಬರೀ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ಗಳು ಇರುವುದಷ್ಟೇ ಸಮಾಜವಾದವೆಂದು ನಾವು ಹೇಳಿಲ್ಲ. ಸಮಾಜವಾದಕ್ಕೆ ಹಲವಾರು ಆಯಾಮಗಳು ಇದೆ. ಹಾಗೂ ಅದಕ್ಕೆ ಸೂಕ್ತವಾದ ಮಾನ್ಯತೆ ಇರಬೇಕು. ನಾವು ಇದನ್ನೆಲ್ಲಾ ಪ್ರಶ್ನೆ ಮಾಡಲಿಲ್ಲ. ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ಗಳನ್ನು ನಿರ್ವಹಿಸುವುದಕ್ಕೆ ಹೋಗದೆ, ಒಂದೊಂದನ್ನೇ ತೆಗೆದು ಅದನ್ನು ಖಾಸಗಿಯವರಿಗೆ ಕೊಡುವುದಿದೆಯಲ್ಲಾ, ಅದಂತೂ ಖಂಡಿತಾ ಸಮಾಜವಾದವಲ್ಲ. ಬರೀ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ಗಳನ್ನು ನಡೆಸಲೇಬೇಕೆಂದು ಹೇಳುವುದು ಸಮಾಜವಾದ ಹೌದೋ, ಅಲ್ಲವೋ, ಅದು ಬೇರೆ ವಿಷಯ. ಇದು ಕೊಡುವುದಂತೂ ಸಂಪೂರ್ಣವಾಗಿ ಸಮಾಜವಾದಕ್ಕೆ ತದ್ವಿರುದ್ಧವಾದ ವಿಚಾರವೆಂದು ಹೇಳುತ್ತೇನೆ. ತಾವು ಹೇಳಿದಿರಿ ಸಮನ್ವಯ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ ಎಂದು. ನಾನು ಸಮನ್ವಯ ಮಾಡಿ ಕೊಡುತ್ತೇನೆ. ಇವು ಬಿಳಿ ಆನೆಗಳೆಂದು ಹೇಳಿದಿರಿ, ಅದು ನಿಜ. ಇದು ದೊಡ್ಡ ಕೈಗಾರಿಕೆಗಳು ಅವು ಆನೆ ಸ್ವರೂಪದಲ್ಲೇ ಇರಬೇಕು. ಅವು ಕುರಿಗಳಾಗಬೇಕೆಂದು ನಮ್ಮ ಅಭಿಪ್ರಾಯವಲ್ಲ. ಈ ಆನೆಗಳನ್ನು ನಿಯಂತ್ರಿಸತಕ್ಕ ಮತ್ತು ಅದಕ್ಕೆ ಅಂಕುಶ ಹಾಕಿ ನಿಮ್ಮ ಉದ್ದೇಶಕ್ಕೆ, ಅವನ್ನು ಬಳಸಿಕೊಳ್ಳ ತಕ್ಕಂತಹ ಸಾಮರ್ಥ್ಯವನ್ನು ತೋರಿಸಬೇಕು. ಸುಬ್ರಮಣ್ಯ ಪಾರುಪತ್ತೆ ಮಾಡಬಾರದು,

ಇದರ ಬಗ್ಗೆ ಸಾಕಷ್ಟು ವಿಚಾರ ಮಾಡಿ ಹೇಳುತ್ತಿದ್ದೇನೆ. ಗ್ಲಿಸರಿನ್ ರೆಕವರಿ ಪ್ಲಾಂಟ್ ಬ್ಲೀಚಿಂಗ್ ಪ್ಲಾಂಟ್, ಸೋಪ್ ಮೇಕಿಂಗ್ ಪ್ಲಾಂಟ್, ಯಾವುದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ೨೬ ಸಾವಿರ ಟನ್ ಉತ್ಪಾದನೆ ಮಾಡಲಿಕ್ಕೆ ಟರ್ನ್‌ಕೀ ಬೇಸಸ್ ಮೇಲೆ ಸ್ಥಾಪನೆ ಮಾಡಿರತಕ್ಕ ಈ ಪ್ಲಾಂಟ್ ಹಿಂದೆ ಅಲ್ಲಿ ೧೨ ಸಾವಿರ ಟನ್ ಉತ್ಪಾದನೆ ಮಾಡುತ್ತಿದ್ದ ಪ್ಲಾಂಟ್‌ನ ಮಟ್ಟಕ್ಕೆ ಹೋಗಿ ಮುಟ್ಟಿದೆ ಅಂದರೆ ಏನು ಅರ್ಥ? ಆದ್ದರಿಂದ, ಇದಕ್ಕೆ ಒಂದು ಎನ್‌ಕ್ವಯರಿ ಮಾಡಿದರೆ ನಿಧಾನವಾಗಿ ವಿಷಯ ಏನು ಎಂದು ಗೊತ್ತಾಗುತ್ತದೆ. ಈಗ ಏನು ಆಗುತ್ತಿದೆ ಎಂದರೆ ನೀವು ಅಧಿಕಾರಿಗಳು ಕೊಡತಕ್ಕ ಮಾಹಿತಿಯನ್ನೇ ಇಲ್ಲಿ ಹೇಳುತ್ತಿದ್ದೀರಿ, ನೀವು ಪೋಸ್ಟ್ ಆಫೀಸ್ ಕೆಲಸ ಮಾಡಿದರೆ ಏನು ಮಾಡೋಣ. ನೀವು ಮಂತ್ರಿಯಾಗಿ ಕೆಲಸ ಮಾಡಬೇಕೆಂದು ನಮ್ಮ ಅಪೇಕ್ಷೆ ಇದೆ. ಇನ್ನು ಪವರ್ ಪ್ರಾಬ್ಲಂ ಇದೆ ಎಂದು ಹೇಳಿದ್ದೀರಿ ಸೂಪರ್ ಥರ್ಮಲ್ ಪ್ಲಾಂಟ್ ಇಂಥ ಇಂಥಾದ್ದಕ್ಕೆಲ್ಲಾ ಹಣವನ್ನು ಇನ್‌ವೆಸ್ಟ್‌ಮೆಂಟ್ ಮಾಡಿದಾಗ ನಮ್ಮ ಪಾಲನ್ನು ನಾವು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಅದು ಅನೇಕ ಕಾರಣಗಳಿಂದ ಆಗುತ್ತಿಲ್ಲ. ಅದನ್ನು ನಾವು ಆದಷ್ಟು ಶೀಘ್ರವಾಗಿ ನಮ್ಮ ಪಾಲನ್ನು ಪಡೆಯತಕ್ಕ ಪ್ರಯತ್ನ ಮಾಡಬೇಕು. ನಾವು ಏನಾದರೂ ಹೇಳಿದರೆ ದೂಷಣೆ ಮಾಡಲಿಕ್ಕೆ ಹೇಳುತ್ತಾರೆಂದು ಆಗುತ್ತದೆ ಹಿಂದೆ ವಿದ್ಯುಚ್ಛಕ್ತಿ ಬಹಳ ಜಾಸ್ತಿ ಇದೆ ಎಂದು ತಿಳಿದುಕೊಂಡು ಕಂಡಕಂಡವರನ್ನು ಕಲ್ಕತ್ತ ಬೊಂಬಾಯಿ ಮುಂತಾದ ಕಡೆಗಳಿಂದ ಕರೆದುಕೊಂಡು ಬಂದರು. ಅದನ್ನು ಹಿಂದಿನ ಮಾನ್ಯ ಮುಖ್ಯಮಂತ್ರಿಗಳೇ ಮಾಡಿದ್ದಾರೆ. ಶರಾವತಿ ಪವರ್ ಪ್ರಾಜೆಕ್ಟ್ ಆದಾಗ ಮಾನ್ಯ ನಿಜಲಿಂಗಪ್ಪನವರನ್ನು ಕರೆದುಕೊಂಡು ಹೋಗಿ ಬಾಂಬೆ ಕಲ್ಕತ್ತಾದಲ್ಲಿದ್ದ ವಾಣಿಜ್ಯೋದ್ಯಮಿಗಳನ್ನು ಕರೆದು ಕರ್ನಾಟಕ, ಕಲ್ಕತ್ತದ ಬಾಂಧವ್ಯ ಸುಧಾರಿಸುದನ್ನು ಹಿಂದಿನ ಮಾನ್ಯ ಮುಖ್ಯ ಮಂತ್ರಿಗಳೇ ಮಾಡಿದ್ದಾರೆ. ಅವರಿಗೆ ಚೀಪ್ ರೇಟ್‌ನಲ್ಲಿ ಪವರ್ ಕೊಡುತ್ತೇವೆಂದು ಬಹಳ ಲಾಂಗ್ ಪೀರಿಯಡ್‌ಗೆ ಕಮಿಟ್‌ಮೆಂಟ್ ಮಾಡಿ ಕರ್ನಾಟಕಕ್ಕೆ ಶಾಶ್ವತವಾಗಿ ಶಾಪ ಕೊಟ್ಟಿರತಕ್ಕದ್ದು ಹಿಂದಿನ ಮುಖ್ಯಮಂತ್ರಿಗಳು. ಈಗ ನಾವೆಲ್ಲಾ ಲೇಬರ್ ಓರಿಯೆಂಟೆಡ್ ಹೊಸ ಪಾಲಿಸಿ ಮಾಡಿದ್ದೇವೆ, ನಾನು ವಿಶ್ವೇಶ್ವರಯ್ಯ ಅಲ್ಲ, ಇಮ್ಮಡಿ ವಿಶ್ವೇಶ್ವರಯ್ಯ ಎಂದು ಹೇಳುತ್ತೀರಿ ಈಗ ಪ್ರೈವೇಟ್‌ರವರು ಬರುತ್ತಾರೆ ಅಂದರೆ ಅವರು ಏತಕ್ಕೆ ಬರುತ್ತಾರೆ? ಬಂಡವಾಳಶಾಹಿ ಅಂದರೆ

ಸ್ವಂತ ಬಂಡವಾಳ ತೆಗೆದುಕೊಂಡು ಬಂದಿದ್ದರೆ ಮೆಚ್ಚಬಹುದಿತ್ತು ಸ್ವಂತ ಬಂಡವಾಳ ಇಲ್ಲ. ಕೃಷ್ಣ ಮೆನನ್ ಅವರು ಏನು ಹೇಳಿದ್ದಾರೆ ಅಂದರೆ ನಮ್ಮಲ್ಲಿ ಪಬ್ಲಿಕ್‌ಸೆಕ್ಟರ್, ಪ್ರೈವೇಟ್‌ಸೆಕ್ಟರ್ ಅಲ್ಲ, ಪ್ರೈವೇಟ್ ಸೆಕ್ಟರ್, ಪ್ರೈವೇಟ್ ಸೆಕ್ಟರ್ ಅಲ್ಲ ಎಂದು ಹೇಳಿದ್ದಾರೆ. ಪಬ್ಲಿಕ್ ಸೆಕ್ಟರ್‌ನಲ್ಲಿ ಕಂಟ್ರಾಕ್ಟರ್‌ನ್ನು ಹಿಡಿದುಕೊಂಡು ಮಾಡಿಸುತ್ತಾರೆ, ಪ್ರೈವೇಟ್ ಸೆಕ್ಟರ್‌ನಲ್ಲಿ ಸರ್ಕಾರದ ಬೆಂಬಲ, ಸರ್ಕಾರದ ಸಬ್ಸಿಡಿ, ಸರ್ಕಾರದ ಇನ್‌ವೆಸ್ಟ್‌ಮೆಂಟ್ ಬ್ಯಾಂಕ್ ದುಡ್ಡಿನಿಂದ ಮಾಡುತ್ತಾರೆ. ಈ ರೀತಿಯಾಗಿದೆ. ಇವರು ಏತಕ್ಕೆ ಬರುತ್ತಾರೆ, ನೀವು ಪ್ರೈವೇಟ್‌ನವರಿಗೆ ಕೊಡುತ್ತೀರಲ್ಲ ಒಬ್ಬರಾದರೂ ಕೈಗಾರಿಕೆ ಸುಸೂತ್ರವಾಗಿ ನಡೆಸುತ್ತಾರೆಯೋ? ಎಂದರೆ ಇಲ್ಲ. ಆನೆಯನ್ನು ನಿಯಂತ್ರಿಸಿ ಅದರಿಂದ ಇವೊತ್ತು ನಮ್ಮ ಉಪಯೋಗಕ್ಕೆ ಬಳಕೆಯಾಗುವುದಾದರೆ ಪರವಾಗಿಲ್ಲ ಅದೇ ಆನೆಯ ದಂತವನ್ನು ಕೊಯ್ದು ತೆಗೆದುಕೊಂಡು ಹೋಗುವುದಾದರೆ ಏನು ಪ್ರಯೋಜನ? ಕೆಲವು ಉದ್ಯಮಗಳನ್ನು ತೆಗೆದುಕೊಳ್ಳಲಿಕ್ಕೆ ಕಾರಣ ಏನು ಅಂದರೆ, ಅವರು ಈ ಉದ್ಯಮವನ್ನು ನಡೆಸಲಿಕ್ಕೆ ತೆಗೆದುಕೊಳ್ಳಲಿಲ್ಲ, ಈ ಉದ್ಯಮಗಳು ಇದ್ದಂಥ ಜಾಗ ಬಹಳ ಪ್ರಾಶಸ್ತ್ಯವಾದ ಭೂಮಿಯಾಗಿದ್ದರಿಂದ ಅದರ ಉಪಯೋಗ ಪಡೆಯಬೇಕಾಗಿತ್ತು. ಅದ ಕ್ಕೋಸ್ಕರ ಕೊಂಡುಕೊಂಡರು. ಅದಕ್ಕೋಸ್ಕರನಾನು ಏನು ಹೇಳುತ್ತೇನೆಂದರೆ, ಈ ಆನೆಗಳನ್ನು ನಿಯಂತ್ರಣ ಮಾಡತಕ್ಕ ಶಕ್ತಿಯನ್ನು ಕೋರಿಸಿ ಅವುಗಳನ್ನು ಸಾಯಿಸುವ ಪ್ರಯತ್ನ ಆದರೆ ಕಷ್ಟವಾಗುತ್ತದೆ. ಅವುಗಳು ಸತ್ತುಹೋದ ಮೇಲೆ ಏನು ಮಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದ ಈ ಬಗ್ಗೆ ತಾವು ಎಚ್ಚರಿಕೆ ವಹಿಸಿ ಕೆಲಸ ಮಾಡಬೇಕೆಂದುಹೇಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.— ಆನೆಗೆ ಅಂಕುಶ ಹಾಕುವುದು ನಿಜ ಆದರೆ ಆ ಆನೆಗೆ ಹುಚ್ಚು ಆನೆ ಆದರೆ ಹೇಗೆ ಸಾಕುವುದು.

ಶ್ರೀ ಜೆ. ಹೆಚ್. ಪಾಟೀಲ್.— ಮಾನ್ಯ ಸದಸ್ಯರು ಈ ಪ್ಲಾಂಟ್‌ಗಳ ಬಗ್ಗೆ ಹೇಳಿದ್ದಾರೆ. ಅದರ ಜೊತೆಗೆ ಅಧಿಕಾರಿಗಳು ಬರೆದುಕೊಟ್ಟ ಹಾಗೆ ಹೇಳುತ್ತೀರಿ ಎಂದು ಹೇಳಿದ್ದಾರೆ. ಅವರು ಸಹ ಮಂತ್ರಿಗಳಾಗಿದ್ದರು. ಅವರು ಯಾವುದೇ ಫ್ಯಾಕ್ಟರಿಗೆ ಹೋಗಿ ಬಂದಿದ್ದು ನೋಡಲಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಅಧ್ಯಕ್ಷರೇ, ನಾನು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಡಬೇಕಾದರೆ ಸಂದರ್ಭ ಬಂದಾಗ ಅಧಿಕಾರಿಗಳು ಕೊಟ್ಟ ಸ್ಟೇಟ್‌ಮೆಂಟ್ ಕಾಪಿಯನ್ನು ಇದೇ ಸದನದಲ್ಲಿ ತೆಗೆದು ಬಿಸಾಕಿ ನಾನೇ ಖುದ್ದು ಹೋಗಿ ನೋಡಿಕೊಂಡು ಬಂದಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್.— ನನಗೂ ಸಹ ಫ್ಯಾಕ್ಟರಿ ಬಗ್ಗೆ ಮಾಹಿತಿ ಇದೆ. ಆದರೆ ಪ್ರತಿಯೊಂದು ನೆಟ್ಟು ಬೋಲ್ಟು ಎಲ್ಲಿದೆ ಎಂದು ನೋಡಿಕೊಂಡು ಬರಲೇನು? ಪಾರ್ಲಿಮೆಂಟರಿ ಪ್ರಾಕ್ಟೀಸ್ ಏನು ಎಂದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಮಾನ್ಯ ಸದಸ್ಯರು ಹೇಳುವಾಗ. ಒಂದು ಮಾತನ್ನುಹೇಳಿದರು. ಕಿನ್ನರಿ ಬಾರಿಸಿದರು ಎಂದು ಹೇಳಿದರು. ಯಾರ ಮುಂದೆ ಏನು ಬಾರಿಸಿದರು ಎಂದು ಈಗ ಹೇಳಿದರೆ ಒಳ್ಳೆಯದು. ಯಾರ ಮುಂದೆ ಬಾರಿಸಿದರೂ ಗೊತ್ತಾಗಲಿಲ್ಲ, ನಾನು ಆ ಕಡೆ ಈ ಕಡೆ ನೋಡಿದೆ. ಕಾಣಿಸಲಿಲ್ಲ. ನಿಮಗೆ ನೀವೇ ಬಾರಿಸಿಕೊಂಡಿರೋ ಏನೋ ಗೊತ್ತಾಗಲಿಲ್ಲ. ಈಗಿನ ನಮ್ಮ ಮುಖ್ಯಮಂತ್ರಿಗಳು ಅವರನ್ನು ಕರೆದುಕೊಂಡು ಬಂದರು ಅಂಥ ಅವರು ಹೇಳಿದರು ಅದು ನನಗೆ ಗೊತ್ತಿಲ್ಲ. ಆಗ ಅಡ್ವೈಸ್ ಮಾಡಿದವರು ಇವರೇ ಇರಬೇಕು.

ಶ್ರೀ ಕೆ.ಹೆಚ್. ಶ್ರೀನಿವಾಸ್.-- ನಾವು ಬಿಟ್ಟು ಬಂದೆವು. ನೀವು ಸೇರಿಸಿಕೊಂಡಿರಿ

ಶ್ರೀ ಎಸ್. ಕೆ. ಕಾಂತ.-- ಸರ್ಕಾರಿ ಕ್ಷೇತ್ರದಲ್ಲಿರತಕ್ಕ ಫ್ಯಾಕ್ಟರಿಗಳು ಏನಿವೆ ಅಲ್ಲಿತಾಂತ್ರಿಕ ಜ್ಞಾನ ಪಡೆದಿರ ತಕ್ಕಂಥ ಅಧಿಕಾರಿಗಳಿಗೆ ಈ ಐಎಎಸ್ ಆಫೀಸರ್‌ರವರಿಗೂ ಮಿಲನ ಇರುವುದಿಲ್ಲ. ಅಧಿಕಾರ ನಡೆಸತಕ್ಕವರು ಐಎಎಸ್ ಅಧಿಕಾರಿಗಳು. ಇವರು ಏನು ಹೇಳುತ್ತಾರೆ ಅಂದರೆ, ನಾವು ಪ್ರೊಡಕ್ಷನ್ ಮಾಡುತ್ತೇವೆ. ನಾವೆಲ್ಲಾ ತಾಂತ್ರಿಕ ವಲಯದಲ್ಲಿ ಪರಿಣಿತೆ ಇದ್ದವರು. ನಮ್ಮ ಮೇಲೆ ಅವರನ್ನು ತಂದು ಕೂರಿಸಿದ್ದೀರಿ ಎಂದು ಹೇಳುತ್ತಾರೆ. ಈಗ ಏನಾಗಿದೆ ಅವರಲ್ಲಿ ಟೀಮ್ ವರ್ಕ್ ಇರುವುದಿಲ್ಲ. ಆದ್ದರಿಂದ ಹೆಚ್ಚಿಗೆ ಪಬ್ಲಿಕ್ ಅಂಡರ್ಟೇಕಿಂಗ್ಸ್‌ನಲ್ಲಿ ಲಾಸ್ ಆಗುತ್ತದೆ. ಅದರ ಬಗ್ಗೆ ಹೇಗೆ ಮಾಡುತ್ತೀರಾ ಎನ್ನುವುದನ್ನು ಹೇಳಬೇಕು ಮತ್ತೊಂದು ವಿಚಾರ ಹೇಳಬೇಕೆಂದರೆ ಕೆಲವು ಸಕ್ಕರೆ ಕಾರ್ಖಾನೆಗಳು ಇವೆ ಅವುಗಳಿಂದ ನಮ್ಮ ರೈತರಿಗೆ ಸಹಾಯ ಆಗಬೇಕು. ಹಾಗೆಯೇ ಕನ್‌ಸ್ಯೂಮರ್‌ಗೂ ಸಹಾಯ ಆಗಬೇಕು ಫ್ಯಾಕ್ಟರಿಗಳ ವಿಷಯ ಮಾತನಾಡುವಾಗ ಫ್ಯಾಕ್ಟರಿಗಳು ಸಾಯತಕ್ಕ ಪರಿಸ್ಥಿತಿ ಬಂದರೆ ಪ್ರೈವೇಟ್‌ನವ

ರಿಗೆ ಕೊಟ್ಟುಬಿಡುತ್ತೇವೆ ಎನ್ನುವ ವಿಚಾರ ಬಂತು. ನಾನು ಕಳಕಳಿಯಿಂದ ಕೇಳಿಕೊಳ್ಳುವುದು ಇಷ್ಟೇ ಈಗ ನಡೆಯುತ್ತಿರತಕ್ಕ ಫ್ಯಾಕ್ಟರಿ ಅದು ಕೇಂದ್ರ ಸರ್ಕಾರದ ನೀತಿಯಿಂದ ತಪ್ಪು ಆಗಿರಬಹುದು ಅಥವಾ ಬೇರೆ ಯಾವುದೇ ಕಾರಣದಿಂದ ಸಿಕ್ ಆಗಿರಬಹುದು. ಅಂಥ ಫ್ಯಾಕ್ಟರಿಗಳನ್ನು ಯಾವುದೇ ಕಾರಣದಿಂದ ಪ್ರೈವೇಟ್‌ನವರಿಗೆ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ ಇನ್ನು ಎನ್‌ಜಿಎಫ್‌ನಲ್ಲಿ ಮೋಟಾರ್‌ಗಳು ತಯಾರಾಗುತ್ತವೆ, ಇದರಲ್ಲಿ ೩೦ರಿಂದ ೪೦ ಪರ್ಸೆಂಟ್‌ವರೆಗೆ ಕಮಿಷನ್ ಕೊಡುತ್ತಾರೆ ಈಗ ನಮ್ಮ ರೈತರಿಗೆ ಎನ್‌ಜಿಎಫ್ ಫ್ಯಾಕ್ಟರಿಯು ಮುಂದೆ ಆ ಮೋಟಾರ್‌ಗಳನ್ನು ಖರೀದಿ ಮಾಡಲಿಕ್ಕೆ ಅವಕಾಶ ಕೊಟ್ಟು ೩೦-೪೦ ಪರ್ಸೆಂಟ್ ಕಮಿಷನ್ ಏನು ಇವರು ಕೊಡಬೇಕಾಗಿದೆ ಅದನ್ನು ಉಳಿಸುವುದಕ್ಕೆ ಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.— ಅಧ್ಯಕ್ಷರೇ, ನಾನು ಪುನಃ ಅದನ್ನೇ ಹೇಳಬೇಕಾಗಿದೆ. ಪ್ರೈವೇಟ್ ಸೆಕ್ಟರ್ ಮತ್ತು ಪಬ್ಲಿಕ್ ಸೆಕ್ಟರ್ ಬಗ್ಗೆ ನನ್ನ ಕಲ್ಪನೆ ಏನು ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರಿಗೆ ಇನ್ನೂ ಅನುಮಾನ ಏತಕ್ಕೆ ಉಳಿದಿದೆ ಎಂದು ಗೊತ್ತಿಲ್ಲ. ಅಧಿಕಾರಿಗಳು ಮತ್ತು ತಂತ್ರಜ್ಞರ ಬಗ್ಗೆ ಹೇಳಿದ್ದಾರೆ. ಈ ಒಂದು ಬಗ್ಗೆ ಒಂದು ಸ್ಪೆಷಲ್ ಕೇಡರ್ ಮಾಡಲಿಕ್ಕೆ ಸಾಧ್ಯವೇ ಎಂದು ಆಲೋಚನೆ ಮಾಡುತ್ತಿದ್ದೇವೆ. ಈಗಾಗಲೇ ಮಹಾರಾಷ್ಟ್ರದಲ್ಲಿ ಶುಗರ್ ಇಂಡಸ್ಟ್ರೀಸ್‌ನಲ್ಲಿ ಈ ತರಹ ಮಾಡಿದ್ದಾರೆಂದು ಕೇಳಿದ್ದೇನೆ. ಅದನ್ನು ತರಿಸಿನೋಡಿ ಮಾಡುತ್ತೇನೆ.

ಇನ್ನು ಎನ್.ಜಿ.ಇ.ಎಫ್. ವಿಷಯ ಅದು ನನ್ನ ಗಮನಕ್ಕೆ ಬಂದರೆ ವಿಚಾರ ಮಾಡುತ್ತೇನೆ.

ಶ್ರೀ ಜಿ. ಚಂದ್ರಕಾಂತ ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಮಂತ್ರಿಗಳು ಸಾಕಷ್ಟು ಇದರಲ್ಲಿ ಪರಿಣಿತಿಯನ್ನು ಪಡೆದಿದ್ದಾರೆ. ಒಂದು ಸರಿಯಾದಂಥ ದಿಶೆಯಲ್ಲಿ ಈ ಉದ್ಯಮವನ್ನು ಒಯ್ಯಬೇಕು ಎಂಬ ಒಂದು ದೃಷ್ಟಿಕೋನವನ್ನು ಇಟ್ಟುಕೊಂಡಿದ್ದಾರೆ. ಅದರಲ್ಲಿ ಯಾವ ತರಹದ ಸಂಶಯವೂ ಇಲ್ಲ. ಇವತ್ತಿನ ದಿವಸ ನಮ್ಮ ರಾಷ್ಟ್ರವೇ ಆಗಲೀ, ರಾಜ್ಯವೇ ಆಗಲೀ, ದೂರದೃಷ್ಟಿಯನ್ನು ಇಟ್ಟುಕೊಳ್ಳದೇ ಅನೇಕ ದೊಡ್ಡ ಗಂಡಾಂತರಗಳನ್ನು ಮಾಡಲಾಗಿದೆ. ನಮ್ಮ ರಾಷ್ಟ್ರದಲ್ಲಿ ಯಾರಾದರೂ ಮತ್ತು ಯಾವ ಮಲ್ಟಿ ನ್ಯಾಷನಲ್ ಕಂಪನಿಗಳೇ ಬಂದರೂ ಅವರು ಇಲ್ಲಿ ಬಂಡವಾಳವನ್ನು ಹೂಡಿ ಉದ್ಯಮಗಳನ್ನು ಸ್ಥಾಪಿಸುತ್ತಿದ್ದಾರೆ. ಅದೇ ಪ್ರಕಾರವಾಗಿ ನಮ್ಮ ರಾಜ್ಯದಲ್ಲಿಯೂ ಸಹ ಬೇರೆ ಬೇರೆ ರಾಜ್ಯಗಳಲ್ಲಿರತಕ್ಕ ದೊಡ್ಡ ದೊಡ್ಡ ಕಂಪನಿಗಳವರು ಇಲ್ಲಿಗೆ ಬಂದು ಬಂಡವಾಳವನ್ನು ಹೂಡಿ ಕಂಪನಿಗಳನ್ನು ಸ್ಥಾಪಿಸುತ್ತಿದ್ದಾರೆ. ಹೀಗಾಗಿ ನಮ್ಮಲ್ಲಿ ಇರತಕ್ಕಂಥ ಪರಿಣಿತರಿಗೆ ಉದ್ಯೋಗಗಳು ಸಿಕ್ಕದೆ ತೊಂದರೆಯಾಗುತ್ತಿದೆ. ಈ ದೃಷ್ಟಿಯಲ್ಲಿ ತಾವು ಏನು ಯೋಜನೆಯನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ಹೇಳಬೇಕು. ಎರಡನೆಯದಾಗಿ ಈಗ ನಮ್ಮಲ್ಲಿ ದೊಡ್ಡ ದೊಡ್ಡ ಉದ್ಯಮಗಳು ಇವೆ. ಆ ಉದ್ಯಮಗಳು ಇವರಿಗೆ ಬೇಕಾದಂತಹ ಬಿಡಿ ಭಾಗಗಳನ್ನು ಬೇರೆ ಬೇರೆ ರಾಜ್ಯಗಳಿಂದ ತರಿಸಿ ಕೊಳ್ಳುತ್ತಿದ್ದಾರೆ. ಆದ್ದರಿಂದ ಅದನ್ನು ತಡೆಗಟ್ಟಿ ನಮ್ಮ ರಾಜ್ಯದಲ್ಲಿರತಕ್ಕಂಥ ಚಿಕ್ಕಪುಟ್ಟ ಉದ್ದಿಮೆದಾರರಿಗೆ ಮಾಡಬೇಕು. ಮೂರನೆಯದಾಗಿ ಈಗ ತಾಲ್ಲೂಕು ಮಟ್ಟದಿಂದ ಹೆಚ್ಚಿನ ಪ್ರಮಾಣ ದಲ್ಲಿ ಕೈಗಾರಿಕೆಗಳು ಬೆಳೆಯಬೇಕಾಗಿದ್ದರೆ ಅದಕ್ಕೆ ಬೇಕಾದ ಷೆಡ್ಡುಗಳು, ನಿವೇಶನಗಳು ಹೆಚ್ಚಿನ ಸಂಖ್ಯೆ ಯಲ್ಲಿ ಬೆಳೆಯುವಂತಹ ಗುರಿಯನ್ನು ಇಟ್ಟುಕೊಳ್ಳಬೇಕು. ಡಾ. ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರು ಏನು ಇದೆ. ಅದಕ್ಕೆ ಒಂದು ದೊಡ್ಡ ಹಿನ್ನೆಲೆ ಇದೆ. ಅವರ ಯೋಜನೆಗಳೇನಿದ್ದವು ಅದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಆದರೆ ಇವತ್ತು ನಮ್ಮ ಜನರಿಗೆ ಅವಕಾಶ ಸಿಕ್ಕದೇ ಇರುವುದರಿಂದ ಅನ್ಯಾಯವಾಗುತ್ತಿದೆ. ಇದನ್ನು ಸರಿಪಡಿಸುವುದಕ್ಕೆ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಯಬಯಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರು ಹೇಳಿರುವಂಥದ್ದನ್ನು ನಾನು ಒಪ್ಪುತ್ತೇನೆ. ನಮ್ಮ ಕರ್ನಾಟಕ ರಾಜ್ಯ, ಕೈಗಾರಿಕಾ ಪ್ರಪಂಚದಲ್ಲಿ ಯಾವುದೇ ಕಾರಣದಿಂದ ಹಿಂದೆ ಬೀಳಬಾರದು, ಅದು ಹಿಂದೆ ಯಾವ ಪ್ರಶಸ್ತ ಸ್ಥಾನದಲ್ಲಿ ಇತ್ತೋ, ಆ ಸ್ಥಾನಕ್ಕೆ ಅದು ಹೋಗಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ :

"೩೧-೩-೧೯೮೬ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯು ಸಂಖ್ಯೆ ೫, ೭, ೮ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನು ದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಪುನರ್ ನಮೂದಿಸಲಾಗಿದೆ.)

ಬೇಡಿಕೆ ಸಂಖ್ಯೆ 5—ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳಿಗೆ (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೬,೬೯,೨೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯,೯೩,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು,

ಬೇಡಿಕೆ ಸಂಖ್ಯೆ 7—ಚಿಕ್ಕಪುಟ್ಟ ಉದ್ಯಮಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೮,೫೪,೨೩.೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭,೬೫,೫೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಬೇಡಿಕೆ ಸಂಖ್ಯೆ 8—ರೇಷ್ಮೆ ವ್ಯವಸಾಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೫,೭೧,೮೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೬೧,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು"

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

೯೮೦. ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

(ಅ) ಬಿಜಾಪುರ ನಗರದಲ್ಲಿ ೧೯೮೧-೮೨ ರಲ್ಲಿ ೮೬.೧೦ ಲಕ್ಷ ರೂಪಾಯಿಗಳ ಕುಡಿಯುವ ನೀರಿನ ಜಲಾಶಯವನ್ನು ಎತ್ತರಿಸುವ ಯೋಜನೆಯನ್ನು ಮಂಜೂರು ಮಾಡಿದ್ದುದು ನಿಜವಲ್ಲವೆ ;

(ಆ) ಹಾಗಿದ್ದಲ್ಲಿ ಸದರಿ ಯೋಜನೆಯನ್ನು ಇದುವರೆವಿಗೂ ಕಾರ್ಯಗತಗೊಳಿಸದಿರುವುದಕ್ಕೆ ಕಾರಣವೇನು ;